ಲಂಕೇಶ್

ಮಾರ್ಚ್ 10, 2010 ರೂ. 12/-

ಗೋಹತ್ಯೆ ಮತ್ತು ಗೋಮುಖ ವ್ಯಾಘ್ರಗಳು




ಹಂಪಿ ಕನ್ನಡ ವಿವಿಗೆ ಕಳ್ಳರ ಕೈ

ಈಗ ಈಶ್ವರಿಯೇ ಸೂಪರ್ ಸಿಎಂ!

ರಾಜಶೇಖರ ಹತ್ಯೆ ಸುಪಾರಿ ಕೊಟ್ಟಿದ್ದು ಕಾಟನ್‌ಪೇಟೆ ಪುಷ್ಪ?



ಎಸ್.ಐ. ಸುಷ್ಮಾ ಸಾವಿನ ಮರ್ಮ?



ಅಗ್ನಿ ದಿವ್ಯದಲ್ಲಿ ಮಿಂದ ಸಚಿನ್

ಸಾಹಿತ್ಯ ಅಕಾಡೆಮಿ

ಲಂಕೇಶ್ ವಾರ ಪತ್ರಿಕೆ

ಲಂಕೇಶ್-75

ಮಾರ್ಚ್ 6 ಮತ್ತು 7, 2010, ಸೆನೆಟ್ ಹಾಲ್, ಬೆಂಗಳೂರು

ಮಾರ್ಚ್ 6, 2010

ಉದ್ಘಾಟನಾ ಸಮಾರಂಭ
10 ಗಂಟೆಗೆ

ಸ್ವಾಗತ ಭಾಷಣ	:	ಎಸ್. ಗುಣಸೇಕರನ್, ಪ್ರಾದೇಶಿಕ ಕಾರ್ಯದರ್ಶಿ, ದಕ್ಷಿಣ ಪ್ರಾದೇಶಿಕ ಕಚೇರಿ, ಸಾಹಿತ್ಯ ಅಕಾಡೆಮಿ
ಪ್ರಾಸ್ತಾವಿಕ ಭಾಷಣ	:	ಗೌರಿ ಲಂಕೇಶ್
ಉದ್ಘಾಟನೆ	:	ವೈದೇಹಿ
ಅಧ್ಯಕ್ಷತೆ	:	ಕಿ.ರಂ. ನಾಗರಾಜ

ಗೋಷ್ಠಿ 1– 12 ಗಂಟೆಗೆ

ಲಂಕೇಶ್ ಮತ್ತು ಕನ್ನಡ ಸಾಹಿತ್ಯ ಪರಂಪರೆ– 1

ಲಂಕೇಶ್ ಮತ್ತು ಕಾವ್ಯ	:	ಬಂಜಗೆರೆ ಜಯಪ್ರಕಾಶ
ಲಂಕೇಶ್ ಮತ್ತು ವಿಮರ್ಶೆ	:	ರಹಮತ್ ತರೀಕೆರೆ
ಲಂಕೇಶ್ ಮತ್ತು ಸಣ್ಣಕತೆ	:	ಎಂ.ಎಸ್. ಆಶಾದೇವಿ
ಅಧ್ಯಕ್ಷತೆ	:	ಕೆ. ಮರುಳಸಿದ್ದಪ್ಪ

ಗೋಷ್ಠಿ 2– 2:30 ಗಂಟೆಗೆ


ಲಂಕೇಶ್ ಮತ್ತು ಕನ್ನಡ ಸಾಹಿತ್ಯ ಪರಂಪರೆ– 2

ಲಂಕೇಶ್ ಮತ್ತು ಕಾದಂಬರಿ	:	ವಿ.ಎಸ್. ಶ್ರೀಧರ
ಲಂಕೇಶ್ ಮತ್ತು ನಾಟಕ	:	ರಘುನಂದನ
ಲಂಕೇಶ್ ಅವರ ಸಾಹಿತ್ಯಕ ಬರಹಗಳು	:	ಪಟ್ಟಾಭಿರಾಮ ಸೋಮಯಾಜಿ
ಅಧ್ಯಕ್ಷತೆ	:	ಫಕೀರ್ ಮೊಹಮ್ಮದ್ ಕಟ್ಪಾಡಿ

ಗೋಷ್ಠಿ 3– 4:30 ಗಂಟೆಗೆ

ಲಂಕೇಶ್ ಮತ್ತು ನಾನು

ಬಿ. ಚಂದ್ರೇಗೌಡ, ಕೆ. ಅಕ್ಷತಾ, ಸರ್ಜಾ ಶಂಕರ್
ಅಧ್ಯಕ್ಷತೆ: ಕೋಟಿಗಾನಹಳ್ಳಿ ರಾಮಯ್ಯ



ಮಾರ್ಚ್ 7, 2010

ಗೋಷ್ಠಿ 4– 10:00 ಗಂಟೆಗೆ

ಲಂಕೇಶ್ ಬಗ್ಗೆ ಕೆಲವು ಅನಿಸಿಕೆಗಳು

ಎಸ್.ವೈ. ಗುರುಶಾಂತ್
ಸುಬ್ಬು ಹೊಲೆಯಾರ್
ಪಾರ್ವತೀಶ
ಅಧ್ಯಕ್ಷತೆ: ಜಿ. ರಾಜಶೇಖರ

ಗೋಷ್ಠಿ 5– ಮಧ್ಯಾಹ್ನ 12 ಗಂಟೆಗೆ

ಲಂಕೇಶ್ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು

ವಿರೋಧ ಪಕ್ಷವಾಗಿ ಲಂಕೇಶ್	: ದಿನೇಶ್ ಅಮೀನ್‌ಮಟ್ಟು
ಲಂಕೇಶ್ ಅವರ ರಾಜಕೀಯ ಚಿಂತನೆ	: ಕೆ. ಫಣಿರಾಜ್
ದಮನಿತರ ದನಿಯಾಗಿ ಲಂಕೇಶ್	: ಬಿ.ಎಂ. ಬಷೀರ್
ಅಧ್ಯಕ್ಷತೆ	: ಎಚ್.ಎಲ್. ಕೇಶವಮೂರ್ತಿ

ಗೋಷ್ಠಿ 6– 2:30 ಗಂಟೆಗೆ

ಲಂಕೇಶ್ ಮತ್ತು ಸಮಕಾಲೀನ ಸವಾಲುಗಳು

ಪ್ರಸ್ತುತ ರಾಜಕೀಯ	: ಎ.ಕೆ. ಸುಬ್ಬಯ್ಯ
ಪ್ರಸ್ತುತ ಚಳವಳಿಗಳು	: ಡಾ. ವಾಸು
ಕೋಮುವಾದ ಮತ್ತು ಜಾಗತೀಕರಣ	: ಬಿ.ಎಂ. ಪುಟ್ಟಯ್ಯ
ಅಧ್ಯಕ್ಷತೆ	: ಜಿ. ರಾಮಕೃಷ್ಣ

ಸಮಾರೋಪ ಸಮಾರಂಭ– 4:00 ಗಂಟೆಗೆ

ಸಮಾರೋಪ ಭಾಷಣ	:	ದೇವನೂರು ಮಹಾದೇವ
ಮುಖ್ಯ ಅತಿಥಿ	:	ಎನ್.ಎಂ. ಬಿರಾದಾರ್
ಅಧ್ಯಕ್ಷತೆ	:	ಗೌರಿ ಲಂಕೇಶ್
ವಂದನಾರ್ಪಣೆ	:	ಪಾರ್ವತೀಶ

ಕ ವಿ ಗೋ ಷ್ಠಿ

ಮಾರ್ಚ್ 6, 2010, ಸಂಜೆ 5:30ಕ್ಕೆ
ಕವನಗಳನ್ನು ವಾಚಿಸುವವರು:
ವಿನಯಾ, ಬಾಗೇಶ್ರೀ, ಅಕ್ಷತಾ, ಬಿ.ಶ್ರೀನಿವಾಸ್, ಸುಬ್ಬು ಹೊಲೆಯಾರ್, ಎಸ್. ಮಂಜುನಾಥ್, ರಂಗನಾಥ ಕಂಟನಕುಂಟೆ, ಟಿ.ಎಸ್. ಸೀತಾರಾಮ್, ಕಿ.ರಂ. ನಾಗರಾಜ, ವೈದೇಹಿ, ಜ್ಯೋತಿ ಗುರುಪ್ರಸಾದ್, ವೀರಣ್ಣ ಮಡಿವಾಳರ, ಕೈದಾಳ್ ಕೃಷ್ಣಮೂರ್ತಿ, ಆರೀಫ್ ರಾಜಾ, ಕೆ. ಶರೀಫಾ, ಶಿವಸುಂದರ್, ಪೀರ್ ಭಾಷಾ
ಅಧ್ಯಕ್ಷತೆ : ಚಂಪಾ

ಮಾರ್ಚ್ 7, 2010, ಸಂಜೆ 5:00ಕ್ಕೆ
ಅತ್ಯುತ್ತಮ ರಾಷ್ಟ್ರೀಯ ಚೊಚ್ಚಲ ನಿರ್ದೇಶನಕ್ಕಾಗಿ ಕವಿತಾ ಲಂಕೇಶ್ ಸ್ಥಾಪಿಸಿರುವ

ಲಂಕೇಶ್ ಚಿತ್ರ ಪ್ರಶಸ್ತಿ

ರಾಷ್ಟ್ರ ಪ್ರಶಸ್ತಿ ವಿಜೇತ ನಟ ಪ್ರಕಾಶ್ ರೈ ಅವರಿಂದ ವಿತರಣೆ

ಪ್ರಶಸ್ತಿ ವಿಜೇತ ಚಿತ್ರ ಪ್ರದರ್ಶನ

ಪ್ರಶಸ್ತಿ ವಿತರಣೆ– 5:00 ಗಂಟೆಗೆ
ಚಿತ್ರ ಪ್ರದರ್ಶನ– 6:00 ಗಂಟೆಗೆ

[ನ]ಾನೂ ಗೋವುಗಳನ್ನು ಸಾಕಿದೆ, ಮಾರಿದೆ



ಕಂಡಹಾಗೆ

ಗೌರಿ ಲಂಕೇಶ್

[ಖ]ಂಡಿತವಾಗಿಯೂ ನಾನು ಸಸ್ಯಾಹಾರಿ ಅಲ್ಲ. ಕೋಳಿ, [...]ಆಡು, ಮೀನು, ಕಡಲ ಮೀನು, ಆಕ್ಟೋಪಸ್ [...]ಮೊಲದ ಮಾಂಸವನ್ನೂ ತಿಂದಿದ್ದೇನೆ. ಹಲವಾರು [...]ಳ ಕಾಲ ನಮ್ಮ ಮುಸಲ್ಮಾನ್ ಬಾಂಧವರ ಮನ [...]ನಸಬಾರದೆಂದು ಹಂದಿ ಮಾಂಸವನ್ನು ತಿಂದಿರಲಿಲ್ಲ. [...]ನನ್ನ ಕೆಲ ಒಕ್ಕಲಿಗ ಮಿತ್ರರು ಅದು ತುಂಬಾ [...]ರುತ್ತದೆ ಎಂದು ಒತ್ತಾಯಿಸಿದ್ದರಿಂದ ಒಂದೆರಡು [...] ಅದನ್ನೂ ತಿಂದಿದ್ದೇನೆ.

[...]ವರೆ ನಾನು ಇಲ್ಲಿಯುವರೆಗೂ ಎಂದೂ [...]ಮಾಂಸವನ್ನು ತಿಂದಿಲ್ಲ. ಅದಕ್ಕೆ ಕಾರಣ ಗೋವು [...] ಎಂಬ ನಂಬಿಕೆ ನನ್ನಲ್ಲಿದೆಯೆಂದಲ್ಲ. ಬದಲಾಗಿ [...]ೋ ಹಸುವನ್ನು ನೋಡಿದರೆ 'ಛೆ, ಪಾಪ' ಅನ್ನಿಸುತ್ತೆ. [...]ದರೆ ಕೋಳಿ, ಕುರಿ ಇತ್ಯಾದಿಗಳು ಏನು ಪಾಪ [...]ದ್ದವು ಎಂಬ ಪ್ರಶ್ನೆಯನ್ನು ಹಲವಾರು ಬಾರಿ [...]ಕೊಂಡಿದ್ದೇನೆ. ಆದರೆ ಉತ್ತರ ಸಿಗದೆ ನನ್ನೊಳಗಿನ [...]ಗಳಲ್ಲಿ ಇದೂ ಒಂದು ಎಂದು ಭಾವಿಸಿ [...]ದ್ದೇನೆ. ಒಂದಂತೂ ಸ್ಪಷ್ಟ. "ನಾನೆಂದೂ ಗೋ[...] ತಿನ್ನುವುದೇ ಇಲ್ಲ" ಎಂದು ಶಪಥಗೈಯಲಾರೆ. [...] ಸಂದರ್ಭ ಎದುರಾದರೆ ಖಂಡಿತವಾಗಿಯೂ [...]ನೆ.

[...]ಲ್ಲಿ ಹೇಳಲು ಹೊರಟಿರುವುದು ಏನೆಂದರೆ ನಾನು [...]ಮಾಂಸವನ್ನು ತಿನ್ನಲೇಬೇಕೆಂದಾಗಲಿ, ಅಥವಾ [...]ಸಾಹಾರವನ್ನು ತಿರಸ್ಕರಿಸಿ ಸಸ್ಯಾಹಾರಿ [...]ಕೆಂದಾಗಲಿ ನನ್ನ ಮೇಲೆ ಒತ್ತಡ ಹೇರುವ ಹಕ್ಕು [...]ೂ ಇಲ್ಲ. ಹಾಗೆಯೇ ಇತರರು ಏನನ್ನು ತಿನ್ನಬೇಕು, [...] ತಿನ್ನಬಾರದು ಎಂದು ಹೇಳುವ ಹಕ್ಕು ಕೂಡ [...]ಲಿ, ಇತರರಿಗಾಗಲಿ, ಅದರಲ್ಲೂ ಜಾತ್ಯತೀತ [...]ನದ ಅಡಿ ಅಧಿಕಾರದಲ್ಲಿರುವ ಒಂದು ರಾಜಕೀಯ [...]ೂ ಇಲ್ಲವೇ ಇಲ್ಲ. ಆದರೆ ಬಿಜೆಪಿಯ ದುಷ್ಟರಿಗೆ [...] ಸೂಕ್ಷ್ಮತೆ ಅರ್ಥವಾಗುವುದಿಲ್ಲ.

[...]ನಮ್ಮ ದೇಶದಲ್ಲಿ ಆಹಾರ ಪದ್ಧತಿಗಳು [...]ಮಯವಾಗಿದೆಯಲ್ಲದೆ, ಆಯಾ ಜಾತಿ, ಧರ್ಮ, [...]ದಾಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು [...]ಬಿಸಿರುವಂತಹದ್ದು. ಉದಾಹರಣೆಗೆ ಬೆಳ್ಳುಳ್ಳಿ ಇಲ್ಲದ [...]ಮತರ, ಇಂಗು ಇಲ್ಲದ ಬ್ರಾಹ್ಮಣರ ಅಡುಗೆ [...]ವನ್ನು, ಸಂಪೂರ್ಣ ಸಸ್ಯಾಹಾರಿಗಳಾದ ಒಕ್ಕಲಿಗ, [...]ಕ್ರಿಶ್ಚಿಯನ್ ಮತ್ತು ಮುಸಲ್ಮಾನ್ ಕುಟುಂಬಗಳನ್ನು [...]ವುದು ಕಷ್ಟ. ಹಾಗೆಯೇ ನಮ್ಮ ಕರಾವಳಿ ಮತ್ತು [...]ಬಂಗಾಳದ ಬ್ರಾಹ್ಮಣರು ಮತ್ಸ್ಯವನ್ನು 'ಸಮುದ್ರದ [...]'ಎಂದೇ ಭಾವಿಸಿ ಅದನ್ನು ತಿನ್ನುತ್ತಾರಾದರೂ ಕೆಲ [...]ರು ಈರುಳ್ಳಿಯನ್ನೂ ಮುಟ್ಟುವುದಿಲ್ಲ. ಇದೆಲ್ಲ ಅವರವರ ಸಂಪ್ರದಾಯ, ನಾಲಿಗೆಯ ರುಚಿ ಮತ್ತು ರೂಢಿ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅವಲಂಬಿಸಿದ್ದು. ಹೀಗಿರುವಾಗ ಯಾರೋ ಮೊಟ್ಟೆ ತಿನ್ನಬಾರದು, ಮತ್ತ್ಯಾರೋ ತಮ್ಮ ಕೈಗೆ ಎಟುಕುವಂತಹ ಮಾಂಸವನ್ನೂ ತಿನ್ನಬಾರದು ಎಂದೆಲ್ಲ ಕಾನೂನು ಮಾಡುವುದು ಅವಿವೇಕತನದ ಪರಮಾವಧಿ ಆಗುತ್ತದೆ.

ಈಗಾಗಲೇ ಯಡಿಯೂರಪ್ಪನ 'ಬ್ರಾಹ್ಮಣಶಾಹಿ' ಸರ್ಕಾರ ಜಾರಿಗೆ ತರಲು ಇಚ್ಛಿಸಿರುವ ಗೋಹತ್ಯೆ ನಿಷೇಧ ಕಾನೂನನ್ನು ಕುರಿತಂತೆ ನಿಮ್ಮ ಈ ಪತ್ರಿಕೆ ಮತ್ತು ಇತರೆ ಮಾಧ್ಯಮಗಳು ಬಹಳಷ್ಟು ಚರ್ಚಿಸಿವೆ. ಆದರೆ ಎಲ್ಲ ಚರ್ಚೆಗಳೂ ಆಹಾರ ಸಂಸ ತಿ, ಸಂವಿಧಾನ, ಆರ್ಥಿಕ ಪರಿಸ್ಥಿತಿ, ವೈಯಕ್ತಿಕ ಆಯ್ಕೆ ಇತ್ಯಾದಿಗಳ ಸುತ್ತ ನಡೆದಿವೆ.

ಆದ್ದರಿಂದ ನಾನಿಲ್ಲಿ ರೈತರ ದೃಷ್ಟಿಕೋನದಿಂದ ಮತ್ತು ವೈಯಕ್ತಿಕ ಅನುಭವದಿಂದ ಈ ವಿಷಯವನ್ನು ನೋಡುತ್ತೇನೆ. ನೆಲಮಂಗಲದ ಹತ್ತಿರವಿರುವ ಅಮ್ಮನ ತೋಟದ ಜವಾಬ್ದಾರಿಯನ್ನು ಐದಾರು ವರ್ಷಗಳ ಹಿಂದೆ ವಹಿಸಿಕೊಂಡಾಗ ತೋಟದೊಂದಿಗೆ ಒಂದು ಜೊತೆ ಎತ್ತು ಬಂದಿದ್ದವು.

ಎರಡು ವರ್ಷಗಳ ಹಿಂದೆ ತೋಟವನ್ನು ನೋಡಿಕೊಳ್ಳಲು ಬಂದ ನಮ್ಮ ಲಿಂಗರಾಜು ಆ ಎರಡೂ ಎತ್ತುಗಳು ಮುದಿ ಆಗಿವೆ ಎಂದೂ, ಅವುಗಳನ್ನು ಮಾರಿ ಬೇರೆ ಜೋಡಿಯನ್ನು ಖರೀದಿಸಿದರೆ ಉತ್ತಮ ಎಂದೂ ಹೇಳಿದ. ಆ ಎತ್ತುಗಳಿಗೆ ಎಷ್ಟು ವಯಸ್ಸಾಗಿತ್ತೆಂದರೆ ಅವುಗಳಿಂದ ಯಾವ ಕೆಲಸವೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಅವುಗಳನ್ನು ಮಾರದೆ ಹಾಗೆ ಇಟ್ಟುಕೊಳ್ಳುವುದೂ ಸುಲಭವಾಗಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಮೇವಿನ ಸಮಸ್ಯೆ.



ಇವತ್ತು ನೆಲಮಂಗಲದ ಸುತ್ತಮುತ್ತ ಕೃಷಿ ಚಟುವಟಿಕೆ ಸ್ಥಗಿತಗೊಳ್ಳುತ್ತಿದೆ; ಹೊಲಗಳಿದ್ದ ಜಾಗೆಗಳಲ್ಲಿ ಫ್ಯಾಕ್ಟರಿಗಳು ತಲೆ ಎತ್ತುತ್ತಿವೆ; ಗೋಮಾಳಗಳು ಸೈಟುಗಳಾಗಿ ಪರಿವರ್ತನೆಗೊಂಡಿವೆ. ಇಂತಹ ಪರಿಸ್ಥಿತಿಯಲ್ಲಿ ಆ ಎತ್ತುಗಳಿಗೆ ಎಲ್ಲಿಂದ ಮೇವು ತರುವುದು? ಹಿಂಡಿ, ಬೂಸಾ ಮಾತು ಬದಿಗಿರಲಿ, ಒಣಹುಲ್ಲು ಕೂಡ ಎಷ್ಟು ದುಬಾರಿ ಆಗಿದೆ ಎಂದರೆ ಒಂದು ಮೆದೆ ಹುಲ್ಲಿಗೆ ಇವತ್ತು ಕನಿಷ್ಠ ಆರು ಸಾವಿರ ರೂಪಾಯಿಗಳನ್ನು ತೆರಬೇಕು. ಇವತ್ತು ಹಲವಾರು ಚೆಡ್ಡಿಗಳು "ಗೋವು ಸಗಣಿ ಕೊಡುತ್ತದಲ್ಲ" ಎಂದೆಲ್ಲ ವಾದಿಸುತ್ತಿದ್ದಾರೆ. ಆದರೆ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಸಗಣಿಗಾಗಿ ಹತ್ತಾರು ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ಹುಲ್ಲು ಖರೀದಿಸುವುದು ಎಷ್ಟು ಸಮಂಜಸ? ಅಷ್ಟು ಆರ್ಥಿಕ ಶಕ್ತಿ ಅದೆಷ್ಟು ರೈತರಿಗೆ ಇರುತ್ತದೆ? ಈಗಾಗಲೇ ಸಾಲ-ನಷ್ಟಗಳಡಿ ತತ್ತರಿಸುತ್ತಿರುವ ರೈತರ ಮೇಲೆ ಇಂತಹ ಇನ್ನೊಂದು ಆರ್ಥಿಕ ಹೊರೆಯನ್ನು ಹೊರಿಸುವಷ್ಟು ಅಮಾನವೀಯರಾಗಿದ್ದೇವೆಯೇ ನಾವು?

ತೋಟದ ಮುದಿ ಎತ್ತುಗಳನ್ನು ಮಾರಲು ಲಿಂಗರಾಜುವಿಗೆ ಹೇಳಿದೆ. ಅವುಗಳನ್ನು ಕೊಂಡವರು ಅವುಗಳನ್ನು ಸಾಕಿದರೋ ಅಥವಾ ಕಸಾಯಿಖಾನೆಗೆ ಮಾರಿದರೊ, ಅದರ ಬಗ್ಗೆ ನಾನು ಯೋಚಿಸಲಿಲ್ಲ. ಆದರೆ ಅವುಗಳನ್ನು ಮಾರಿ ಬಂದ 10,500 ರೂಪಾಯಿಗಳೊಂದಿಗೆ ಇನ್ನೂ ನಾಲ್ಕು ಸಾವಿರ ಸೇರಿಸಿ ಎರಡು ನಾಟಿ ಹಸುಗಳನ್ನು ಕೊಂಡುಕೊಂಡೆ. ಈ ಎರಡೂ ಹಸುಗಳು ಈಗ ಎರಡು ಗಂಡು ಕರುಗಳನ್ನು ಈದಿವೆ. ನನ್ನ ಈ ನಾಲ್ಕು ಗೋವುಗಳಲ್ಲದೆ ಲಿಂಗರಾಜು ಕೂಡ ಎರಡು ಹಸುಗಳನ್ನು ಸಾಕಿದ್ದಾನೆ. ಆದರೆ ಆ ಹಸುಗಳನ್ನು ಕೊಂಡ ವರ್ಷ ಮಳೆ ಮತ್ತು ನಮ್ಮ ಬೋರ್‌ವೆಲ್ ಕೈಕೊಟ್ಟಿದ್ದರಿಂದ ಮೇವಿಗಾಗಿ ನಾನು ಮತ್ತು ಲಿಂಗರಾಜು ಪಟ್ಟ ಪಾಡು ಅಷ್ಟಿಷ್ಟಲ್ಲ. ಕೊನೆಗೆ ನಮ್ಮ ಚಂದ್ರೇಗೌಡರ ಬದಿರಿನ ಕೆರೆಯಿಂದ ಏಳು ಸಾವಿರ ರೂಪಾಯಿ ಕೊಟ್ಟು ಒಣಹುಲ್ಲು ತರಿಸಿದ್ದಾಯಿತು. ಅದೂ ಸಾಕಾಗದೆ ಹತ್ತಿರದಿಂದಲೇ ಮತ್ತೆ ಐದು ಸಾವಿರ ರೂಪಾಯಿ ಕೊಟ್ಟು ಕೊಂಡುಕೊಳ್ಳಬೇಕಾಯಿತು. ಇನ್ನು ಎರಡೂ ಹಸುಗಳು ಗಬ್ಬ ಆಗಿದ್ದಾಗ ಹಿಂಡಿ, ಬೂಸಾ ಅಂತ ಮತ್ತಷ್ಟು ಸಾವಿರ ರೂಪಾಯಿಗಳು ಕೈಬಿಟ್ಟವು. ಹೀಗೆ ಲೆಕ್ಕ ಹಾಕಿದರೆ ಆ ಎರಡು ಹಸು ಮತ್ತು ಅವುಗಳ ಕರುಗಳಿಗೆಂದು ಈಗಾಗಲೇ 30,000 ರೂಪಾಯಿಗಳು ವೆಚ್ಚವಾಗಿದೆ.

ಈ ವೆಚ್ಚದೊಂದಿಗೆ ಆ ಗೋವುಗಳಿಂದ ಆದ ಉಳಿತಾಯ ಯಾವ ಲೆಕ್ಕಕ್ಕೂ ಆಗುವುದಿಲ್ಲ. ಆದರೆ ತೋಟದಲ್ಲಿ ಗೋವುಗಳಿದ್ದರೆ ಚಂದ ಎಂಬ ನಂಬಿಕೆ ಮತ್ತು ಆ ಕರುಗಳಿಂದ ನಮ್ಮ ಇಶಾಳಿಗೆ ಆಗುವ ಆನಂದ (ಅವುಗಳಿಗೆ ಶಿವ ಮತ್ತು ಬಸವ ಎಂದು ಹೆಸರಿಟ್ಟಿದ್ದಾಳೆ)ಕ್ಕೆ ಹೋಲಿಸಿದರೆ ವೆಚ್ಚವೆಲ್ಲ ಗೌಣ. ಹವ್ಯಾಸಿ ರೈತ ಮಹಿಳೆಯಾದ ನನಗೆ ಆ ಆರ್ಥಿಕ ಭಾರವನ್ನು ಹೊರುವ ಶಕ್ತಿ ಮತ್ತು ಹುಮ್ಮಸ್ಸು ಇರಬಹುದು. ಆದರೆ ಅದು ಎಲ್ಲ ರೈತರಿಂದ ನಿರೀಕ್ಷಿಸುವುದು ತಪ್ಪು ಮಾತ್ರವಲ್ಲ ದೊಡ್ಡ ಅನ್ಯಾಯವಾಗುತ್ತದೆ.

ಅಂದಹಾಗೆ, ಈಗಿರುವ ಹಸುಗಳೂ ಮುದಿ ಆದಾಗ ಅವುಗಳನ್ನೂ ಮಾರುತ್ತೇನೆ. ಕರುಗಳು ಬೆಳೆದಾಗ ಅವುಗಳನ್ನು ಇತರೆ ರೈತರಿಗೆ ಮಾರುತ್ತೇನೆ. ಬಂದ ಹಣದಲ್ಲಿ ಹೊಸ ಹಸುಗಳನ್ನು, ಹೊಸ ಎತ್ತುಗಳನ್ನು ಕೊಂಡು ಸಾಕುತ್ತೇನೆ. ಬುದ್ಧಿ ಇರುವ ಎಲ್ಲಾ ಕೃಷಿಕರೂ ಮಾಡುವುದು ಇದನ್ನೇ.

ಆದರೆ ಬುದ್ಧಿ ಇಲ್ಲದ, ಗೋವನ್ನು ಸಾಕದ, ಅವುಗಳಿಗಾಗಿ ಪರದಾಡದ, ಅವುಗಳನ್ನು ಆರ್ಥಿಕ ಲಾಭ-ನಷ್ಟದ ಲೆಕ್ಕದಲ್ಲಿ ನೋಡದ ಯಡಿಯೂರಪ್ಪನಂತಹ ಬುದ್ಧಿಹೀನರು ಮಾತ್ರ ಗೋಹತ್ಯೆ ಮತ್ತು ಗೋಮಾಂಸಮಾರಾಟವನ್ನು ನಿಷೇಧಿಸಲು ಹೊರಡುತ್ತಾರೆ..... ●

ಅರಣ್ಯ ನಾಶಕ್ಕೆ ಅಡಿಗಲ್ಲು

[...]ಲ್ಪವಾದರೂ ಸಾಮಾಜಿಕ ಕಾಳಜಿಯಿಲ್ಲದ ಭ್ರಷ್ಟರ [...]ಅಧಿಕಾರ ಕೊಟ್ಟರೆ ಏನೆಲ್ಲಾ ಅನಾಹುತಗಳು [...]ಸಬಹುದು ಎನ್ನುವುದಕ್ಕೆ ಪ್ರಾಯಶಃ ನಮ್ಮ [...]ಯೂರಪ್ಪನವರ ಸರ್ಕಾರ ಒಂದು ಅತ್ಯುತ್ತಮ [...]ದರಣೆಯಾಗಬಲ್ಲದೇನೋ? ರಾಜ್ಯದಲ್ಲಿ ಬಿಜೆಪಿಗಳು [...] ಬಾರಿಗೆ ಅಧಿಕಾರಕ್ಕೆ ಬಂದಿವೆ. ಮೊದಲ [...]ದಲ್ಲೇ ಮಾಡಬಾರದ ಭ್ರಷ್ಟಾಚಾರಗಳನ್ನು ಮಾಡಿದ್ದು, [...]ಗೊಬ್ಬರ ಕೇಳಿದ ರೈತರಿಗೆ ಲಾಠಿಯೇಟು, [...]ಟು ಕೊಟ್ಟಿದ್ದು, ಉತ್ತರ ಕರ್ನಾಟಕದ ಜನ [...]ದಲ್ಲಿ ಸಿಲುಕಿ ನರಳುತ್ತಿದ್ದಾಗ ಸರ್ಕಾರ ಪಂಚತಾರಾ [...]ಲ್‌ಗಳಲ್ಲಿ ಮಜಾ ಮಾಡಿದ್ದು, ಕಂಡಕಂಡಲ್ಲಿ ರೈತರಿಗೆ [...]ಧಾರವಾಗಿರುವ ಭೂಮಿಗಳನ್ನು ಕಿತ್ತುಕೊಂಡು [...]ಪತಿಗಳಿಗೆ ಧಾರೆಯೆರೆಯುತ್ತಿರುವುದು, [...]ಗದಳ-ಶ್ರೀರಾಮಸೇನೆಯಂಥ ಪುಂಡರಿಗೆ [...]ವಲಾಗಿ ನಿಂತು ಸಮಾಜದಲ್ಲಿ ಅಶಾಂತಿ, [...]ಚಾರಕ್ಕೆ ಪ್ರಚೋದನೆ ಕೊಡುತ್ತಿರುವುದು, ಕನಿಷ್ಠ [...]ನ್ನೂ ಕೊಡದೆ ರಾಜ್ಯವನ್ನು ಕತ್ತಲಲ್ಲಿ [...]ಸುತ್ತಿರುವುದು - ಹೀಗೆ ಹೇಳುತ್ತಾ ಹೋದರೆ [...] ಸರ್ಕಾರದ 'ಸಾಧನೆ'ಗಳ ಪಟ್ಟಿಗೆ [...]ೊದಲಿರುವುದಿಲ್ಲ.

[...]ವನ್ನೆಲ್ಲಾ ಅನುಭವಿಸುತ್ತಿರುವ ರಾಜ್ಯದ ಜನತೆ [...]ನೆಂದೂ ಬಿಜೆಪಿಗಳನ್ನು ಅಧಿಕಾರಕ್ಕೆ ತರಲಾರರು. [...] ಬಿಜೆಪಿಗಳಿಗೂ ಗೊತ್ತಿ[...] ಇನ್ನೊಂದು ಸಾರಿ [...]ಕ್ಕೆ ಬರಬಹುದು ಎಂಬ ಭರವಸೆ [...] [...]ಟುಹೋಗಿದೆ. ಈ ಕಾರಣಕ್ಕಾಗಿಯೇ [...]ಇರುವಷ್ಟು ದಿನ ಎಷ್ಟು ಸಾಧ್ಯವೋ ಅಷ್ಟು [...]ಕೊಡೆಯಲು ತೀರ್ಮಾನಿಸಿದಂತಿದೆ. ಭೂಗರ್ಭ [...]ಪ್ರತಿದಿನ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ [...]ಯುತ್ತಿರುವ ಗಣಿ ಮಾಫಿಯಾದೊಂದಿಗೆ ಡೀಲ್ [...]ಕೊಂಡು ರಕ್ಷಿತಾರಣ್ಯ ಪ್ರದೇಶಗಳಲ್ಲೂ ಗಣಿಗಾರಿಕೆಗೆ [...] ಕೊಟ್ಟಿರುವುದು ಈ ಲೂಟಿಯ ಮುಂದುವರಿದ [...]

[...]ಣ್ಯ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ [...]ಯೂರಪ್ಪ ಅರಣ್ಯ ದಿನಾಚರಣೆಯಂದು "ಅಯ್ಯೋ ನನ್ನ ಕಣ್ಣ ಮುಂದೆಯೇ ಅರಣ್ಯ ಸಂಪತ್ತು ನಾಶವಾಗುತ್ತಿದೆ. ಅದನ್ನು ರಕ್ಷಿಸಲು ನನ್ನಿಂದ ಸಾಧ್ಯವಾಗುತ್ತಿಲ್ಲವಲ್ಲಾ" ಎಂದು ಥೇಟ್ ಪೌರಾಣಿಕ ನಾಟಕದ ಡೈಲಾಗ್ ಶೈಲಿಯಲ್ಲಿ ಗೋಗರೆದಿದ್ದರು. ಆಮೇಲೆ ಅಲ್ಲಿಂದ ಸೀದಾ ವಿಧಾನಸೌಧಕ್ಕೆ ಹೋಗಿ ಗಣಿ ಮಾಫಿಯಾದ ಜೊತೆ ಕೈಮಿಲಾಯಿಸಿ 'ರಕ್ಷಿತಾರಣ್ಯಗಳಲ್ಲೂ ಗಣಿಗಾರಿಕೆ ನಡೆಸಬಹುದು' ಎಂದು ಅರಣ್ಯ ನಾಶ ಯೋಜನೆಗೆ ಅಡಿಗಲ್ಲು ಹಾಕಿಬಿಟ್ಟರು!

ಅರಣ್ಯ ನಾಶದಿಂದ ಒಟ್ಟಾರೆ ಪರಿಸರದ ಮೇಲೆ, ಜೀವಸಂಕುಲದ ಮೇಲೆ ಆಗುವ ಭೀಕರ ದುಷ್ಪರಿಣಾಮಗಳೇನು ಎಂಬ ಸರಳವಾದ, ಆದರೆ ಬಹಳ ಮಹತ್ವಪೂರ್ಣವಾದ ಪ್ರಶ್ನೆಗೆ ಏಳನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯೂ ಬಹಳ ಸ್ಪಷ್ಟವಾಗಿ ಉತ್ತರ ಕೊಡುತ್ತಾನೆ; ಜಾಗತಿಕ ತಾಪಮಾನ ಏರುವುದು, ಕಾಲಕಾಲಕ್ಕೆ ಸರಿಯಾಗಿ ಮಳೆ [...] ತಪ್ಪಿಹೋಗುವುದು, ಅತಿವೃಷ್ಟಿ-ಅನಾವೃಷ್ಟಿಗಳು ಮಾನವ ಬದುಕನ್ನೇ ಛಿದ್ರಗೊಳಿಸುವುದು, ವೈವಿಧ್ಯ ಜೀವಸಂಕುಲ ಸರ್ವನಾಶವಾಗುವುದು, ಕೊನೆಗೆ ಮನುಷ್ಯನ ಬದುಕಿಗೇ ಸಂಚಕಾರ ತರುವುದು - ಹೀಗೆ ಕಾಡಿನ ನಾಶದಿಂದುಂಟಾಗುವ ದುಷ್ಪರಿಣಾಮಗಳ ಪಟ್ಟಿಯನ್ನೇ ಕೊಡುತ್ತಾನೆ. ಆದರೆ, ಆ ಏಳನೇ ತರಗತಿಯ ಮಕ್ಕಳಿಗಿರುವಷ್ಟು ಪರಿಜ್ಞಾನದ ಅರ್ಧ ಭಾಗವಾದರೂ ಈ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುತ್ತಿರುವ ಯಡ್ಡಿಗಿದ್ದಿದ್ದರೆ ಪ್ರಾಯಶಃ ಅಂಥ ಗಂಭೀರ ತೀರ್ಮಾನವನ್ನು ತೆಗೆದುಕೊಳ್ಳುತ್ತಿರಲಿಲ್ಲ.



ಈಗ್ಗೆ ಐನೂರು ವರ್ಷಗಳ ಹಿಂದಿದ್ದ ಪರಿಸ್ಥಿತಿಯೇ ಈಗಲೂ ಇದ್ದಿದ್ದರೆ ಆ ಮಾತು ಬೇರೆ. ಎಲ್ಲೆಲ್ಲೂ ದಟ್ಟ ಅರಣ್ಯಗಳೇ ತುಂಬಿಕೊಂಡಿದ್ದ ಆ ದಿನಗಳಲ್ಲಿ ಅರಣ್ಯ ನಾಶ ಎಂಬುದು ಒಂದು ಇಶ್ಯೂ ಆಗಿರಲಿಲ್ಲ. ಈಗಲೂ ನಮ್ಮ ಕರ್ನಾಟಕ ಆಫ್ರಿಕಾದಂತೆ ಅಭೇದ್ಯ ಕಾಡುಗಳನ್ನೋ, ದಕ್ಷಿಣ ಅಮೆರಿಕದಂತೆ ದಟ್ಟ ಅಮೇಜಾನ್ ಅರಣ್ಯಗಳನ್ನೋ ಹೊಂದಿಲ್ಲ. ನಮ್ಮಲ್ಲಿ ಇರುವುದೊಂದೇ ಮಲೆನಾಡು. ವೈವಿಧ್ಯಮಯ ಸಸ್ಯಸಂಪತ್ತನ್ನು, ಅಪರೂಪದ ಪ್ರಾಣಿಸಂಕುಲವನ್ನು ಹೊಂದಿರುವ ದಟ್ಟ ಅರಣ್ಯಗಳಿಂದಾವೃತವಾಗಿರುವ ಗಗನಚುಂಬಿ ಸಹ್ಯಾದ್ರಿ ಪರ್ವತ ಶ್ರೇಣಿಗಳು ವಿಶ್ವದ ಹದಿನೆಂಟು ecological hotspotsಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಆದರೆ ಅಲ್ಲೂ ಈಗ ಅಭಿವೃದ್ಧಿ ಹೆಸರಿನಲ್ಲಿ, ಗಣಿಗಾರಿಕೆ ಹೆಸರಿನಲ್ಲಿ, ಇಕೋ ಟೂರಿಸಂ ಹೆಸರಿನಲ್ಲಿ ಕಾಡು ದಿನೇದಿನೇ ಕಣ್ಮರೆಯಾಗುತ್ತಿದೆ. 1980ರಿಂದ ಇಲ್ಲಿಯವರೆಗೆ 42,027 ಹೆಕ್ಟೇರ್ ಅರಣ್ಯ ಭೂಮಿಯನ್ನು ನೀರಾವರಿ, ಜಲವಿದ್ಯುತ್, ರಸ್ತೆ ಗಣಿಗಾರಿಕೆ, ರೈಲು ಮಾರ್ಗ ನಿರ್ಮಾಣಕ್ಕೆ ಬಳಸಿಕೊಂಡಿದ್ದಾರೆ. ಇತ್ತೀಚೆಗೆ ಒಂದು ಪಿಡುಗಾಗಿ ಪರಿಣಮಿಸಿರುವ ಕಬ್ಬಿಣದ ಅದಿರು ಗಣಿಗಾರಿಕೆಗೆ 9,107.37 ಹೆಕ್ಟೇರ್ ಅರಣ್ಯ ಭೂಮಿಯನ್ನು ನೀಡಲಾಗಿದೆ. ಇದರ ಜೊತೆಯಲ್ಲಿ ರಾಜ್ಯದಾದ್ಯಂತ ವಿವಿಧ ಜಿಲ್ಲೆ[...] 63,439.31 ಹೆಕ್ಟೇರ್ ಅರಣ್ಯ ಭೂಮಿ [...]ಇಲಾಖೆಯ ಕಾರ್ಯಯೋಜನೆ ಭೂಗಳ್ಳರ ಪಾಲಾಗಿದೆ. ಇದು [...] ವಿಭಾಗ 2008ರಲ್ಲಿ ನೀಡಿರುವ ವರದಿಯಿಂದ ಹೊರಬಂದಿರುವ ಅಂಶ.

ಕನಿಷ್ಠ ಇಂತಹ ಯೋಜನೆಗಳಿಂದ ಕಾಡನ್ನು ರಕ್ಷಿಸುವ ಸಲುವಾಗಿಯೇ ರಕ್ಷಿತಾರಣ್ಯಗಳು, ಅಭಯಾರಣ್ಯಗಳಂತಹ ನೀತಿಗಳನ್ನು ಜಾರಿಗೊಳಿಸಲಾಗಿತ್ತು. ಇಲ್ಲಿ ಬೇಟೆ, ಕಾಡುಕಡಿತ, ಗಣಿಗಾರಿಕೆ ಮುಂತಾದ ಯಾವುದೇ ಚಟುವಟಿಕೆಗಳನ್ನು ನಡೆಸಲು ಅವಕಾಶವಿರಲಿಲ್ಲ. ಹೀಗಾಗಿ ಉಳಿದೆಲ್ಲಾ ಕಡೆ ಅರಣ್ಯನಾಶ ವೇಗವಾಗಿ ನಡೆಯುತ್ತಿದ್ದರೂ ಈ ರಕ್ಷಿತಾರಣ್ಯಗಳಲ್ಲಿ ಒಂದಿಷ್ಟು ಹಸಿರು ಉಳಿದುಕೊಂಡಿತ್ತು. ಈಗ ಅದಕ್ಕೂ ಕೊಡಲಿ ಹಾಕುವುದಕ್ಕೆ ಹೊರಟಿದ್ದಾರೆ ಯಡಿಯೂರಪ್ಪ.

'ಅರಣ್ಯ ನಾಶ' ಎಂದಾಕ್ಷಣವೇ ಅದಕ್ಕೆ ರೈತರು, ಆದಿವಾಸಿಗಳು ಕಾರಣ ಎಂದು ಬೊಟ್ಟುಮಾಡುತ್ತಾರೆ. ರೈತರು ಜಮೀನಿಗಾಗಿ, ಸೌದೆಗಾಗಿ ಕಾಡು ಕಡಿಯುತ್ತಾರೆಂದೂ, ಆದಿವಾಸಿಗಳು ಬೇಟೆಯಾಡಿ ಪ್ರಾಣಿಸಂಕುಲ ನಾಶವಾಗುವುದಕ್ಕೆ ಕಾರಣವಾಗಿದ್ದಾರೆಂದೂ ಕಿರುಚಾಡುತ್ತಾರೆ. ಅಸಲೀಯತ್ತೇನೆಂದರೆ, ಎಲ್ಲೆಲ್ಲಿ ಆದಿವಾಸಿ ಸಮುದಾಯಗಳು ಬದುಕಿವೆಯೋ ಅಲ್ಲಲ್ಲಿ ಇನ್ನೂ ಕಾಡು ಉಳಿದುಕೊಂಡಿದೆ; ಅಂತೆಯೇ ಎಲ್ಲೆಲ್ಲಿ ಅರಣ್ಯ ಇಲಾಖೆ ಕಾಲಿಟ್ಟಿದೆಯೋ ಅಲ್ಲಿ ಕಾಡು ಕಣ್ಮರೆಯಾಗುತ್ತಿದೆ. ಆದಿವಾಸಿಗಳು ಅರಣ್ಯವನ್ನು ಬಿಟ್ಟು ಬದುಕಲಾರರಾದ್ದರಿಂದ ಅದನ್ನು ಬಹಳ ಶ್ರದ್ಧೆಯಿಂದ ರಕ್ಷಿಸಿಕೊಂಡು ಹೋಗುತ್ತಾರೆ. ಶೇ.80ರಷ್ಟು ಅರಣ್ಯ ನಾಶಕ್ಕೆ ಸರ್ಕಾರದ ತಥಾಕಥಿತ ಅಭಿವೃದ್ಧಿ ಯೋಜನೆಗಳೇ ನೇರವಾಗಿ ಕಾರಣವಾಗಿದ್ದು ಉಳಿದ ಭಾಗವು ಸರ್ಕಾರ, ಅರಣ್ಯ ಇಲಾಖೆಯ ಬೆಂಗಾವಲಿನಲ್ಲಿ ನಡೆಯುತ್ತಿರುವ ನಾಟಾಕಳ್ಳರಿಂದ ಉಂಟಾಗುತ್ತಿದೆ.

ಈಗ ಯಡಿಯೂರಪ್ಪನ ಸಾರಥ್ಯದಲ್ಲಿ ಅದು ಇನ್ನಷ್ಟು ವೇಗವಾಗುತ್ತಿದೆಯಷ್ಟೆ. ರಕ್ಷಿತಾರಣ್ಯಗಳಲ್ಲೂ ಗಣಿಗಾರಿಕೆ ನಡೆಸಬಹುದೆಂಬ ಸಚಿವ ಸಂಪುಟದ ತೀರ್ಮಾನ ಕರ್ನಾಟಕದಲ್ಲಿ ಸಹರಾ ಮರುಭೂಮಿಯನ್ನು ಸೃಷ್ಟಿಸುವ ಪ್ರಕ್ರಿಯೆಗೆ ಒಂದು ಅಡಿಗಲ್ಲಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ●

'ವೇದಾಂತ' ಕಂಪನಿಯ 'ಪರಮಾರ್ಥಿಕ' ಲೂಟಿ!

ಒರಿಸ್ಸಾ ಮತ್ತು ಛತ್ತೀಸ್‌ಘಡ್‌ನಲ್ಲಿ ನಡೆಯುತ್ತಿರುವ ಆಪರೇಷನ್ ಗ್ರೀನ್ ಹಂಟ್‌ನ ನಿಜವಾದ ಫಲಾನುಭವಿಗಳು ಮತ್ತು ಈ ಆಪರೇಷನ್ ಹಿಂದಿನ ಸೂತ್ರಧಾರಿಗಳು ಯಾರು? ಆ ಆಪರೇಷನನ್ನು ಕೇಂದ್ರ ಸರ್ಕಾರ ಈ ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ನೆಲೆಗೊಳಿಸಲು ನಡೆಸುತ್ತಿದೆ ಎಂದು ನಂಬುವ ಮುಠಾಳರು ಸದ್ಯಕ್ಕೆ ಯಾರೂ ಇಲ್ಲ. ಆದರೂ ಆಪರೇಷನ್ ಗ್ರೀನ್ ಹಂಟ್‌ನ ಹಿಂದೆ ಈ ದೇಶದ ಟ್ರೆಷರ್ ಹಂಟ್ (ಸಂಪನ್ಮೂಲ ಲೂಟಿ) ಮಾಡಲು ಸಜ್ಜಾಗಿ ನಿಂತಿರುವ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿವೆ ಎಂಬ ಸತ್ಯ ಈಗ ಒಂದೊಂದಾಗಿ ಹೊರಬರುತ್ತಿದೆ. ಈ ಟ್ರೆಷರ್ ಹಂಟ್‌ನಲ್ಲಿ ತೊಡಗಿರುವ ಅತಿದೊಡ್ಡ ಕಂಪನಿ 'ವೇದಾಂತ'. ಈ ಕಂಪನಿಯ ಹೆಸರು 'ವೇಂದಾಂತ'ವಾದರೂ ಲೆಕ್ಕಾಚಾರವೆಲ್ಲಾ ಪರಮಾರ್ಥಿಕವಾದದ್ದೇ ವಿನಃ ಪಾರಮಾರ್ಥಿಕವಾದದ್ದೇನೂ ಇಲ್ಲ.

ಈ ಕಂಪನಿಯು ಮಧ್ಯ ಭಾರತದಲ್ಲಿ ಸಿಗುವ ಅಪಾರ ಬಾಕ್ಸೈಟ್ ಹಾಗೂ ಇನ್ನಿತರ ಅದಿರು ಸಂಪತ್ತನ್ನು ದುಗ್ಗಾಣಿ ಬೆಲೆಗೆ ಲೂಟಿ ಹೊಡೆದು ಅದನ್ನು ಅನಾಮತ್ತು ವಿದೇಶಕ್ಕೆ ಮಾರಿಕೊಂಡು ಕರ್ನಾಟಕದ ರೆಡ್ಡಿ ಬ್ರದರ್ಸ್‌ಗಿಂತ ಹತ್ತು ಪಟ್ಟು ಹೆಚ್ಚು ಶ್ರೀಮಂತವಾಗಿದೆ. ಅದರ ಲೂಟಿಗೆ ಆದಿವಾಸಿಗಳು ಅಡ್ಡಿಯಾಗುತ್ತಿದ್ದಾರೆ ಎನ್ನುವ ಕಾರಣಕ್ಕಾಗಿಯೇ ಒರಿಸ್ಸಾ ಮತ್ತು ಛತ್ತೀಸ್‌ಘಡ್‌ನಲ್ಲಿ ನಕ್ಸಲ್ ಸಂಹಾರದ ಹೆಸರಿನ ಆಪರೇಷನ್ ಗ್ರೀನ್‌ಹಂಟನ್ನು ಪ್ರಾರಂಭಿಸಲಾಗಿದೆ. ಒರಿಸ್ಸಾ ಮತ್ತು ಛತ್ತೀಸ್‌ಘಡ್ ಸರ್ಕಾರಗಳಂತೂ ತಮ್ಮ ತಮ್ಮ ರಾಜ್ಯಗಳನ್ನೇ ಈ ಕಂಪನಿಗಳಿಗೆ ಬರೆದುಕೊಟ್ಟಂತೆ ಕಾಣುತ್ತದೆ. ಏಕೆಂದರೆ ಈಸ್ಟ್ ಇಂಡಿಯಾ ಕಂಪನಿಗಳಂತೆ ಒಮ್ಮೆ ರಾಜ್ಯದಲ್ಲಿ ನೆಲೆಯೂರಿದ ಈ ಕಂಪನಿಗಳು ನಿಧಾನವಾಗಿ ಆ ರಾಜ್ಯದ ಎಲ್ಲಾ ಕ್ಷೇತ್ರಗಳನ್ನು ಒಂದೊಂದಾಗಿ ನುಂಗಲು ಪ್ರಾರಂಭಿಸಿವೆ. ಇದರ ಪರಿಯನ್ನು ನೋಡಿದರೆ ಈ ದೇಶದಲ್ಲಿ ಕಾನೂನು, ಸಂವಿಧಾನ ಎನ್ನುವ ಐಟಂಗಳೇನಾದರೂ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಅಲ್ಲಿ ಕಾಲೂರಿರುವ ಕೆಲವು ಕಂಪನಿಗಳಿಗೆ (ಮಿತ್ತಲ್, ಪೋಸ್ಕೋ) ಕರ್ನಾಟಕದಲ್ಲೂ ಅವಕಾಶ ಕೊಟ್ಟಿರುವುದರಿಂದ ಒರಿಸ್ಸಾ, ಛತ್ತೀಸ್‌ಘಡ್‌ಗಳನ್ನು ಇವು ಹೇಗೆ ನುಂಗಿ ನೀರು ಕುಡಿಯುತ್ತಿವೆ ಎಂದು ಅರ್ಥಮಾಡಿಕೊಳ್ಳುವುದು ನಮಗೂ ಅತ್ಯವಶ್ಯಕವಾಗಿದೆ.

ಉದಾಹರಣೆಗೆ ಅದಿರು ರಫ್ತು ವ್ಯವಹಾರದಲ್ಲಿರುವ ಈ ವೇದಾಂತ ಕಂಪನಿ ಇತ್ತೀಚೆಗೆ ಇದ್ದಕ್ಕಿದ್ದಂತೆ ಒರಿಸ್ಸಾ ರಾಜ್ಯದಲ್ಲಿ ಒಂದು ವಿಶ್ವವಿದ್ಯಾಲಯ ತೆರೆಯುವ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟಿತು. ವೇದಾಂತ ಕಂಪನಿಯ ಎಂಜಲಿನ ರುಚಿಗೆ ಒಗ್ಗಿದ್ದ ಒರಿಸ್ಸಾ ಸರ್ಕಾರ ಮರುಮಾತಿಲ್ಲದೆ ಅದಕ್ಕೆ ಒಪ್ಪಿಗೆ ಕೊಟ್ಟು ಜಿಒ ಹೊರಡಿಸಿತು. ಆದರೆ ಸಾರ್ವಜನಿಕರ ಶೇರುಗಳಿರುವ ಪಬ್ಲಿಕ್ ಲಿಮಿಟೆಡ್ ಕಂಪನಿಯಲ್ಲದ ಒಂದು ಸಂಪೂರ್ಣ ಖಾಸಗಿ ಕಂಪನಿ ಹೀಗೆ ಭಾರತದಲ್ಲಿ ತನ್ನದೇ ಆದ ವಿಶ್ವವಿದ್ಯಾಲಯ ಸ್ಥಾಪಿಸುವುದು ಕಾನೂನುಬಾಹಿರವೆಂದು ಹೈಕೋರ್ಟ್‌ನಲ್ಲಿ ದಾವೆಯೊಂದು ದಾಖಲಾಯಿತು.



ಅದರಿಂದಾಗಿ ರಾತ್ರೋರಾತ್ರಿ ವೇದಾಂತ ಕಂಪನಿ ತನ್ನದೇ ಅನಿಲ್ ಅಗರ್‌ವಾಲ್ ಪಬ್ಲಿಕ್ ಲಿಮಿಟೆಡ್ ಕಂಪನಿಯನ್ನು ಸ್ಥಾಪಿಸಿತು. ಸರ್ಕಾರವೂ ಸಹ ರಾತ್ರೋರಾತ್ರಿ ಅದಕ್ಕೆ ಬೇಕಾದ ದಾಖಲೆಗಳನ್ನೆಲ್ಲಾ ಒದಗಿಸಿಕೊಟ್ಟಿತು.

ಸರ್ಕಾರ ಮತ್ತು ಕಂಪನಿ ಇಷ್ಟೆಲ್ಲಾ ಅವಸರ ಮಾಡಿ ಅಷ್ಟು ತುರ್ತಾಗಿ ಖಾಸಗಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿ ಯಾರಿಗೆ ವಿದ್ಯಾದಾನ ಮಾಡಲು ಹೊರಟಿತ್ತು ಎಂದು ನೋಡಿದರೆ ಅದರ ಅಸಲಿ ಉದ್ದೇಶ ಶೈಕ್ಷಣಿಕವಾದದ್ದೇ ಅಲ್ಲವೆಂಬುದು ಬಯಲಾಗುತ್ತಾ ಹೋಗಿದೆ!

ಈ ವಿಶ್ವವಿದ್ಯಾಲಯಕ್ಕೆ ವೇದಾಂತ ಕಂಪನಿ ಸರ್ಕಾರದಿಂದ ಕೇಳುತ್ತಿರುವ ಜಮೀನೆಷ್ಟು ಗೊತ್ತೆ? ಕೇವಲ 2,500 ಎಕರೆ! ಇದು ಕೇಂದ್ರ ಸರ್ಕಾರ ಹತ್ತು ರಾಜ್ಯಗಳಲ್ಲಿ ಪ್ರಾರಂಭಿಸಬೇಕೆಂದು ಯೋಚಿಸಿರುವ ಹತ್ತು ಐಐಟಿಗಳಿಗೆ ಕೊಡುತ್ತಿರುವ ಒಟ್ಟು ಜಮೀನಿಗಿಂತಲೂ ಹೆಚ್ಚು. ಇಂಗ್ಲೆಂಡಿನಲ್ಲಿರುವ ಎಲ್ಲಾ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಒಟ್ಟು ವಿಸ್ತೀರ್ಣವೇ 70¥100 ಹೆಕ್ಟೇರ್‌ಗಳು. ಹಾಗಿದ್ದಲ್ಲಿ ಒಂದು ವಿಶ್ವವಿದ್ಯಾಲಯ ನಿರ್ಮಿಸಲು 2,500 ಎಕರೆ ಜಮೀನು ಏಕೆ ಬೇಕಾಗುತ್ತದೆ? ಕೇವಲ ಶೈಕ್ಷಣಿಕ ಉದ್ದೇಶ ಮಾತ್ರವಿದ್ದರೆ ಇಷ್ಟೊಂದು ಜಮೀನು ಅಗತ್ಯವೇ ಬೀಳುವುದಿಲ್ಲ. ವಾಸ್ತವವಾಗಿ ವೇದಾಂತ ಕಂಪನಿ ತನ್ನ ವಿಸ್ತರಣೆಯಲ್ಲಿ ಶಿಕ್ಷಣದಲ್ಲಿ ಅಂಥ ಆಸಕ್ತಿಯನ್ನು ಎಲ್ಲಿಯೂ ತೋರಿಸಿಲ್ಲ. ಹೀಗಾಗಿ ಅದರ ಹಿಂದಿನ ಗುಟ್ಟು ಬೇರೆಯೇ ಆಗಿದೆ.

ವೇದಾಂತ ಕಂಪನಿ ತನ್ನ ವಿಶ್ವವಿದ್ಯಾಲಯಕ್ಕೆ ಕೇಳಿರುವ ಜಾಗದಲ್ಲಿ ಅಣುಶಕ್ತಿ ಉತ್ಪಾದನೆಗೆ ಬೇಕಿರುವ ಅತ್ಯಂತ ಅಪರೂಪದ ಥೋರಿಯಂ ನಿಕ್ಷೇಪವಿದೆ. ಈಗಾಗಲೇ ಅಮೆರಿಕದೊಂದಿಗೆ ಭಾರತದ ಮಾಡಿಕೊಂಡಿರುವ ನಾಗರಿಕ ಅಣುಶಕ್ತಿ ಒಪ್ಪಂದದ ಪ್ರಕಾರ ಅಣುಶಕ್ತಿ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುವಾದ ಯುರೇನಿಯಂ ಮತ್ತು ಥೋರಿಯಂ ಗಣಿಗಾರಿಕೆಯಲ್ಲಿ ಖಾಸಗಿ ಪ್ರವೇಶಕ್ಕೂ ಅನುಮತಿ ನೀಡುವ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಮುಂದಿಟ್ಟಿದೆ. ಹೀಗಾಗಿ ಅಲ್ಲಿ ನಾಗರಿಕ ಅಣುಒಪ್ಪಂದಕ್ಕೆ ಸಹಿ ಬೀಳುತ್ತಿದ್ದಂತೆ ಇಲ್ಲಿ ವೇದಾಂತ ಕಂಪನಿ ಥೋರಿಯಂ ನಿಕ್ಷೇಪವಿರುವ ಜಾಗ ತನ್ನ ಸುಪರ್ದಿನಲ್ಲಿರಲಿ ಎಂದು 2,500 ಎಕರೆ ಪ್ರಾಂತ್ಯದಲ್ಲಿ ವಿಶ್ವವಿದ್ಯಾಲಯ ನಿರ್ಮಿಸುವ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟಿದೆ. ಹಾಗೂ ಅಲ್ಲಿ ವಿಶ್ವದರ್ಜೆಯ ಶಿಕ್ಷಣ ಕೊಡುವುದರಿಂದ ಸ್ಥಳೀಯ ಕಾನೂನುಗಳು ತನಗೆ ಅನ್ವಯಿಸಬಾರದೆಂದು ಸರ್ಕಾರಕ್ಕೆ ಮನವಿ ಮಾಡಿದೆ. ವೇದಾಂತದ ಅಮಲಿನಲ್ಲಿರುವ ಒರಿಸ್ಸಾ ಸರ್ಕಾರ ಎಲ್ಲಕ್ಕೂ ಒಪ್ಪಿಗೆ ಕೊಟ್ಟಿದೆ.


ಜಗತ್ತಿನ ಉಳಿದೆಲ್ಲಾ ಕಡೆ ಇಂಥಾ ಬಹುರಾಷ್ಟ್ರೀಯ ಕಂಪನಿಗಳು ಲೂಟಿ ಹೊಡೆಯುವ ದಾರಿಗಳನ್ನು ಹುಡುಕುತ್ತಿರುತ್ತವೆ. ನಮ್ಮಲ್ಲಿ ಮನೆ ಯಜಮಾನರೇ ಖುದ್ದಾಗಿ ಕಳ್ಳನ ಕೈಗೆ ಮನೆಯ ಚಾವಿ ಕೊಡುತ್ತಾರೆ ಮತ್ತು ಎಲ್ಲೆಲ್ಲಿ ಏನೇನು ಅಮೂಲ್ಯ ವಸ್ತುಗಳನ್ನು ಇಡಲಾಗಿದೆಯೆಂಬ ನಕ್ಷೆಯನ್ನೂ ಒದಗಿಸುತ್ತಾರೆ. ಆದ್ದರಿಂದಲೇ ಈ ವೇದಾಂತದಂಥ ಹೈಟೆಕ್ ಹಗಲು ದರೋಡೆಕೋರರೆಲ್ಲಾ ಭಾರತ ಸರ್ಕಾರಕ್ಕೆ ಹೂಡಿಕೆದಾರರ ಸ್ನೇಹಿ ಅರ್ಥಾತ್ ದರೋಡೆಕೋರರ 'ಆಪ್ತರಕ್ಷಕ'ರೆಂಬ ಸರ್ಟಿಫಿಕೇಟ್ ಕೊಟ್ಟಿವೆ. ●



ಚಾರ್ವಾಕ

▶ ಶಿವಸುಂದರ್

ಮೈಕ್ರೋಸಾಫ್ಟ್ ಮತ್ತು ಭಾರತದ ಇ-ಗುಲಾಮಿತನ



ಬೆನ್ನುಮೂಳೆ ಇಲ್ಲದ, ಆತ್ಮಾಭಿಮಾನ ಇಲ್ಲದ ಜನರನ್ನು "ಬಗ್ಗು ಎಂದರೆ ಸಾಷ್ಟಾಂಗ ನಮಸ್ಕಾರವನ್ನೇ ಮಾಡುವವರು" ಎಂದು ರೂಪಕಾತ್ಮಕವಾಗಿ ಬಣ್ಣಿಸಲಾಗುತ್ತದೆ. ಅದು ಭಾರತ ಸರ್ಕಾರಕ್ಕೆ ಅನ್ವಯಿಸುವಷ್ಟು ಬೇರೆ ಯಾವುದಕ್ಕೂ ಅನ್ವಯಿಸಲಾರದು. ಆರ್ಥಿಕ ಕ್ಷೇತ್ರದಲ್ಲಿರಲಿ, ಸಾಮಾಜಿಕ ಕ್ಷೇತ್ರದಲ್ಲಿರಲಿ, ದೋಹಾ ಒಪ್ಪಂದವಿರಲಿ ಅಥವಾ ಇತರ ಯಾವುದೇ ಅಂತರರಾಷ್ಟ್ರೀಯ ಒಪ್ಪಂದವಾಗಲೀ, ಅವು ಭಾರತ ಸರ್ಕಾರವನ್ನು ಬಗ್ಗಲು ಮಾತ್ರ ಕೇಳಿದ್ದರೆ ಭಾರತ ಸರ್ಕಾರ ಎರಡು ಹೆಜ್ಜೆ ಮುಂದೆ ಹೋಗಿ ಅವರು ಕೇಳಿದ್ದನ್ನು ಮತ್ತು ಕೇಳದ್ದನ್ನು ಎಲ್ಲವನ್ನು ಕೊಟ್ಟು ಸಾಷ್ಟಾಂಗ ನಮಸ್ಕಾರ ಹಾಕಿಬಿಟ್ಟಿರುತ್ತದೆ.

ಈ ಸಾಲಿಗೆ ಇತ್ತೀಚಿನ ಉದಾಹರಣೆ ಭಾರತ ಸರ್ಕಾರದ ಇ-ಗುಲಾಮೀತನ. ಸರ್ಕಾರ ತನ್ನ ಎಲ್ಲ ವಹಿವಾಟನ್ನು ಕಂಪ್ಯೂಟರೀಕರಣ ಮಾಡುತ್ತಿದೆಯಷ್ಟೇ. ಅದಕ್ಕಾಗಿ ಬಳಸುತ್ತಿರುವ ಕಂಪ್ಯೂಟರ್ ಪ್ರೋಗ್ರಾಮ್‌ಗಳು ಎರಡು ರೀತಿಯಲ್ಲಿ ಲಭ್ಯವಾಗುತ್ತವೆ. ಒಂದು ಓಪನ್ ಸೋರ್ಸ್ ಮಾದರಿಯಲ್ಲಿ, ಎಂದರೆ ಅದು ಸರ್ಕಾರ ತನ್ನ ಅಗತ್ಯಕ್ಕೆ ಬೇಕಾದ ಪ್ರೋಗ್ರಾಮಿಂಗ್ ಮಾಡಿಕೊಳ್ಳಲು ಬೇಕಾದ ಸಾಫ್ಟ್‌ವೇರ್ ಪರಿಕರಗಳನ್ನು ಉಚಿತವಾಗಿ ಒದಗಿಸುತ್ತದೆ. ಅದನ್ನು ಬಳಸಿಕೊಂಡು ಸರ್ಕಾರದ ಇಲಾಖೆಗಳು ತಮಗೆ ಬೇಕಾದಂತೆ ಪ್ರೋಗ್ರಾಮಿಂಗ್ ಮಾಡಿಕೊಳ್ಳಬಹುದು. ಇನ್ನೊಂದು ಮಾದರಿಯೆಂದರೆ ಮೈಕ್ರೋಸಾಫ್ಟ್ ಕಂಪನಿ ಸರಬರಾಜು ಮಾಡುವ ಆದರೆ ಅದನ್ನು ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಲಾಗದ ಎಲ್ಲಕ್ಕೂ ಮೈಕ್ರೊಸಾಫ್ಟ್ ಕಂಪನಿಯಿಂದಲೇ ಖರೀದಿ ಮಾಡಬೇಕಾದ ದಾರಿ.

ಮೊದಲ ದಾರಿಯಲ್ಲಿ ಗ್ರಾಹಕನಿಗೆ (ಇಲ್ಲಿ ಸರ್ಕಾರ) ಸಾಕಷ್ಟು ಸ್ವಾತಂತ್ರ್ಯವಿರುತ್ತದೆ. ಎರಡನೇ ದಾರಿಯಲ್ಲಿ ಎಲ್ಲಕ್ಕೂ ಮೈಕ್ರೋಸಾಫ್ಟ್‌ನ ಗುಲಾಮಿತನವಿರುತ್ತದೆ. ಈವರೆಗೆ ಸರ್ಕಾರ ತನ್ನ ಆಡಳಿತ ಯಂತ್ರಾಂಗದ ಕಂಪ್ಯೂಟರೀಕರಣ ಮಾಡುವಾಗ ಮೊದಲ ದಾರಿಯನ್ನು ಅನುಸರಿಸುತ್ತಿತ್ತು. ಮೊನ್ನೆ ಮೈಕ್ರೋಸಾಫ್ಟ್ ಮಾದರಿಯನ್ನೂ ಬಳಸಬಹುದೆಂಬ ಆದೇಶ ಹೊರಡಿಸಿದೆ. ಇದರ ಮೂಲಕ ಸರ್ಕಾರ ತನ್ನನ್ನು ತಾನೇ ಮೈಕ್ರೋಸಾಫ್ಟ್ ಕುಣಿಕೆಗೆ ಈ ದೇಶವನ್ನು ಒಡ್ಡಿದಂತಾಗಿದೆ. ಏಕೆಂದರೆ ಮೈಕ್ರೋಸಾಫ್ಟ್ ಮಾದರಿಯ ಸಾಫ್ಟ್‌ವೇರ್‌ಗಳು ಅದೇ ಕಂಪನಿಯ ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಎಂಬ ಸಲಕರಣೆಯಿಲ್ಲದೆ ತೆರೆದುಕೊಳ್ಳುವುದಿಲ್ಲ. ಇದು ಮೈಕ್ರೋಸಾಫ್ಟ್ ಎಕ್ಸ್‌ಪಿ ಎಂಬ ಪ್ಲಾಟ್‌ಫಾರ್ಮ್ ಇಲ್ಲದೆ ಕೆಲಸ ಮಾಡುವುದಿಲ್ಲ. ಮತ್ತೆ ಈ ಎಕ್ಸ್‌ಪಿ ಪೆಂಟಿಯಮ್-4 ಎಂಬ ದುಬಾರಿ ಸಲಕರಣೆಯಿಲ್ಲದೆ ಕೆಲಸ ಮಾಡುವುದಿಲ್ಲ. ಆದರೆ ಓಪನ್ ಸೋರ್ಸ್ ಮಾದರಿಯಲ್ಲಿ ಇವ್ಯಾವುದರ ಹಂಗೂ ಇರುತ್ತಿರಲಿಲ್ಲ. ಆದರೆ ಮೈಕ್ರೋಸಾಫ್ಟ್ ಕಂಪನಿಗೆ ಮಾರುಕಟ್ಟೆ ಒದಗಿಸುವ ಏಕೈಕ ಕಾರಣಕ್ಕೆ ಭಾರತ ಸರ್ಕಾರ ಭಾರತೀಯರನ್ನು ಮೈಕ್ರೋಸಾಫ್ಟ್ ಎಂಬ ಬಹುರಾಷ್ಟ್ರೀಯ ಕಂಪನಿಯ ಇ-ದಾಸ್ಯಕ್ಕೆ ಗುರಿಮಾಡುತ್ತಿದೆ. ಏಕೆಂದರೆ ನಂತರದ ದಿನಗಳಲ್ಲಿ ಈ ಕಂಪನಿ ತನ್ನ ಅಪ್ಲಿಕೇಷನ್‌ಗಳನ್ನು ಬದಲಾಯಿಸಿದರೆ ಸರ್ಕಾರದ ಮಾಹಿತಿ ಸರ್ಕಾರಕ್ಕೆ ಸಿಕ್ಕದೇ ಹೋಗಬಹುದು. ಹೀಗಾಗಿ ಶಾಶ್ವತವಾಗಿ ಈ ದಾಸ್ಯ ಮುಂದುವರೆಯುತ್ತಲೇ ಹೋಗುತ್ತದೆ.

ಸ್ವಾವಲಂಬನೆ ಮತ್ತು ಸ್ವಾಭಿಮಾನದ ಆಶಯಗಳಿಲ್ಲದ ದೇಶದಲ್ಲಿ ತಂತ್ರಜ್ಞಾನಗಳು ಸಹ ಹೊಸಬಗೆಯ ಗುಲಾಮೀತನವನ್ನು ಹೇರುತ್ತಲೇ ಇರುತ್ತವೆ. ●

ನೋ ಕಾಮೆಂಟ್ಸ್

"ವಚನಕಾರರ ಸಾಹಿತ್ಯದ ಧಾತುವಾದ 'ಹಸಿವು' ನನ್ನನ್ನು ಮತ್ತೆ ಮತ್ತೆ ಕಾಡುತ್ತದೆ. ಸಂವೇದನಾಶೀಲರಿಗೆಲ್ಲಾ ಈ ಹಸಿವು ಕಾಡಲೇ ಬೇಕು. ಇಂದು ಇಡೀ ದೇಶವನ್ನು ಅಂತಾರಾಷ್ಟ್ರೀಯ ಬಂಡವಾಳ ಲೋಕ ನಿಯಂತ್ರಿಸುತ್ತದೆ. ಅದಕ್ಕೆ ಮಾನವರ ಬಡಿಬಡಿ ಗುಂಪು ಬೇಕು. ಅಖಂಡ ಸಮುದಾಯವಲ್ಲ. ಇದೇ ಸಂದರ್ಭದಲ್ಲಿ ನವಮಾಹತುಶಾಹಿ ಸಾಂಸ್ಕೃತಿಕ ಯಜಮಾನಿಕೆಯ ಪೋಷಾಕು ತೊಟ್ಟು ನಮ್ಮ ಧಾವಂತದ ದಿಕ್ಕನ್ನೇ ಬದಲಿಸಿದೆ. ಬಂಡಾಯ-ದಲಿತ ಸಾಹಿತ್ಯದ ಓಟದ ನೇತೃತ್ವವನ್ನು ಈ ನವ ಉದಾರವಾದಿ ಪ್ರಭುಗಳು ವಹಿಸಿಕೊಂಡದ್ದು ಗೊತ್ತಾಗಲೇ ಇಲ್ಲ. ಈಗ ಸಾಹಿತಿ ತಾನು ಶೋಷಕರ ಪರವೋ? ಶೋಷಿತರ ಪರವೋ? ಎಂದು ನಿರ್ಧರಿಸಲೇ ಬೇಕಾದ ಸಂದರ್ಭ ಎದುರಾಗಿದೆ."

- ಗೀತಾ ನಾಗಭೂಷಣ, ಸಮ್ಮೇಳನದ ಅಧ್ಯಕ್ಷರು

"ಹಂಪಿ ವಿವಿಯ ಜಮೀನನ್ನು ವಿಜಯನಗರ ಟ್ರಸ್ಟ್‌ಗೆ ಪರಭಾರೆ ಮಾಡುತ್ತಿರುವುದು ಅಕ್ಷಮ್ಯ. ಈ ಕ್ರಮದಿಂದಾಗಿ ಕ್ರಮೇಣ ಖಾಸಗಿ ಮತ್ತು ಅರೆಸರ್ಕಾರಿ ಸಂಸ್ಥೆಗಳು ವಿವಿ ಆವರಣ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದೇ ರೀತಿ ಅನುಮತಿ ನೀಡುತ್ತಾ ಹೋದರೆ ಮುಂದೆ ಅಲ್ಲಿ ರೆಸಾರ್ಟ್‌ಗಳೂ ತಲೆ ಎತ್ತುತ್ತವೆ. ಅಧಿಕಾರ ಇದೆ ಎಂದು ಏನು ಮಾಡುವುದೂ ಸರಿಯಲ್ಲ."

- ಕಲ್ಬುರ್ಗಿ ಎಂ.ಎಂ. ವಿಶ್ರಾಂತ ಕುಲಪತಿ

"ನಮ್ಮ ರಾಜ್ಯದ ತಲಾ ವರಮಾನವು 50,000 ರೂ. ಆಗಿಬಿಟ್ಟರೆ ಸಮಸ್ಯೆ ಬಗೆಹರಿಯುವುದಿಲ್ಲ. ವಾಸ್ತವವಾಗಿ ಬಳ್ಳಾರಿ ಜಿಲ್ಲೆಯ 2006-07ನೇ ಸಾಲಿನ ತಲಾ ವರಮಾನ ರೂ. 50,316. ರಾಜ್ಯದ ಸರಾಸರಿ ತಲಾ ವರಮಾನ ರೂ. 35,469. ಆದರೆ ಬಳ್ಳಾರಿ ಜಿಲ್ಲೆಯ ಜನರ ಬದುಕು ಶೋಚನೀಯವಾಗುತ್ತಾ ನಡೆದಿದೆ. ಅಭಿವೃದ್ಧಿಯು ಕೇವಲ ವರಮಾನದ ಸಂಗತಿಯಲ್ಲ. ಅಭಿವೃದ್ಧಿಯಲ್ಲಿ ಜನರ ಆರೋಗ್ಯ, ಲಿಂಗ ಸಮಾನತೆ, ಶಿಕ್ಷಣ, ಸಾಕ್ಷರತೆ, ಪೌಷ್ಟಿಕತೆ, ಮುಂತಾದವು ಧಾತು ಸದೃಶ ಸಂಗತಿಗಳಾಗಿವೆ."

- ಡಾ.ಟಿ.ಆರ್. ಚಂದ್ರಶೇಖರ್

"ಶಿಕ್ಷಣ ರಾಷ್ಟ್ರೀಕರಣ ಆಗಲು ಸಾಧ್ಯವೇ ಇಲ್ಲ. ಇಡೀ ದೇಶವನ್ನು ಎಲ್ಲರೂ ಸೇರಿಕೊಂಡು ಕೊಳ್ಳೆಹೊಡೆಯುತ್ತಿದ್ದಾರೆ. ಈ ದೇಶ ಬಹಳ ಕೆಟ್ಟುಹೋಗಿದೆ ಕಣ್ರೀ!"

- ಎಲ್. ಬಸವರಾಜು

"ಕಳೆದ ಚುನಾವಣೆಯ ವೇಳೆಯಲ್ಲಿ ಬಿಜೆಪಿ ಒಗ್ಗಟ್ಟಿನ ಮನೆಯಾಗಿರಲಿಲ್ಲ. ಇದು ಪಕ್ಷದ ಬೆಂಬಲಿಗರಿಗೆ ಮತ್ತು ಕಾರ್ಯಕರ್ತರಿಗೆ ಆಶಾಭಂಗ ಉಂಟುಮಾಡಿತು. ಲೋಕಸಭೆಯಲ್ಲಿ ನಮ್ಮ ನಿರಾಶಾದಾಯಕ ಪ್ರದರ್ಶನಕ್ಕೆ ಇದೇ ಕಾರಣ."

- ಅಡ್ವಾನಿ

"ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಸಂಕಷ್ಟಕ್ಕೆ ಸ್ಪಂದಿಸುವ ನೆಪದಲ್ಲಿ ಮಠಗಳು ಹತ್ತುಪಟ್ಟು ಲೂಟಿ ಮಾಡಿವೆ. ದಾನದ ಹಿಂದೆ ಕ್ರೌರ್ಯದ ಮುಖವಿದೆ. ನೆರೆ ಸಂತ್ರಸ್ತರಿಗೆ ನಾಗರಿಕ ಸಮಾಜ ಬೆಂಬಲಕ್ಕೆ ನಿಂತರೆ ಜನಪ್ರತಿನಿಧಿಗಳು ರೆಸಾರ್ಟ್‌ನಲ್ಲಿದ್ದರು."

- ಡಾ. ರಹಮತ್ ತರೀಕೆರೆ

ರಾಜೀನಾಮೆ ಕೊಡಿ!

"ನಗರದ ನೀರಿನ ಸಮಸ್ಯೆಯನ್ನು ಬಗೆಹರಿಸಲು ನನ್ನ ಹತ್ತಿರ ಯಾವುದೇ ಮಾರ್ಗೋಪಾಯಗಳಿಲ್ಲ. ನಾನೇನು ಮಾಡಲಿ ನೀವೇ ಹೇಳಿ."

- ಕಟ್ಟಾ ಸುಬ್ರಹ್ಮಣ್ಯ ನಾಯುಡು

ವಿಷ್ಣು ದಾರಿಯಲ್ಲಿ ಸೋನು ನಿಗಮ್!

"ನನ್ನನ್ನು ನೀವು ಹುಚ್ಚ ಎಂದುಕೊಳ್ಳಬಹುದು. ಆದರೆ ನಾನು ಹೋದ ವರ್ಷವೇ ಸತ್ತುಹೋಗಿರುವೆ. ಏಕೆಂದರೆ ನಾನು ಏನು ಅಂದುಕೊಂಡಿದ್ದೆನೋ ಅದು ನಾನಾಗಿರಲಿಲ್ಲ!"

- ಸೋನು ನಿಗಮ್

ಆದರೆ ನಿಮ್ಮ ಮಗನಿಗೆ ಮಾತ್ರ ಮನುಷ್ಯರ ರಕ್ತವನ್ನು ಕುಡಿಸಿದ್ದೇಕೆ?

"ಆಕಳು, ಮೇಕೆ ಸೇರಿದಂತೆ ಇತರ ಪ್ರಾಣಿಗಳ ಹಾಲನ್ನೂ ಮತ್ತು ಕೋಳಿ ಮೊಟ್ಟೆಯನ್ನೂ ಸೇವಿಸುವುದನ್ನು ಸಾರ್ವಜನಿಕರು ನಿಲ್ಲಿಸಬೇಕು. ಅಲ್ಲದೆ ಮೊಟ್ಟೆಯನ್ನೂ ಸಹ. ಏಕೆಂದರೆ ಮೊಟ್ಟೆ ಸೇವನೆ ಭ್ರೂಣ ಹತ್ಯೆಗೆ ಸಮ."

- ಮನೇಕಾ ಗಾಂಧಿ

ಆದರೆ ಜಾಗತೀಕರಣ ಕುಲಕಸುಬನ್ನೇ ನಾಶಮಾಡುತ್ತಿದೆಯಲ್ಲಾ!


"ಆರಾಮ ಸಂಸ್ಕೃತಿಯಲ್ಲಿ ಜಾನಪದ ಹುಟ್ಟುವುದಿಲ್ಲ. ಜಾನಪದಕ್ಕೂ ಕೆಲಸಕ್ಕೂ ನೇರ ಸಂಬಂಧವಿದ್ದು ಜಾಗತೀಕರಣ ಅದನ್ನು ಬದಲಿಸಲಾರದು. ಅವುಗಳ ಧನಾತ್ಮಕ ಅಂಶಗಳನ್ನು ನಾವು ರೂಢಿಸಿಕೊಳ್ಳಬೇಕಷ್ಟೆ."

-ರಂಗಾರೆಡ್ಡಿ ಕೋಡಿರಾಂಪುರ

...ದೆಂಥಾ ಕಮ್ಯೂನಿಸ್ಟ್ ಶಿಸ್ತು?

"ರೋಗಿಯನ್ನು ಬದುಕಿಸುವುದಕ್ಕಾಗಿ ಆತನ ರೋಗವನ್ನು ಗುಣಪಡಿಸ ...ೇ ಹೊರತು ರೋಗವನ್ನು ನಿವಾರಣೆ ಮಾಡುವುದಕ್ಕಾಗಿ ರೋಗಿಯನ್ನೇ ...ಲ್ಲಬಾರದು."

...ಇವು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ನಾಯಕ, ಚೀನಾ ಕ್ರಾಂತಿಯ ...ಕಾರ ಕಾಮ್ರೇಡ್ ಮಾವ್ರೋತ್ಸೆ ತುಂಗ್ ಅವರ ಮಾತುಗಳು. ಕಮ್ಯೂನಿಸ್ಟ್ ...ೊಳಗೆ ಬೇರೂರಿರುವ ಅನ್ಯ ವರ್ಗೀಯ ಧೋರಣೆಗಳನ್ನು ತೊಡೆದು ... ಕಾರ್ಮಿಕ ವರ್ಗದ ಉದಾತ್ತ ಮೌಲ್ಯಗಳನ್ನು, ಶಿಸ್ತನ್ನು ಬೆಳೆಸಿಕೊಳ್ಳುವ ...ದ್ದೇಶದಿಂದ ಪರಸ್ಪರ ವಿಮರ್ಶೆ ಮತ್ತು ಆತ್ಮವಿಮರ್ಶೆಗಳೆಂಬ ಸಾಧನಗಳನ್ನು



...ಸುವಾಗ ಕಮ್ಯೂನಿಸ್ಟರಾದವರು ವಹಿಸಬೇಕಾದ ಎಚ್ಚರಿಕೆಯನ್ನು ಅವರು ...ರೀತಿ ಬಹಳ ಮಾರ್ಮಿಕವಾಗಿ ಹೇಳುತ್ತಾರೆ. ಅಂದರೆ, ಒಬ್ಬ ಕಮ್ಯೂನಿಸ್ಟನ ...ೇಲೆ ಮಾಡುವ ವಿಮರ್ಶೆಗಳು ಆತನಲ್ಲಿರುವ ಅನ್ಯವರ್ಗೀಯ ...ೋರಣೆಗಳನ್ನು, ತಪ್ಪು ತಿಳಿವಳಿಕೆಗಳನ್ನು ಅರ್ಥಮಾಡಿಕೊಂಡು ...ತೆದುಹಾಕುವುದಕ್ಕೆ, ಹಾಗೂ ಆ ಮೂಲಕ ಆತ ಒಬ್ಬ ನೈಜ ಮತ್ತು ...ದ್ಧ ಕಮ್ಯೂನಿಸ್ಟನಾಗಿ ಬೆಳೆಯುವುದಕ್ಕೆ ನೆರವಾಗಬೇಕೇ ಹೊರತು ... ಆತನನ್ನೇ ನಿರ್ಮೂಲನೆ ಮಾಡುವಂತಿರಬಾರದು. ಒಬ್ಬ ಕಮ್ಯೂನಿಸ್ಟನ ...ರೆ ಮತ್ತೊಬ್ಬ ಕಮ್ಯೂನಿಸ್ಟ್ ವಿಮರ್ಶೆ ಮಾಡುವಾಗ ಈ ಎಚ್ಚರಿಕೆಯನ್ನು ... ಇಟ್ಟುಕೊಂಡಿರಬೇಕು ಎಂಬುದು ಅದರ ತಾತ್ಪರ್ಯ. ಮಾವ್ರೋವಾದಿ ...ಲ್ಲದಿದ್ದರೂ ಮಾವ್ರೋ ಪ್ರತಿಪಾದಿಸಿದ ಈ ತತ್ವವನ್ನು ವಿಶ್ವದ ಎಲ್ಲಾ ...ಮ್ಯೂನಿಸ್ಟರೂ ಒಪ್ಪಿಕೊಳ್ಳುತ್ತಾರೆ. ಅದಕ್ಕೆ ನಮ್ಮ ಭಾರತ ಕಮ್ಯೂನಿಸ್ಟ್ ಪಕ್ಷ ...ಮಾರ್ಕ್ಸ್‌ವಾದಿ (ಸಿಪಿಐ-ಎಂ) ಕೂಡ ಹೊರತಲ್ಲ. ಸೈದ್ಧಾಂತಿಕವಾಗಿ ... ಮಾವ್ರೋವಾದವನ್ನು ಎತ್ತಿಹಿಡಿಯುವುದಿಲ್ಲವಾದರೂ ಮಾವ್ರೋ ...ರ ಈ ವಿಚಾರವನ್ನು ಒಪ್ಪಿಕೊಳ್ಳುತ್ತದೆ. ಆದರೆ, ಎಷ್ಟರಮಟ್ಟಿಗೆ ಅದನ್ನು ...ಚರಣೆಗಿಳಿಸುತ್ತದೆ ಎಂಬುದು ಪ್ರಶ್ನಾರ್ಹವೆ. ಇತ್ತೀಚಿನ ವರದರಾಜನ್ ...ರ ಆತ್ಮಹತ್ಯೆ ಈ ಅನುಮಾನಕ್ಕೆ ಇನ್ನಷ್ಟು ನೀರು ಗೊಬ್ಬರ ಹಾಕುತ್ತದೆ.

...ತಮಿಳುನಾಡಿನ ಡಬ್ಲ್ಯೂ.ಆರ್. ವರದರಾಜನ್ ಅವರು ಹತ್ತಾರು ...ಗಳಿಂದ ಕಮ್ಯೂನಿಸ್ಟ್ ಮೌಲ್ಯಗಳಿಗಾಗಿ, ಸಿಪಿಎಂ ಪಕ್ಷಕ್ಕಾಗಿ ಬಹಳ ...ಮಾಣಿಕವಾಗಿ ಕೆಲಸ ಮಾಡಿದವರು. ಸಿಪಿಎಂ ಪಕ್ಷದ ಕಾರ್ಮಿಕ ...ಟನೆಗಳಿಗೆ ನೇತೃತ್ವ ಕೊಟ್ಟು ಅನೇಕ ಕಾರ್ಮಿಕ ಹೋರಾಟಗಳನ್ನು ...ರಹಿತವಾಗಿ ಮುನ್ನಡೆಸಿದವರು. ಬ್ರಾಹ್ಮಣ ಸಮುದಾಯದ ಹಿನ್ನೆಲೆಯಿಂದ ...ು ದಲಿತ ಮಹಿಳೆಯನ್ನು ಮದುವೆಯಾಗುವ ಮೂಲಕ ಕಮ್ಯೂನಿಸ್ಟ್ ...ಲ್ಯಗಳು ಕೇವಲ ಪಠಿಸುವುದಕ್ಕಲ್ಲ, ಆಚರಿಸುವುದಕ್ಕೆ ಎಂಬುದನ್ನು ...ರಿಸಿಕೊಟ್ಟವರು. 64ರ ಇಳಿವಯಸ್ಸಿನಲ್ಲೂ ಇಪ್ಪತ್ತರ ಹರೆಯದ ...ನಕನಂತೆ ಪಾದರಸದಂತೆ ಓಡಾಡಿಕೊಂಡು ಕೆಲಸ ಮಾಡುತ್ತಿದ್ದವರು. ...ಸಿದ್ಧಾಂತಗಳಿಗಾಗಿನ ಅವರ ಬದ್ಧತೆ, ರಾಜಿರಹಿತವಾಗಿ ಹೋರಾಡುವ ... ಕೆಚ್ಚು, ಕಾರ್ಯಕರ್ತರಿಗೆ, ಜನಸಮೂಹಗಳಿಗೆ ಮಾದರಿಯಾಗಬಲ್ಲ ... ಸರಳಜೀವನ, ಅನುಕರಣೀಯವಾಗಿದ್ದ ಅವರ ಸಾಂಸ್ಕೃತಿಕ ಮೌಲ್ಯಗಳು ...ೂ ಎಂತಹ ತ್ಯಾಗಕ್ಕೂ ಸಿದ್ಧವಾಗಿ ನಿಲ್ಲುವ ಅವರ ಬದ್ಧತೆ–ಇಂತಹ ... ಹಲವು ಕಮ್ಯೂನಿಸ್ಟ್ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದ ...ರಾಜನ್ ಹೋರಾಟದ ಪ್ರಕ್ರಿಯೆಯಲ್ಲಿ ಒಬ್ಬ ಪ್ರಬುದ್ಧ ಕಮ್ಯೂನಿಸ್ಟ್ ...ಕನಾಗಿ ಹೊರಹೊಮ್ಮಿದವರು; ಕೇವಲ ಸಿಪಿಎಂ ಪಕ್ಷದ ತಮಿಳುನಾಡು ...ಕ್ಕೆ ಮಾತ್ರವಲ್ಲ, ಅಖಿಲ ಭಾರತ ಪಕ್ಷಕ್ಕೂ ನಾಯಕರಾಗಿ ಬೆಳೆದು ... ಅತ್ಯುನ್ನತ ಅಂಗವಾದ 'ಕೇಂದ್ರ ಸಮಿತಿ'ಯ ಸದಸ್ಯರೂ ಆಗಿದ್ದವರು. ...ಹ ವರದರಾಜನ್ ಮೊನ್ನೆ ಚೆನ್ನೈನ ಸಮುದ್ರ ತಟದಲ್ಲಿ ಹಲವು ...ಳ ಕಾಲ ಅನಾಥ ಹೆಣವಾಗಿ ಬಿದ್ದಿದ್ದರು. ಅವರ ಹೆಂಡತಿ ಸರಸ್ವತಿಯವರು ...ವ ತನ್ನ ಗಂಡನದ್ದೇ ಎಂದು ಗುರುತಿಸಿದ ಮೇಲಷ್ಟೇ ವರದರಾಜನ್ ...ಂ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಬಯಲಿಗೆ ಬಂದಿದ್ದು.

...ವರದರಾಜನ್ ವೈಯಕ್ತಿಕ ಬದುಕಿನಲ್ಲುಂಟಾದ ಬೆಳವಣಿಗೆಗಳು ಹಾಗೂ ...ಂತ ಮುಖ್ಯವಾಗಿ ತನ್ನ ಕುರಿತಂತೆ ಪಕ್ಷದ ನಾಯಕತ್ವ ತೆಗೆದುಕೊಂಡ ...ರ್ಣಯಗಳೇ ಅಂತಿಮವಾಗಿ ಅವರನ್ನು ಬಲಿತೆಗೆದುಕೊಂಡವು ಎಂಬುದು ...ಮ್ಮೇಟಕ್ಕೇ ಕಾಣುವ ವಿಚಾರ. "ತಮ್ಮ ಬಳಿ ಸಹಾಯವನ್ನರಸಿ ಬಂದಿದ್ದ ...ಮಹಿಳೆಗೆ ಎಸ್‌ಎಂಎಸ್ ಮೂಲಕ ಕಿರುಕುಳ ಕೊಡುತ್ತಿದ್ದರು" ಎಂಬ ...ರೋಪವನ್ನು ವರದರಾಜನ್ ಅವರ ಮೇಲೆ ಹೊರಿಸಲಾಗಿತ್ತು. ಇದು ...ತಿಯೊಂದಿಗಿನ ಸಂಬಂಧ ಹಳಸುವುದಕ್ಕೂ ಕಾರಣವಾಗಿತ್ತು ಎಂದೂ ...ದು ಹೇಳುತ್ತಾರೆ. ಈ ವಿಚಾರ ಕೊನೆಗೆ ಕೇಂದ್ರ ಸಮಿತಿಯವರೆಗೆ ...ಗಿ ಚರ್ಚೆಯಾಗಿದೆ. ಉನ್ನತ ನಾಯಕತ್ವ ಸ್ಥಾನದಲ್ಲಿರುವ ವ್ಯಕ್ತಿಯು ಹೀಗೆ ಸಾಂಸ್ಕೃತಿಕ ಅಧಃಪತನಕ್ಕೆ ಈಡಾಗಿದ್ದಾನೆಂದು ಅವರ ಮೇಲೆ ದೊಡ್ಡ ಮಟ್ಟದ ವಾಗ್ದಾಳಿ ನಡೆಸಲಾಯಿತು. ಕೊನೆಗೆ, "ಅಪಕಮ್ಯೂನಿಸ್ಟೀಕರಣಕ್ಕಾಗಿ" ಅವರನ್ನು ಪಕ್ಷದ, ಕಾರ್ಮಿಕ ಸಂಘಟನೆಗಳ ಎಲ್ಲಾ ಹುದ್ದೆಗಳಿಂದ ಕಿತ್ತುಹಾಕಲಾಯಿತು. ತನ್ನ ಇಡೀ ಜೀವಮಾನವನ್ನು ಪಕ್ಷಕ್ಕಾಗಿ, ಸಿದ್ಧಾಂತಕ್ಕಾಗಿ ಮುಡುಪಿಟ್ಟು ಬದ್ಧತೆಯಿಂದ ಕೆಲಸ ಮಾಡಿದ ತಮ್ಮನ್ನು ಈ ರೀತಿಯಲ್ಲಿ ನಿಕೃಷ್ಟವಾಗಿ ನಡೆಸಿಕೊಂಡು ಅಪಮಾನ ಮಾಡಿದ್ದರಿಂದ ಅತೀವವಾಗಿ ನೊಂದುಕೊಂಡ ವರದರಾಜನ್ ಆ ನೋವಿನ ಭಾರವನ್ನು ತಾಳಲಾರದೇ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಇಲ್ಲಿ ವರದರಾಜನ್ ಅವರು ನಿಜಕ್ಕೂ ಎಸ್‌ಎಂಎಸ್ ಮೂಲಕ ಮಹಿಳೆಯೊಬ್ಬಳಿಗೆ ಕಿರುಕುಳ ಕೊಟ್ಟಿದ್ದರೆ ಎಂಬ ವಿಚಾರದ ಸತ್ಯಾಸತ್ಯತೆಯ ಬಗ್ಗೆ ನಮಗೇನೂ ಹೆಚ್ಚು ತಿಳಿಯದು. ಪ್ರಶ್ನೆ ಅದಲ್ಲ, ಒಂದು ವೇಳೆ ಅದು ನಿಜವಾಗಿದ್ದರೂ ಅದಕ್ಕೆ ಕೊಟ್ಟ ಶಿಕ್ಷೆ ಮಾತ್ರ ಬಹಳ ದೊಡ್ಡದಾಗಿದೆ ಎಂಬುದೇ ಕಳವಳದ ವಿಚಾರವಾಗಿದೆ. ವರದರಾಜನ್ ಮೇಲಿದ್ದ ಆರೋಪ ನಿಜವೆಂದು ಭಾವಿಸಿದರೂ ಕಮ್ಯೂನಿಸ್ಟ್ ಚರಿತ್ರೆಯಲ್ಲಿ ಅವರು ಒಂದು ಅಪವಾದವೇನಲ್ಲ. ಒಂದು ಕಾಲದಲ್ಲಿ ಉದಾತ್ತ ಕಮ್ಯೂನಿಸ್ಟ್ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದ, ಕೆಚ್ಚೆದೆಯಿಂದ ಹೋರಾಡಿದ, ದಣಿವರಿಯದಂತೆ ಕೆಲಸ ಮಾಡಿದ, ಸಿದ್ಧಾಂತಕ್ಕಾಗಿ ಎಂತಹ ತ್ಯಾಗಕ್ಕೂ ಸಿದ್ಧವಾಗಿದ್ದ, ಧ್ಯೇಯೋದ್ದೇಶಗಳಲ್ಲಿ ಯಾವತ್ತೂ ಬದ್ಧತೆ ಪ್ರದರ್ಶಿಸಿದ ಅನೇಕ ಕಮ್ಯೂನಿಸ್ಟ್ ನಾಯಕರೂ ಕೆಲವೊಮ್ಮೆ ಯಾವುದೋ ಸಂದರ್ಭದಲ್ಲಿ ಹೀಗೆ ದಾರಿಯಿಂದ ಜಾರಿದ ಉದಾಹರಣೆಗಳಿವೆ. ಹಾಗಂತ ಅವರನ್ನು ನಿರ್ಮೂಲನೆ ಮಾಡಿಬಿಡುವುದಲ್ಲ. "ರೋಗಿಯನ್ನು ಗುಣಪಡಿಸುವ ಉದ್ದೇಶದಿಂದ ರೋಗವನ್ನು ಕೊಲ್ಲುವ" ಹಾಗೆ ಅವರಲ್ಲಿರುವ ತಪ್ಪು ಪ್ರವೃತ್ತಿಗಳನ್ನು ವಿಮರ್ಶೆಯ ಮೂಲಕ ಸರಿತಿದ್ದಬೇಕೇ ಹೊರತು "ರೋಗದೊಂದಿಗೆ ರೋಗಿಯನ್ನೂ ನಿರ್ಮೂಲನೆ ಮಾಡುವ" ರೀತಿಯಲ್ಲಿ ಅಲ್ಲ. ಸಿಪಿಎಂನ ನಾಯಕತ್ವ ಏನನ್ನು ಮಾಡಬೇಕಿತ್ತೋ ಅದನ್ನು ಮಾಡಲಿಲ್ಲ, ಏನನ್ನು ಮಾಡಬಾರದಿತ್ತೋ ಅದನ್ನೇ ಮಾಡಿತು. ಪರಿಣಾಮವಾಗಿ ಭಾರತೀಯ ಕಮ್ಯೂನಿಸ್ಟ್ ಚಳವಳಿಗೆ ಬಹಳಷ್ಟು ಕೊಡುಗೆ ನೀಡಿದ, ಮುಂದೆಯೂ ತಮ್ಮ ಶ್ರೀಮಂತ ಅನುಭವಗಳಿಂದ ಕೊಡುಗೆ ನೀಡಬಹುದಿದ್ದ ವರದರಾಜನ್‌ನನ್ನು ಕಳೆದುಕೊಂಡಿತು. ಈ ರೀತಿಯ ಅಭಿಪ್ರಾಯಕ್ಕೆ ಬರುವುದಕ್ಕೂ ಕೆಲವು ಕಾರಣಗಳಿವೆ.

ಮೊದಲನೆಯದಾಗಿ ವರದರಾಜನ್ ಅವರ ವಿರುದ್ಧ ವಾಗ್ದಾಳಿ ನಡೆಸಿದ, ಅವರಿಂದ ಎಲ್ಲಾ ಹುದ್ದೆಗಳನ್ನು, ಜವಾಬ್ದಾರಿಗಳನ್ನು ಕಿತ್ತುಕೊಂಡ ಕೇಂದ್ರ ಸಮಿತಿಯ ಸಭೆಯಲ್ಲಿ ಬಹಳಷ್ಟು ಸದಸ್ಯರು ಹಾಜರಿರಲಿಲ್ಲ. ಒಬ್ಬ ಕೇಂದ್ರ ಸಮಿತಿಯ ಸದಸ್ಯನನ್ನು ಇಷ್ಟು ಹೀನಾಯವಾಗಿ ಕಿತ್ತುಹಾಕುವ ಮಹತ್ವಪೂರ್ಣ ನಿರ್ಧಾರ ತೆಗೆದುಕೊಳ್ಳುವಾಗ ಬಹುತೇಕ ಎಲ್ಲಾ ಸದಸ್ಯರೂ ಹಾಜರಿರುವುದು ಸೂಕ್ತ ಎಂದು ಹಾಜರಿದ್ದವರಲ್ಲಿ ಬಹುತೇಕರು ಭಾವಿಸಲೇ ಇಲ್ಲ. ಅಂತಹ ನಿರ್ಣಯವನ್ನು ಕೆಲವರು ವಿರೋಧಿಸಿದರೂ ಅದು ಪ್ರಕಾಶ್ ಕಾರಟ್‌ನ ಅಬ್ಬರದೆದುರು ಗೌಣವಾಗಿ ಹೋಯಿತು.



ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

ಎರಡನೆಯದಾಗಿ, ವರದರಾಜನ್ ಅವರಿಗೆ ಸರಿತಿದ್ದಿಕೊಳ್ಳುವುದಕ್ಕೆ ಒಂದು ಚಿಕ್ಕ ಅವಕಾಶವನ್ನೂ ಕೊಡದೇ ಏಕಾಏಕಿ ಕಿತ್ತುಹಾಕಿದ್ದು ಅಪ್ರಜಾತಾಂತ್ರಿಕವಾದದ್ದು. ಬೂರ್ಷ್ವಾ ವ್ಯವಸ್ಥೆಯೂ ಕೂಡ ತಪ್ಪು ಮಾಡಿದವರಿಗೆ ಸರಿತಿದ್ದಿಕೊಳ್ಳುವುದಕ್ಕೆ, ಬದಲಾಗುವುದಕ್ಕೆ ಅವಕಾಶ ಕೊಡುತ್ತದೆ. ಆದರೆ, ಆ ವ್ಯವಸ್ಥೆಗಿಂತ ಎಷ್ಟೋಪಾಲು ಉತ್ತಮ ವ್ಯವಸ್ಥೆ ತರಲು ಹೊರಟಿರುವ ಸಿಪಿಎಂ ತನ್ನದೇ ಉನ್ನತ ನಾಯಕನೊಬ್ಬನಿಗೆ ಒಂದು ಸಣ್ಣ ಅವಕಾಶವನ್ನೂ ಕೊಡಲಿಲ್ಲ.

ಕೇಂದ್ರ ಸಮಿತಿ ವರದರಾಜನ್‌ನನ್ನು ನಡೆಸಿಕೊಂಡ ರೀತಿಯಿಂದ ಹಾಗೂ ಅವರ ಸಾವಿನಿಂದ ಅತೀವವಾಗಿ ನೊಂದಿದ್ದ ಸಿಪಿಎಂನ ನಾಯಕನೊಬ್ಬ "ನಮ್ಮನ್ನು ಕೊಲ್ಲುವುದಕ್ಕೆ ವರ್ಗಶತ್ರುಗಳೇ ಬರುವ ಅವಶ್ಯಕತೆಯಿಲ್ಲ. ಆ ಕೆಲಸವನ್ನು ನಮ್ಮ ನಾಯಕರೇ ಮಾಡುತ್ತಾರೆ" ಎಂದು ಹೇಳುತ್ತಾನೆಂದರೆ ಪಕ್ಷದ ನಾಯಕತ್ವದಲ್ಲಿರುವ ಅಧಿಕಾರಶಾಹಿ ಧೋರಣೆಯ ಬಗ್ಗೆ ಕೆಳಗಿನವರಲ್ಲಿ ಎಷ್ಟರಮಟ್ಟಿಗೆ ಅಸಮಾಧಾನವಿದೆ ಎಂಬುದು ಅರ್ಥವಾಗುತ್ತದೆ.

ವಾಸ್ತವದಲ್ಲಿ ಲೆನಿನ್ ಹೇಳಿದ "ಉಕ್ಕಿನ ಶಿಸ್ತು" ಇದಲ್ಲ. ಅದು ಒಂದು ರೀತಿಯಲ್ಲಿ ಸಿಪಿಎಂನಿಂದ "ವಿರೂಪಗೊಳ್ಳಲ್ಪಟ್ಟ ಉಕ್ಕಿನ ಶಿಸ್ತು". ಎಲ್ಲಿಯತನಕ ಸಿಪಿಎಂ ತನ್ನ ಈ ಧೋರಣೆಯನ್ನು, ಸಂಕುಚಿತ ಮನೋಭಾವವನ್ನು, "ವಿರೂಪಗೊಳ್ಳಲ್ಪಟ್ಟ ಉಕ್ಕಿನ ಶಿಸ್ತ"ನ್ನು ಸರಿತಿದ್ದಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ತಾನೂ ಉದ್ಧಾರವಾಗುವುದಿಲ್ಲ, ಕಮ್ಯೂನಿಸ್ಟ್ ಚಳವಳಿಯನ್ನು ಮುನ್ನಡೆಸುವುದಕ್ಕೂ ಅದರಿಂದ ಸಾಧ್ಯವಾಗುವುದಿಲ್ಲ. ●



ತೆಲಂಗಾಣದ ಅರಣ್ಯರೋದನ

ಆತನ ಹೆಸರು ಸಿರಿಪುರಂ ಯಾದಯ್ಯ. ವಯಸ್ಸಿನ್ನೂ ಹತ್ತೊಂಭತ್ತು ದಾಟಿರದ, ಆದರೆ ಸೂಕ್ಷ್ಮ ಸಂವೇದನೆಯ ಹುಡುಗ. ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯದವನು. ಹನ್ನೆರಡನೇ ತರಗತಿಯಲ್ಲಿ ಓದುತ್ತಿದ್ದ ಎಳೆಯ ಹುಡುಗನಾಗಿದ್ದಾಗಲೇ ತಂದೆತಾಯಿಗಳನ್ನು ಕಳೆದುಕೊಂಡು ಅನಾಥನಾಗಿದ್ದ ಆತನನ್ನು ಪೊರೆಯಬೇಕಿದ್ದ ಸಹೋದರರೂ ತೊರೆದುಬಿಟ್ಟಿದ್ದರು. ಅನಿವಾರ್ಯವಾಗಿ ಅಲ್ಲಿ ಇಲ್ಲಿ ಹಾದಿಬೀದಿ ಸುತ್ತುತ್ತಾ, ಕಷ್ಟಪಟ್ಟು ಕೆಲಸ ಮಾಡುತ್ತಾ ಕೊನೆಗೆ ಸರ್ಕಾರಿ ಅನಾಥಶಾಲೆಗೆ ಸೇರಿಕೊಂಡು ಹೇಗೋ ನಿಧಾನವಾಗಿ ಬದುಕಿನ ಮೆಟ್ಟಿಲುಗಳನ್ನೇರಲಾರಂಭಿಸಿದ್ದ. ಅಲ್ಲಿ ಹತ್ತನೇ ತರಗತಿಯ ತನಕ ಓದಿ ಆಮೇಲೆ ಮತ್ತೆ ಫೋಟೋ ಸ್ಟೂಡಿಯೋದಲ್ಲಿ, ರೆಸ್ಟೋರೆಂಟ್‌ಗಳಲ್ಲಿ ಪಾರ್ಟ್‌ಟೈಂ ಕೆಲಸ ಮಾಡುತ್ತಾ ಪಿಯುಸಿ ಓದಲಾರಂಭಿಸಿದ್ದ. ಈ ಪಾರ್ಟ್ ಟೈಂ ಕೆಲಸದಿಂದ ಬರುತ್ತಿದ್ದ ಸ್ವಲ್ಪ ಸಂಬಳದಲ್ಲೇ ಅರ್ಧ ಭಾಗವನ್ನು ನಗರದಲ್ಲಿದ್ದ ಒಂದು ಅನಾಥ ಕುರುಡು ಮಕ್ಕಳ ಹಾಸ್ಟೆಲ್‌ಗೆ ಕೊಡುತ್ತಿದ್ದ!

ಮೊನ್ನೆ ಫೆಬ್ರವರಿ 20ರಂದು ಹೈದರಾಬಾದಿನಲ್ಲಿರುವ ಉಸ್ಮಾನಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಪ್ರತ್ಯೇಕ ತೆಲಂಗಾಣ ರಾಜ್ಯ ರಚಿಸಬೇಕೆಂಬ ಬೇಡಿಕೆಯಿಟ್ಟು ಆಂಧ್ರ ಪ್ರದೇಶ ವಿಧಾನಸಭೆಯನ್ನು ಮುತ್ತಿಗೆ ಹಾಕುವುದಕ್ಕೆ ಹೊರಟಿದ್ದರು. ಹೈದರಾಬಾದ್ ಪೊಲೀಸ್ ಕಮೀಷನರ್ ಎ.ಕೆ.ಖಾನ್ ಬೇರೆ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹೋರಾಟಕ್ಕೆ ಸೇರಿಕೊಳ್ಳಬಾರದೆಂದು ಕೇಳಿಕೊಂಡಿದ್ದರು. ಈ ಪ್ರತಿಭಟನೆಗೆ ಬೇರೆ ಕಡೆಯಿಂದ ವಿದ್ಯಾರ್ಥಿಗಳು ಬಾರದಂತೆ ತಡೆಯಲು ಪೊಲೀಸರು ಯತ್ನಿಸಿದ್ದರು. ಆದರೂ ಅದನ್ನು ಲೆಕ್ಕಿಸದೇ ಬೇರೆ ಬೇರೆ ವಿಶ್ವವಿದ್ಯಾಲಯ, ಕಾಲೇಜುಗಳಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಸಾಗರ ಉಸ್ಮಾನಿಯಾ ಕ್ಯಾಂಪಸ್ಸಿಗೆ ಹರಿದುಬಂದಿತ್ತು. ಅವರ ಪ್ರತಿಭಟನಾ ಮೆರವಣಿಗೆ ಇನ್ನೇನು ಕ್ಯಾಂಪಸ್ಸಿನಿಂದ ಹೊರಡಬೇಕು ಎನ್ನುವಷ್ಟರಲ್ಲಿ ಬಡಿಗೆ ಬಂದೂಕುಗಳಿಂದ ಸಿದ್ಧವಾಗಿದ್ದ ಪೊಲೀಸರು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ ತಡೆಯಲು ಪ್ರಯತ್ನಿಸಿದರು. ಅದೇ ವೇಳೆಯಲ್ಲಿ ಪ್ರತ್ಯಕ್ಷನಾದ ಸಿರಿಪುರಂ ಯಾದಯ್ಯ "ಜೈ ತೆಲಂಗಾಣ" ಎನ್ನುತ್ತಾ ಮೈಮೇಲೆ ಸೀಮೆಎಣ್ಣೆ ಸುರಿದು ಕೊಂಡು ಬೆಂಕಿಹಚ್ಚಿಕೊಂಡುಬಿಟ್ಟ. ಇಡೀ ಮೈಗೆ ಬೆಂಕಿಹೊತ್ತಿಕೊಂಡು ಉರಿಯುತ್ತಿದ್ದಾಗಲೂ ಆತನ ಬಾಯಿಂದ "ಜೈ ತೆಲಂಗಾಣ" ಎಂಬ ಉದ್ಘೋಷಣೆ ಹೊರಬರುತ್ತಿರುವುದು ಮಾತ್ರ ನಿಂತಿರಲಿಲ್ಲ. ಪೊಲೀಸರು, ಸ್ನೇಹಿತರು ಕೂಡಲೇ ಆತನ ರಕ್ಷಣೆಗೆ ಬಂದರಾದರೂ ಅಷ್ಟು ಹೊತ್ತಿಗಾಲೇ ಆತ ಶೇ.60ರಷ್ಟು ಸುಟ್ಟುಹೋಗಿದ್ದ. ಆತನನ್ನು ತಕ್ಷಣ ಆಸ್ಪತ್ರೆಗೆ ಸೇರಿಸಲಾಯಿತಾದರೂ ಹನ್ನೆರಡು ತಾಸುಗಳ ಕಾಲ ಜೀವನ್ಮರಣ ಹೋರಾಟ ನಡೆಸಿ ಕೊನೆಗೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ. ಅಸಲಿಗೆ ತಮ್ಮ ಪ್ರತಿಭಟನಾ ಮೆರವಣಿಗೆ ವಿಧಾನಸಭೆಯನ್ನು ತಲುಪಿದ ಮೇಲೆ ವಿಧಾನಸಭೆಯ ಎದುರುಗಡೆಯೇ ಬೆಂಕಿ ಹಚ್ಚಿಕೊಳ್ಳುವುದಕ್ಕೆ ಆತ ತೀರ್ಮಾನಿಸಿದ್ದ. ಆದರೆ, ಪೊಲೀಸರು ಅಲ್ಲಿಗೆ ಹೋಗಲು ಬಿಡಲಿಲ್ಲವಾದ್ದರಿಂದ ಉಸ್ಮಾನಿಯಾ ಕ್ಯಾಂಪಸ್ಸಿನಲ್ಲೇ ಆ ಕೆಲಸ ಮಾಡಿದ.

ಸಿರಿಪುರಂ ಯಾದಗಿರಿಯ ಜೇಬಿನಲ್ಲಿ ಒಂದು ಪತ್ರ ಸಿಕ್ಕಿತು. ಆ ಪತ್ರದಲ್ಲಿ ಆತ "ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯಾಗುತ್ತದೆಂದು ಕನಸು ಕಂಡಿದ್ದೆ. ಅದು ನನಸಾದರೆ ನಮ್ಮ ಉದ್ಯೋಗಗಳನ್ನು ಕಿತ್ತುಕೊಳ್ಳುತ್ತಿರುವ ಆಂಧ್ರದವರ ಉಪಟಳ ತಪ್ಪಿ ನಮಗೆ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂದು ಆಸೆಯಿಟ್ಟುಕೊಂಡಿದ್ದೆ. ಈಗ ಆಗುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಸದ್ಯ ಅದು ಕೂಡುವ ಲಕ್ಷಣಗಳು ಕಾಣುತ್ತಿ... ತೆಲಂಗಾಣ ರಚನೆಗಾಗಿ ನಾವು ಎಂಥ ತ್ಯಾಗಕ್ಕೂ ಸಿದ್ಧವಾಗಿದ್ದೇವೆ ಎಂಬು... ತೋರಿಸಲು ನಾನು ಆತ್ಮಾಹುತಿ ಮಾಡಿಕೊಳ್ಳುತ್ತಿದ್ದೇನೆ; ತೆಲಂಗಾಣಕ್ಕಾಗಿ ನನ್ನ ಜೀವ...ನ್ನು ಬಲಿಕೊಡುತ್ತಿದ್ದೇನೆ. ದಯವಿಟ್ಟು ಪ್ರತ್ಯೇಕ ತೆಲಂಗಾಣ ಸ್ಥಾಪನೆಯಾಗುವವ... ಈ ಜನಾಂದೋಲನವನ್ನು ನಿಲ್ಲಿಸಬೇಡಿ. ನನ್ನಂತ ಸಾವಿರಾರು ತೆಲಂಗಾಣ ವಿದ...ಗಳಿಗೆ ಉದ್ಯೋಗ ದೊರೆಯುತ್ತದೆ..." ಎಂದು ಸ್ಪಷ್ಟವಾಗಿ ಬರೆದು "ಜೈ ತೆ...ಗಾಣ" ಉದ್ಘೋಷದೊಂದಿಗೆ ಪತ್ರವನ್ನು ಮುಗಿಸಿದ್ದಾನೆ.

▶▶ 6

ಈಗ ಈಶ್ವರಿಯೇ ಸೂಪರ್ ಸಿಎಂ!

ಬಿಜೆಪಿಯಲ್ಲಿ ಮತ್ತೆ ಸಂಚಲನ ಉಂಟಾಗಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಹರಕುಬಾಯಿಯ ಈಶ್ವರಪ್ಪ ತಣ್ಣಗೆ ಅಧಿಕಾರ ಚಲಾಯಿಸಲಾರಂಭಿಸಿದ್ದಾರೆ. ಇವರ ಬೆನ್ನಿಗೆ ನಿಂತಿರುವ ಆರ್‌ಎಸ್‌ಎಸ್ ಮತ್ತು ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಎಲ್ಲವೂ ತಮ್ಮ ಅಣತಿಯಂತೆಯೇ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

ಸಂಘಪರಿವಾರ ಅಳೆದು-ತೂಗಿಯೇ ಈಶ್ವರಪ್ಪ ಎಂಬ ನಾಲಿಗೆ ಸರಿಯಿಲ್ಲದ ನಾಯಕನನ್ನು ಹೇಳದೇ-ಕೇಳದೇ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ತಂದು ಕೂರಿಸಿದ್ದು. ಈಶ್ವರಪ್ಪ ಕೂಡ ಸಾಕಷ್ಟು ಲೆಕ್ಕಾಚಾರ ಹಾಕಿಯೇ ಸಚಿವ ಸ್ಥಾನವನ್ನು ತೊರೆದು ಪಕ್ಷದ ನೇತೃತ್ವ ವಹಿಸಲು ಒಪ್ಪಿಕೊಂಡಿದ್ದು. ಈಗ ಇಬ್ಬರೂ ತಮ್ಮ ಗುರಿ ಸಾಧಿಸಲು ಕಾರ್ಯಾಚರಣೆ ಆರಂಭಿಸಿದ್ದಾರೆ. ಇದು ಸಹಜವಾಗಿಯೇ ಮುಖ್ಯಮಂತ್ರಿ ಯಡ್ಡಿ ಮತ್ತು ಅವರ ನಲ್ವತ್ತು ಪ್ಲಸ್ ಚೋರರ ನಿದ್ರೆಗೆಡಿಸಿದೆ.


ಮಾಜಿ ಗೆಳೆಯ ಹಾಲಿ ವೈರಿ ಈಶ್ವರಪ್ಪರನ್ನು ಅಧ್ಯಕ್ಷ ಸ್ಥಾನಕ್ಕೆ ಸಂಘಪರಿವಾರ ತಂದುಕೂರಿಸುತ್ತಿದ್ದಂತೆಯೇ ಯಡ್ಡಿ ಕುಂಡೆ ಸುಟ್ಟ ಬೆಕ್ಕಿನಂತೆ ಆಡಲಾರಂಭಿಸಿದ್ದರು. 'ಕೈಕತ್ತರಿಸಿ... ಬಾಯಿಗೆ ಬೀಗ ಹಾಕಿ...' ಎಂದೆಲ್ಲಾ ಬಾಯಿಗೆ ಬಂದ ಹಾಗೆ ಮಾತನಾಡಲಾಂಭಿಸಿದರು. ಇತ್ತೀಚೆಗಂತೂ ವಿವೇಚನೆ ಇಲ್ಲದೆ ಯದವಟ್ಟು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾ, ಭ್ರಷ್ಟಾಚಾರಕ್ಕೆ ಮಣೆಹಾಕುತ್ತಾ, ಬಾಯಲ್ಲಿ ಬೆಣ್ಣೆ- ಬಗಲಲ್ಲಿ ದೊಣ್ಣೆ ಎಂಬಂತೆ ಅರಚುತ್ತಾ ಹಾಸ್ಯಾಸ್ಪದವಾಗಿ ವರ್ತಿಸುತ್ತಿದ್ದಾರೆ. ಇದನ್ನು ನೋಡಿ ಎಲ್ಲರೂ 'ಕಾರ್ಯಕ್ಕೆ ಬಾರದ ಮುಖ್ಯಮಂತ್ರಿ ಈತ' ಎಂದು ಲೇವಡಿ ಮಾಡುತ್ತಿದ್ದಾರೆ.

ಯಡ್ಡಿ ಮಾತಿಗೆ ಕಿಮ್ಮತ್ತಿಲ್ಲ


ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆಯೇ ಈಶ್ವರಪ್ಪ ಭಿನ್ನಮತ ದೂರಮಾಡಲು ನಿಗಮ-ಮಂಡಳಿಗಳ ಅಧ್ಯಕ್ಷರನ್ನು ಬದಲಾಯಿಸ ಬೇಕು ಎಂದಿದ್ದರು. ಜೊತೆಗೆ, ಸದ್ಯದಲ್ಲೇ ಸಚಿವ ಸಂಪುಟದ ಸರ್ಜರಿಯೂ ನಡೆಯಲಿದೆ ಎಂದು ಹೇಳಿದ್ದರು. ಇದಿಷ್ಟೇ ಅಲ್ಲದೆ ಮೊನ್ನೆ ಹಠಾತ್ತನೆ ಬಿಜೆಪಿ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡಿದ ಈಶ್ವರಪ್ಪ ಯಡ್ಡಿಗೆ ಇನ್ನಿಲ್ಲದಂತೆ ಶಾಕ್ ಕೊಟ್ಟಿದ್ದಾರೆ. ಈ ಹಿಂದೆ ಯಾರು ಪಕ್ಷದ ಪದಾಧಿಕಾರಿಗಳಾಗಬೇಕೆಂದು ಎರಡು ಬಾರಿ ಯಡ್ಡಿ ಸಮ್ಮುಖದಲ್ಲಿಯೇ ಉನ್ನತ ನಾಯಕರು ಸಭೆ ಮಾಡಿದಿದ್ದರೂ, ಪಟ್ಟಿಯನ್ನು ಅಂತಿಮಗೊಳಿಸಲಾಗಿರಲಿಲ್ಲ. ಯಾಕೆಂದರೆ ಯಡ್ಡಿ ತಮ್ಮ ಬೆಂಬಲಿಗರಿಗೆ ಒಂದಿಷ್ಟು ಸ್ಥಾನ ಸಿಗಲೇಬೇಕೆಂದು ಪಟ್ಟು ಹಿಡಿದಿದ್ದರು. ಇದಕ್ಕೆ ಒಪ್ಪದ ಈಶ್ವರಿ 'ಕೇಶವ ಕೃಪಾ'ದಲ್ಲಿ ಕುಳಿತುಕೊಂಡು ಪಟ್ಟಿ ಸಿದ್ಧಪಡಿಸಿದರಲ್ಲದೆ, ಅದರ ಬಗ್ಗೆ ಯಡ್ಡಿಗೆ ಒಂದು ಸುಳಿವೂ ಕೊಡದೆ ಇದ್ದಕ್ಕಿದ್ದಂತೆ ಅದನ್ನು ಬಹಿರಂಗಪಡಿಸಿಬಿಟ್ಟಿದ್ದಾರೆ. ತಮ್ಮ ಪರವಿರುವ ಒಬ್ಬನೇ ಒಬ್ಬ ನಾಯಕನೂ ಪದಾಧಿಕಾರಿಗಳಾಗದಿರುವುದನ್ನು ಕಂಡು ಯಡ್ಡಿ ಮೂರ್ಛೆ ಹೋಗುವುದೊಂದೇ ಬಾಕಿ!


ಸಿ.ಟಿ. ರವಿ

ಉಪಾಧ್ಯಕ್ಷರ ಪಟ್ಟಿಯಲ್ಲಿರುವವರೆಲ್ಲಾ ಆರ್‌ಎಸ್‌ಎಸ್ ನಿಷ್ಠರೇ ಹೊರತು ಯಡ್ಡಿ ಬಣದವರಲ್ಲ. ಬೆಂಗಳೂರಿನ ಅಶ್ವತ್ಥನಾರಾಯಣ, ನಿರ್ಮಲ್‌ಕುಮಾರ್ ಸುರಾನಾ, ಮಂಗಳೂರಿನ ನಳಿನ್ ಕುಮಾರ್ ಕಟೀಲ್, ಬಂಟ್ವಾಳದ ಸುಲೋಚನಾ ಭಟ್ ... ಇವರೆಲ್ಲರೂ ಆರ್‌ಎಸ್‌ಎಸ್ ಮಂದಿಯೇ. ಇನ್ನು ಶಿವಮೊಗ್ಗದ ಭಾನುಪ್ರಕಾಶ್ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಉಪಾಧ್ಯಕ್ಷ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಆದರೆ ಈತ ಶಿವಮೊಗ್ಗದ ಬ್ರಾಹ್ಮಣ ಮುಖಂಡನಾಗಿದ್ದರೂ ಯಡ್ಡಿಯ ಕೃಪಾಶೀರ್ವಾದವೇನೂ ಆತನಿಗಿಲ್ಲ. ಬದಲಾಗಿ ತನ್ನ ಚೆಡ್ಡಿ ನಿಷ್ಠೆಯಿಂದಾಗಿ ಬಡ್ತಿ ಪಡೆದಿದ್ದಾನೆ ಎಂಬುದಂತೂ ಸತ್ಯ. ಇನ್ನು ಗಣಿಧಣಿಗಳ 'ಮುದ್ದಿನ ತಂಗಿ' ಶಾಂತ ಕೂಡ ಸ್ಥಾನ ಪಡೆದಿದ್ದಾರೆ. ಹೇಗಿದ್ದರೂ ಈಕೆ ಸಂಸತ್ತಿನಲ್ಲಿ ಕಡಿಯುವುದು ಅಷ್ಟರಲ್ಲೇ ಇದೆ, ಇಲ್ಲಾದರೂ ಆಕೆ ಪಕ್ಷದ ಅಧಿಕಾರಿಗಳಲ್ಲಿ ಒಬ್ಬಳಾಗಿ ಗಣಿಧಣಿಗಳ ಕೋಟಾ ತುಂಬಲಿ ಎಂಬ ಇರಾದೆ ಆರೆಸ್ಸೆಸ್‌ನವರದ್ದಾಗಿರಲಿಕ್ಕೂ ಸಾಕು.



ಈಶ್ವರಪ್ಪ

ಅನಂತಕುಮಾರ್ ಬೆಂಬಲಿಗ ಸಂಸದ ಪ್ರಹ್ಲಾದ್ ಜೋಷಿ ಮತ್ತು ಒಕ್ಕಲಿಗರ ಪ್ರತಿನಿಧಿ ಸಿ.ಟಿ.ರವಿಗೆ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ಆಶ್ಚರ್ಯವೆಂದರೆ ಶಿವಮೊಗ್ಗದ ವಲಸೆ ಹಕ್ಕಿ ಆಯನೂರು ಮಂಜುನಾಥ್‌ಗೆ ಬಿಜೆಪಿಯ ವಕ್ತಾರನ ಕೆಲಸ ವಹಿಸಿರುವುದು. ಮಾತಿನ ಮಲ್ಲ ಆಯನೂರು ಮೂಲತಃ ಸಂಘಪರಿವಾರದವರೇ ಆಗಿದ್ದರೂ, ಪಕ್ಷ ಬದಲಾಯಿಸುತ್ತಾ ಬಂದು ಶಿವಮೊಗ್ಗದ ಮಂದಿಯಿಂದ ಕ್ಯಾಕರಿಸಿ ಉಗಿಸಿಕೊಂಡವರು. ತೀರಾ ಇತ್ತೀಚಿನವರೆಗೂ ಯಡ್ಡಿ ಗ್ಯಾಂಗ್‌ನಲ್ಲಿಯೇ ಇದ್ದ ಆಯನೂರು ಈಗ ಈಶ್ವರಿ ಹಿಂದೆ ಬಿದ್ದಿದ್ದಾರೆ. ಅದಕ್ಕೇ ಅವರಿಗೆ ಈಗ ಈ ಇನಾಮು!


ಪ್ರಹ್ಲಾದ್ ಜೋಶಿ

ವಿಚಿತ್ರ ನೋಡಿ. ಈಶ್ವರಿ ವಿರುದ್ಧ ಶಿವಮೊಗ್ಗದಲ್ಲಿ ಫೈಟ್ ಮಾಡಲೆಂದೇ ಕಾಂಗ್ರೆಸ್‌ನಲ್ಲಿದ್ದ ಆಯನೂರು ಮಂಜುನಾಥ್‌ನನ್ನು ಯಡ್ಡಿ ಪಕ್ಷಕ್ಕೆ ಮತ್ತೆ ಬರಮಾಡಿಕೊಂಡಿದ್ದರು. ಆಗ ಈಶ್ವರಿ ಆಕಾಶ-ಭೂಮಿ ಒಂದುಮಾಡುವಂತೆ ಕೂಗಾಡಿದ್ದರು. ಆದರೆ ಆಯನೂರರನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡ ಯಡ್ಡಿ ಆನಂತರ ಆತನನ್ನು ಮೂಲೆಗೆ ಬಿಸಾಡಿದ್ದರು. ಮೊದಲಿಗೆ ಆಯನೂರನಿಗೆ ಲೋಕಸಭಾ ಕ್ಷೇತ್ರದ ಟಿಕೆಟ್ ಕೊಡದೆ ತಮ್ಮ ಮಗನಿಗೇ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡರು. ಆಮೇಲೆ ವಿಧಾನ ಪರಿಷತ್ ಟಿಕೆಟ್ ಕೊಡಿಸುತ್ತೇನೆ ಎಂದು ಹೇಳಿ ಆಯನೂರರನ್ನು ಯಾಮಾರಿಸಿದರು. ಕೊನೆಗೆ ಆತನನ್ನು ತನ್ನ ರಾಜಕೀಯ ಸಲಹೆಗಾರನಾಗಿ ನೇಮಿಸಿಕೊಳ್ಳುತ್ತೇನೆ ಎಂದು ಸುಳ್ಳು ಹೇಳುತ್ತಲೇ ಬಂದರು. ಯಡ್ಡಿ ತನಗೆ ಇವತ್ತು ಏನಾದರೊಂದು ಮಾಡುತ್ತಾರೆ, ನಾಳೆ ಮಾಡುತ್ತಾರೆ ಎಂದು ಕಾದು ಸುಸ್ತಾದ ಆಯನೂರು ಮಂಜುಗೆ ಯಾವಾಗ ಯಡ್ಡಿ ದುರ್ಬಲರಾಗುತ್ತಿದ್ದಾರೆ ಎಂದು ಗೊತ್ತಾಯಿತೋ ಆಗ ಉಪಾಯವಾಗಿ ತಮ್ಮ ಹಳೆ ವೈರಿ ಈಶ್ವರಿಯ ಜೊತೆ ಚುಪ್ಕೆ ಚುಪ್ಕೆ ಡೀಲ್ ನಡೆಸಿ ಈಗ ಯಡ್ಡಿಯ ಮುಖಕ್ಕೆ ಇಕ್ಕಿದ್ದಾರೆ.

ಪದಾಧಿಕಾರಿಗಳ ಪಟ್ಟಿಯನ್ನು ಮೇಲಿಂದ ಕೆಳಗೆ, ಕೆಳಗಿನಿಂದ ಮೇಲಕ್ಕೆ ಓದಿ, ಸುಸ್ತಾಗಿರುವ ಯಡ್ಡಿ ಸಿಕ್ಕ-ಸಿಕ್ಕವರ ಬಳಿ ರೇಗಿದ್ದಾರೆ, ಕಣ್ಣೀರಿಟ್ಟಿದ್ದಾರೆ. ಆದರೆ ಆರ್‌ಎಸ್‌ಎಸ್ ಮತ್ತು ಗಡ್ಕರಿಯ ಸೂಚನೆಯಂತೆಯೇ ಪಟ್ಟಿ ಸಿದ್ಧವಾಗಿರುವುದರಿಂದ ಯಡ್ಡಿಯ ಸಿಟ್ಟಿಗೆ ಬೆಲೆ ಇಲ್ಲವಾಗಿದೆ. ತಾನೇ ಕಟ್ಟಿದ ಪಕ್ಷ ಈಗ ತನ್ನ ಕೈತಪ್ಪಿ ಹೋಯಿತು ಎಂದು ಯಡ್ಡಿ ಗೋಣುಹಾಕಿಕೊಂಡು ಕುಳಿತಿದ್ದಾರಂತೆ.



ಬಜೆಟ್ ನಂತರ ನಿಗಮ-ಮಂಡಳಿಗಳ ಹಾಲಿ ಅಧ್ಯಕ್ಷರು ಮತ್ತು ಸದಸ್ಯರ ರಾಜೀನಾಮೆ ಪಡೆಯುವಂತೆ ಈಶ್ವರಿ ಈಗಾಗಲೇ ಒತ್ತಡ ಹೇರಲಾರಂಭಿಸಿದ್ದಾರೆ. "ಪಕ್ಷ ಅಧಿಕಾರಕ್ಕೆ ಬಂದಾಗ ಯಾರ್‍ಯಾರೋ ನೇಮಕಗೊಂಡಿದ್ದಾರೆ, ಇವರನ್ನು ಈಗ ಬದಲಾಯಿಸಲೇಬೇಕಾಗಿದೆ" ಎಂದು ಹೇಳುವ ಮೂಲಕ ಯಡ್ಡಿ 'ಯಾರ್‍ಯಾರನ್ನೋ ನೇಮಕ ಮಾಡಿದ್ದರು' ಎಂದು ಪರೋಕ್ಷವಾಗಿ ಅವರಿಗೆ ಕಲ್ಲು ಹೊಡೆದಿದ್ದಾರೆ ಈಶ್ವರಪ್ಪ.


ಈಗಾಗಲೇ ನೇಮಕಗೊಂಡಿರುವ ಅಧ್ಯಕ್ಷ ಮತ್ತು ಸದಸ್ಯರನ್ನು ಬದಲಾಯಿಸುವಲ್ಲಿ ಈಶ್ವರಿ ಯಶಸ್ವಿಯಾದರೆ, ಅವರ ಅಧಿಕಾರ ಏನೆಂಬುದು ಎಲ್ಲರಿಗೂ ಗೊತ್ತಾಗಲಿದೆ. ಇದನ್ನು ಅರಿತೇ ಆಗ ಯಡ್ಡಿ ಕೃಪೆಯಿಂದ ಅಧಿಕಾರ ಹಿಡಿದಿದ್ದ ಕೆಲ ಅಧ್ಯಕ್ಷರಂತೂ ಈಗ ಈಶ್ವರಿ ಕಾಲು ಹಿಡಿದುಕೊಂಡು, "ಈಗ ಬೇಕಾದರೆ ರಾಜೀನಾಮೆ ನೀಡುತ್ತೇವೆ, ಆದರೆ ದಯವಿಟ್ಟು ಮತ್ತೆ ನಮ್ಮನ್ನೇ ಆಯ್ಕೆ ಮಾಡಿ" ಅಂತ ಬೇಡಿಕೊಳ್ಳುತ್ತಿದ್ದಾರೆ. ಅಲ್ಲಿಗೆ ಯಡ್ಡಿಮಾತಿಗೆ ಈಗ ಪಕ್ಷದಲ್ಲಾಗಲೀ, ಸರ್ಕಾರದಲ್ಲಾಗಲೀ ಮೂರು ಕಾಸಿನ ಬೆಲೆ ಇಲ್ಲ ಎಂಬುದು ಸ್ಪಷ್ಟವಾಗಿದೆ.

ಯಡ್ಡಿಯ ಪಾಲಿಗೆ ಇನ್ನೂ ಆಘಾತಕರ ವಿಚಾರ ಯಾವುದೆಂದರೆ ನಿಗಮ ಮಂಡಳಿಗಳ ಅಧ್ಯಕ್ಷರ ಬದಲಾವಣೆಯ ಜೊತೆಗೇ ಸಚಿವ ಸಂಪುಟವನ್ನು ಪುನರ್ ರಚಿಸಿ ಎಂದು ಈಶ್ವರಿ ಪಟ್ಟು ಹಾಕಿ ಕೂತು ಬಿಡುವುದು. ಪಕ್ಷ ಕಟ್ಟಲು ತಾವು ಹೇಳಿದಂತೆ ಯಡ್ಡಿ ನಡೆದುಕೊಳ್ಳುವುದು ಅನಿವಾರ್ಯ ಎಂದು ಈಶ್ವರಿ ಕುತ್ತಿಗೆ ಮೇಲೆ ಕೂತರೆ, ಈ ಬೇತಾಳವನ್ನು ಕೆಳಗಿಳಿಸುವುದು ಯಡ್ಡಿಗೆ ಸಾಧ್ಯವಾಗದೇ ಹೋಗುತ್ತದೆ. ಆಗ ಮತ್ತೆ ಈಶ್ವರಿ ಗೆದ್ದಂತೆ. ಪಕ್ಷದಲ್ಲಿ ಮಾತ್ರವಲ್ಲ, ಆಡಳಿತ ವ್ಯವಸ್ಥೆಯಲ್ಲಿಯೂ ಹಸ್ತಕ್ಷೇಪ ನಡೆಸುತ್ತಾ ಈಶ್ವರಪ್ಪ 'ಸೂಪರ್ ಸಿಎಂ' ಆಗುವುದರಲ್ಲಿ ಅನುಮಾನವೇ ಇಲ್ಲ.

ಈಗ ಯಡ್ಡಿಯ ಹಿಡಿತದಲ್ಲಿರುವ ಸಮನ್ವಯ ಸಮಿತಿಯನ್ನೂ ಪುನರ್ ರಚಿಸಬೇಕೆಂಬ ಕೂಗು ಕೇಳಿಬಂದಿದೆ. ಸಂಸದ ರಮೇಶ್ ಜಿಗಜಿಣಗಿಯವರ ಮೂಲಕ 'ದಲಿತರಿಗೆ ಅನ್ಯಾಯವಾಗಿದೆ' ಎಂಬ ಬೇಡಿಕೆ ಮಂಡಿಸಿ, ಸಮಿತಿಯನ್ನು ಪುನರ್ ರಚಿಸುವ ಅನಿವಾರ್ಯತೆ ಸೃಷ್ಟಿಸುತ್ತಿರುವ ಈಶ್ವರಪ್ಪ ಅ್ಯಂಡ್ ಗ್ಯಾಂಗ್, ಪುನರ್ ರಚನೆಯ ಸಂದರ್ಭದಲ್ಲಿ ನಿಷ್ಠಾವಂತರಿಗೆ ಅವಕಾಶ ಸಿಗಬೇಕು ಎಂಬ ವಾದ ಮಂಡಿಸಿ, ತಮ್ಮವರನ್ನು ತಂದು ಕೂರಿಸುವ ತಂತ್ರ ಹೆಣೆದಿದೆ. ನೆಪ ಮಾತ್ರಕ್ಕೆ ಮುಖ್ಯಮಂತ್ರಿಯ ನೇತೃತ್ವದಲ್ಲಿರುವ ಈ ಸಮಿತಿಯನ್ನು ಕ್ರಿಯಾಶೀಲವಾಗಿಸಿ, ಸಚಿವರಿಗೆಲ್ಲಾ ಈ ಸಮಿತಿ ಮೂಲಕವೇ ಮೂಗುದಾರವನ್ನು ಹಾಕುವ ಉದ್ದೇಶ ಕೂಡ ಈಶ್ವರಪ್ಪಗೆ ಇದೆಯಂತೆ. ಇದಕ್ಕಾಗಿ ಪ್ರಗತಿಪರಿಶೀಲನೆ ಎಂಬ ಹೊಸ ನಾಟಕ ಕಟ್ಟಲು ಈಶ್ವರಪ್ಪ ಸಿದ್ಧತೆ ನಡೆಸಿದ್ದಾರೆ.

ಒಟ್ಟಾರೆ ಯಡ್ಡಿಯನ್ನು ಸೂತ್ರದ ಗೊಂಬೆಯಂತೆ ಮಾಡಿ, ಅಧಿಕಾರ ನಡೆಸಲು ಈಶ್ವರಪ್ಪ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಸಂಘಪರಿವಾರ ಕೂಡ ಅವರ ಬೆನ್ನಿಗೆ ನಿಂತಿರುವುದರಿಂದ ಅಂದುಕೊಂಡಿದ್ದೆಲ್ಲಾ ಸುಗಮವಾಗಿಯೇ ನಡೆಯುತ್ತದೆ.

ಇದೆಲ್ಲಾ ಯಡ್ಡಿಗೆ ಗೊತ್ತಿಲ್ಲವೆಂದಲ್ಲಾ, ಆದಕ್ಕೇ ಅವರು ಈಶ್ವರಿಯ ತಂತ್ರಗಳಿಗೆ ಪ್ರತಿ ತಂತ್ರ ರೂಪಿಸಲು ಹೆಣಗಾಡುತ್ತಿದ್ದಾರೆ. ವಿಧಾನ ಪರಿಷತ್ತಿಗೆ ನಾಮಕರಣಗೊಂಡಿದ್ದ ಮಾಜಿ ಸಚಿವ ವಿ.ಸೋಮಣ್ಣರ ಹೆಸರು ತಿರಸ್ಕೃತಗೊಂಡಾಗ, ಮತ್ತೆ ಅವರ ಹೆಸರನ್ನೇ ಶಿಫಾರಸು ಮಾಡಲು ಯಡ್ಡಿ ಹೊರಟಿದ್ದರು. ಆಗ ಈಶ್ವರಪ್ಪ ಅಡ್ಡಗಾಲು ಹಾಕಿ, ಸೋಮಣ್ಣ ಬದಲಿಗೆ ಬಾಗಲಕೋಟೆಯ ನಾರಾಯಣಸಾ ಭಾಂಡಗೆಯ ಹೆಸರು ಶಿಫಾರಸು ಮಾಡುವಂತೆ ಸೂಚಿಸಿದ್ದರು. ಆದರೆ ಯಡ್ಡಿ ಮಾತ್ರ ಈಶ್ವರಿಯ ಮಾತು ಕೇಳದೆ ಈ ಹೆಸರನ್ನು ತಮ್ಮ ಅಂಡಡಿ ಹಾಕಿಕೊಂಡು ಕುಳಿತುಕೊಂಡಿದ್ದಾರೆ. ಸಹಜವಾಗಿಯೇ ಇದು ಈಶ್ವರಿಯನ್ನು ಕೆರಳಿಸಿದೆ.


ಆಯನೂರು

ಒಂದೆಡೆ ಈಶ್ವರಿಯ ಕಾಟ, ಇನ್ನೊಂದು ಕಡೆ ತಮ್ಮ ಜೊತೆಗಿರುವವರೆಲ್ಲಾ ಡಬ್ಬಲ್ ಗೇಮ್ ಆಡುತ್ತಿರುವುದರಿಂದ ಯಡ್ಡಿಗೆ ಸದ್ಯ ಯಾರನ್ನು ನಂಬಬೇಕು ಯಾರನ್ನು ನಂಬಬಾರದು ಎಂಬುದೂ ಗೊತ್ತಾಗದೆ ಗಲಿಬಿಲಿಗೊಂಡಿದ್ದಾರೆ.

ಯಡ್ಡಿ-ಈಶ್ವರಿಯ ಜಗಳದಿಂದಾಗಿ ಈಗಾಗಲೇ ರಾಜ್ಯ ಕತ್ತಲೆಯ ಕೂಪವಾಗಿದೆ. ಅಧಿಕಾರಕ್ಕಾಗಿ ಮುಂದೆ ನಡೆಯಲಿರುವ ಜಿದ್ದಾ-ಜಿದ್ದಿಯಿಂದ ಜನತೆ ಇನ್ನೆಷ್ಟು ನರಕಯಾತನೆ ಅನುಭವಿಸಬೇಕೋ ಗೊತ್ತಿಲ್ಲ. ಇವರಿಬ್ಬರಲ್ಲಿ ಯಾರೇ ಗೆದ್ದರೂ, ಸೋಲುವುದು ಮಾತ್ರ ಜನಸಾಮಾನ್ಯರು ಎಂಬುದರಲ್ಲಿ ಸಂಶಯವೇ ಇಲ್ಲ.

● ನೀರದ ಬೆಂಗಳೂರು

▶▶ 5

ಆತ್ಮಹತ್ಯೆಯನ್ನು 'ಪ್ರತಿಭಟನೆಯ ಒಂದು ರೂಪ'ವನ್ನಾಗಿ ಬಳಸುವುದನ್ನು ಒಪ್ಪಲು ಸಾಧ್ಯವಿಲ್ಲವಾದರೂ ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರದ ಜಾಣಕಿವುಡುತನಗಳು, ಸಂವೇದನಾರಹಿತತೆಗಳು ಸೂಕ್ಷ್ಮ ಮನಸ್ಸುಗಳನ್ನು ತೀವ್ರವಾಗಿ ಘಾಸಿಗೊಳಿಸಿ ಇಂಥ ಅತಿರೇಕಗಳಿಗೆ ಕೊಂಡೊಯ್ಯುಬಿಡುತ್ತವೆ. ವಾಸ್ತವದಲ್ಲಿ ಸಿರಿಪುರಂ ಯಾದಯ್ಯ ಇಂದಿನ ತೆಲಂಗಾಣದ ಅಂಥ ಸೂಕ್ಷ್ಮ ಸಂವೇದನೆಯ ಮನಸ್ಸುಗಳನ್ನು ಪ್ರತಿನಿಧಿಸುತ್ತಾನೆ. ಸಿರಿಪುರಂ ಯಾದಯ್ಯ ಪ್ರತ್ಯೇಕ ತೆಲಂಗಾಣಕ್ಕಾಗಿ ಆತ್ಮಾಹುತಿ ಮಾಡಿಕೊಂಡ ಸುದ್ದಿ ತೆಲಂಗಾಣದಾದ್ಯಂತ ಕೆಲವೇ ಗಂಟೆಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿ ಮತ್ತೆ ಮೂವರು ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂವರೂ ಹತ್ತೊಂಭತ್ತು ವರ್ಷ ದಾಟದವರು. ಸಿರಿಪುರಂ ಯಾದಯ್ಯನ ಅಂತಿಮ ಸಂಸ್ಕಾರವನ್ನು ಟೀವಿಯಲ್ಲಿ ನೋಡಿದ ರಂಗಾರೆಡ್ಡಿ ಜಿಲ್ಲೆಯ ಅಜೀಜ್‌ನಗರದಲ್ಲಿ ಸಿಂಧೂ ಜೂನಿಯರ್ ಕಾಲೇಜಿನಲ್ಲಿ ಹನ್ನೆರಡನೇ ಕ್ಲಾಸಿನಲ್ಲಿ ಓದುತ್ತಿದ್ದ ಕೆ.ಸರಿತಾ ಎಂಬ ಹುಡುಗಿ ಪ್ರತ್ಯೇಕ ತೆಲಂಗಾಣ ರಚನೆಗೆ ಅಡ್ಡಿಪಡಿಸುತ್ತಿರುವ ಮುಖ್ಯಮಂತ್ರಿ ಕೆ.ರೋಶಯ್ಯ ಹಾಗೂ ತೆಲುಗುದೇಶಂ ಪಕ್ಷದ ನಾಯಕ ಚಂದ್ರಬಾಬು ನಾಯ್ಡು ಅವರನ್ನು ದೂಷಿಸಿ ಒಂದು ಡೆತ್‌ನೋಟ್ ಬರೆದಿಟ್ಟು ನೇಣಿಗೆ ಕೊರಳೊಡ್ಡಿದ್ದಾಳೆ.

ಅದೇ ರೀತಿಯಲ್ಲಿ ಮೇಡಕ್ ಜಿಲ್ಲೆಯ ಚೆಲ್ಲಾಪೂರ್‌ನಲ್ಲಿ ಹತ್ತನೇ ತರಗತಿ ಓದುತ್ತಿದ್ದ ರಾಮೋಜಿ ಸ್ವಾಮಿ ಹಾಗೂ ವಾರಂಗಲ್ ಜಿಲ್ಲೆಯ ಗೋವಿಚರ್ಲಾದ ಬಿ.ಬಾಸ್ಕರ್ ಎಂಬಿಬ್ಬರು ವಿದ್ಯಾರ್ಥಿಗಳು ಪ್ರತ್ಯೇಕ ತೆಲಂಗಾಣಕ್ಕಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಿರುವುದಾಗಿ ಡೆತ್‌ನೋಟ್ ಬರೆದಿಟ್ಟು ಕ್ರಿಮಿನಾಶಕ ಕುಡಿದು ಸಾವನ್ನಪ್ಪಿದ್ದಾರೆ. ಈ ಘಟನಾವಳಿಗಳು ಪ್ರಾರಂಭವಾಗುವ ಒಂದು ವಾರ ಮುಂಚೆಯಷ್ಟೇ ಇಬ್ಬರು ವಿದ್ಯಾರ್ಥಿಗಳು ಪ್ರತ್ಯೇಕ ತೆಲಂಗಾಣ ರಾಜ್ಯ ಬೇಡಿಕೆಯನ್ನು ಮುಂದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಇನ್ನೆಷ್ಟು ಹೆಣಗಳು ಉರುಳಲಿವೆಯೊ?

ವಾಸ್ತವದಲ್ಲಿ ಪ್ರತ್ಯೇಕ ತೆಲಂಗಾಣ ರಚನೆಯ ಬೇಡಿಕೆ ನ್ಯಾಯಸಮ್ಮತವೂ, ಪ್ರಜಾತಾಂತ್ರಿಕವೂ ಆಗಿದೆ. ಪ್ರತ್ಯೇಕ ತೆಲಂಗಾಣ ರಚನೆಯಾದರೆ ಯಾರಿಗೆ ಏನು ತೊಂದರೆಯಾಗುವುದಿಲ್ಲ. ಪ್ರತ್ಯೇಕ ರಾಜ್ಯಕ್ಕಾಗಿ ನಿರಂತರ ಹೆಣಗಳು ಉರುಳುವುದಾದರೂ ತಪ್ಪುತ್ತದೆ. ಶತಮಾನಗಳಿಂದ ಆಂಧ್ರದ ಉಕ್ಕಿನ ಪಾದಗಳಡಿಯಲ್ಲಿ ನಲುಗುತ್ತಿರುವ ತೆಲಂಗಾಣಕ್ಕೆ ಮುಕ್ತಿಯಾದರೂ ಸಿಗುತ್ತದೆ. (ಇಲ್ಲಿ ಆಂಧ್ರ ಎಂದರೆ ಇಡೀ ಆಂಧ್ರ ಪ್ರದೇಶವಲ್ಲ, ಬದಲಿಗೆ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಪ್ರಬಲವಾಗಿರುವ ಹಾಗೂ ಹತ್ತಾರು ವರ್ಷಗಳಿಂದ ತೆಲಂಗಾಣವನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ದಬ್ಬಾಳಿಕೆ ಮಾಡುತ್ತಿರುವ ಕರಾವಳಿ ಆಂಧ್ರ.) ಪ್ರತ್ಯೇಕ ರಾಜ್ಯವೊಂದನ್ನು ರಚಿಸುವುದಕ್ಕೆ ತಾಂತ್ರಿಕವಾಗಿಯಾಗಲೀ, ಸಾಂವಿಧಾನಿಕವಾಗಲೀ ಯಾವುದೇ ಅಡೆತಡೆಗಳೂ ಇಲ್ಲ. ಈ ಹಿಂದೆ ಜನಹೋರಾಟಕ್ಕೆ ಮಣಿದು ಉತ್ತರಖಂಡ, ಜಾರ್ಖಂಡ್ ಮತ್ತು ಛತ್ತೀಸ್‌ಗಡ ರಾಜ್ಯಗಳು ಅಸ್ತಿತ್ವಕ್ಕೆ ಬಂದಿರುವುದು ನಮ್ಮ ಕಣ್ಣಮುಂದೆಯೇ ಇದೆ. ಹಾಗಿದ್ದ ಮೇಲೂ ತೆಲಂಗಾಣ ರಾಜ್ಯ ರಚನೆಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹಿಂದೇಟು ಹಾಕುತ್ತಿರುವುದೇಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ. ಅದು ಆಂಧ್ರದ ಪ್ರಭಾವಿ ಪಾಲಿಟಿಕ್ಸ್‌ನ ಒತ್ತಡ ಅಷ್ಟೆ. ಹತ್ತಾರು ವರ್ಷಗಳಿಂದ ತೆಲಂಗಾಣ ಪ್ರಾಂತ್ಯದಲ್ಲಿ ಉನ್ನತ ಸರ್ಕಾರಿ ಹುದ್ದೆಗಳನ್ನೆಲ್ಲಾ ಬಾಚಿಕೊಳ್ಳುತ್ತಿರುವ, ಸ್ಥಳೀಯ ತೆಲಂಗಾಣಿಯರ ಮೇಲೆ ನಿರಂತರವಾಗಿ ದರ್ಪ ದೌರ್ಜನ್ಯಗಳನ್ನು ತೋರುತ್ತಿರುವ, ತೆಲಂಗಾಣದ ನೈಸರ್ಗಿಕ ಸಂಪತ್ತನ್ನು ಕೊಳ್ಳೆಹೊಡೆದು ಅದರಲ್ಲಿ ಕರಾವಳಿ ಆಂಧ್ರವನ್ನು ಅಭಿವೃದ್ಧಿಗೊಳಿಸಿಕೊಳ್ಳುತ್ತಿರುವ, ಸರ್ಕಾರದ ಹಣದಲ್ಲಿ ತೆಲಂಗಾಣಕ್ಕೆ ನ್ಯಾಯಯುತವಾಗಿ ದೊರಕಬೇಕಿರುವ ಪಾಲನ್ನೂ ಕಿತ್ತುಕೊಂಡು ಪ್ರಾಕೃತಿಕ ಸಂಪತ್ತಿನಿಂದ ತುಂಬಿತುಳುಕುತ್ತಿರುವ ಆ ಪ್ರಾಂತ್ಯವನ್ನು ಭಾರತದ ಅತ್ಯಂತ ಹಿಂದುಳಿದ ಪ್ರದೇಶವನ್ನಾಗಿ ಮಾಡಿಟ್ಟಿರುವ ಆಂಧ್ರದವರು ಅಷ್ಟು ಸುಲಭವಾಗಿ ತೆಲಂಗಾಣವನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಿಲ್ಲ. ತೆಲಂಗಾಣಿಯರ ಮೇಲಿನ ತಮ್ಮ ಯಾಜಮಾನಿಕೆಯನ್ನು ಬಿಟ್ಟುಕೊಡುವುದನ್ನು ಕಲ್ಪಿಸಿಕೊಳ್ಳುವುದಕ್ಕೂ ಅವರಿಗೆ ಕಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಅವರು 'ಅಖಂಡ ಆಂಧ್ರ'ದ ಪರವಾಗಿ ಮಾತನಾಡುತ್ತಾರೆ, ಪ್ರತಿಭಟಿಸುತ್ತಾರೆ, ಹೋರಾಡುತ್ತಾರೆ. ಇದೇ 'ಅಖಂಡ ಆಂಧ್ರ'ದ ಉಕ್ಕಿನ ಪಾದಗಳಡಿಯಲ್ಲೇ ದಶಕಗಳಿಂದ ನಲುಗುತ್ತಾ ಬಂದಿರುವ ತೆಲಂಗಾಣಿಯರು 'ಸ್ವಾಯತ್ತ ತೆಲಂಗಾಣ'ಕ್ಕಾಗಿ ಹೋರಾಡುತ್ತಿದ್ದಾರೆ; ಆ ಮೂಲಕ ಆಂಧ್ರದ ಶೋಷಣೆ, ದಮನ, ದೌರ್ಜನ್ಯಗಳಿಂದ ಮುಕ್ತಿ ಹೊಂದುವುದಕ್ಕೆ ಹೊರಟಿದ್ದಾರೆ.

ಅತೀ ಸಣ್ಣ ರಾಜ್ಯಗಳನ್ನಾಗಿ ಮಾಡುವುದರಿಂದ ದೇಶ ಹಾಳಾಗಿಹೋಗುತ್ತದೆ, ಅಭಿವೃದ್ಧಿ ಕುಂಠಿತವಾಗಿದೆ ಎಂದು ತರ್ಕಹೀನವಾಗಿ, ಅರ್ಥಹೀನವಾಗಿ ವಾದಿಸುವವರೂ ಇದ್ದಾರೆ. ಕೇವಲ 39,000 ಚದರ ಕಿ.ಮೀ.ವಿಸ್ತೀರ್ಣ ಹೊಂದಿರುವ ಕೇರಳ ಭಾರತದ ಅತ್ಯಂತ ಅಭಿವೃದ್ಧಿ ಹೊಂದಿದ ರಾಜ್ಯಗಳ ಪೈಕಿ ಒಂದಾಗಿರುವ ಹಾಗೂ ಅತ್ಯಂತ ದೊಡ್ಡ ರಾಜ್ಯವಾಗಿರುವ ಉತ್ತರ ಪ್ರದೇಶ ಭಾರತದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಒಂದಾಗಿರುವ ಕಟುಸತ್ಯಗಳು ಅವರ ಅಸಂಬದ್ಧ ವಾದವನ್ನು ಒಂದೇ ಏಟಿಗೆ ಮಣ್ಣುಗೂಡಿಸುತ್ತವೆ. ಅಸಲಿಗೆ, ಒಂದೇ ಭಾಷೆ, ಸಂಸ್ಕೃತಿ, ಪರಂಪರೆಯನ್ನು ಹೊಂದಿರುವ ಪ್ರದೇಶಗಳನ್ನು ಸೇರಿಸಿ ರಾಜ್ಯ ರಚಿಸುವುದರಿಂದ ಅಭಿವೃದ್ಧಿ ವೇಗವಾಗುತ್ತದೆ. ●

ಅಗ್ನಿದಿವ್ಯದಲ್ಲಿ ಮಿಂದ ತೆಂಡೂಲ್ಕರ್

●ಟಿ. ಅವಿನಾಶ್

ಕ್ರಿಕೆಟ್ ಮೈದಾನದ ಸಭ್ಯಸ್ಥನೊಬ್ಬ ಅಕ್ಷರಶಃ ...ಃ ಗರ್ಜಿಸಿದ್ದಾನೆ. ಮೊನ್ನೆ ತಾನೆ ಸಚಿನ್ ...ಬಲಿಸಿದ ಅಪರೂಪದ ದ್ವಿಶತಕದ ಪರಿಗೆ ...ತ್ತಮವೆನ್ನಬಹುದಾದ ದಕ್ಷಿಣ ಆಫ್ರಿಕಾದ ...ಲಿಂಗ್ ನುಚ್ಚುನೂರಾಗಿದೆ. ಇದರೊಂದಿಗೆ ...ss is always class' ಎಂಬ ನುಡಿಗಟ್ಟು ...ರ್ಣ ಸತ್ಯ ಎಂಬುದಕ್ಕೆ ಪುನಃ ಪುರಾವೆ ...ರಕಿದೆ! ಶತಕ ಗಳಿಸುವುದು ಈತನಿಗೆ ...ಂತ್ರಿಕ ಎನ್ನುವಷ್ಟು ಸುಲಭವಾದರೂ ...ಬಿಯರ್‌ನಲ್ಲಿ ಸಚಿನ್ ಕಟ್ಟಿದ ಇನ್ನಿಂಗ್ಸ್‌ನ ...ದರ್ಯವೇ ಮತ್ತೊಂದು ಲೋಕದ್ದಾಗಿತ್ತು. ...ದ ಕೆಲ ವರ್ಷಗಳಲ್ಲಿ ಸಚಿನ್ ಬ್ಯಾಟಿನಿಂದ ... ಮಳೆ ಹರಿಯುತ್ತಿದ್ದರೂ ಅವುಗಳಲ್ಲಿ ...ತ್ಯದ ಅಂಶ ಕಡಿಮೆಯಾಗಿ ಗದ್ಯದ ಅಂಶವೇ ...ಚ್ಚು ವಿಜೃಂಭಿಸತೊಡಗಿತ್ತು. ಹಿಂದಿನಂತೆ ಈತ ...ಕಾರಯುತವಾಗಿ ಬ್ಯಾಟ್ ಬೀಸಿ ತನ್ನ ...ಪತ್ಯ ಸ್ಥಾಪಿಸುವುದು ಕಡಿಮೆಯಾಗಿತ್ತು. ...ನೇನಿದ್ದರೂ ನಿಧಾನವಾಗಿ, ಒಂದಾದ ...ಲೊಂದು ಇಟ್ಟಿಗೆ ಜೋಡಿಸಿದಂತೆ ...ನ್ ತನ್ನ ಇನ್ನಿಂಗ್ಸ್ ಕಟ್ಟತೊಡಗಿದ್ದ. ...ತನ ಬ್ಯಾಟಿಂಗ್ ಅಬ್ಬರದ ದಿನಗಳು ...ಗಿದವು ಎಂಬುದು ಸೂಕ್ಷ್ಮ ...ಕ್ಷಕರ ಅಭಿಪ್ರಾಯವೂ ಆಗಿತ್ತು. ...ಬ ಸಹಜ ಕೂಡಾ ಹೌದು. ...ಂದರೆ ಸತತವಾಗಿ ಇಪ್ಪತ್ತು ...ರ್ಷಗಳಿಂದ ಅಂತರ...ಷ್ಟ್ರೀಯ ಕ್ರಿಕೆಟ್ ಆಡುತ್ತಿರುವ ಯಾರಿಂದಲೂ ಒಂದೇ ...ರೀತಿಯ, ಕಾವ್ಯಾತ್ಮಕ ಇನ್ನಿಂಗ್ಸ್‌ನ್ನು ಬಯಸುವುದು ...ಕ್ಷಕರ ತಪ್ಪು ಅಪೇಕ್ಷೆಯೇ ಸರಿ!



...ಮೊನ್ನಿನ ಸಚಿನ್ ಇನ್ನಿಂಗ್ಸ್ ಅನೇಕ ಕಾರಣಗಳಿಗಾಗಿ ...ಮೋಘವಾಗಿದೆ. ಇದು ಐವತ್ತು ಓವರ್‌ಗಳ ...ತರರಾಷ್ಟ್ರೀಯ ಪಂದ್ಯದಲ್ಲಿ ಬ್ಯಾಟುಗಾರನೊಬ್ಬನು ...ಸಿದ ಪ್ರಪ್ರಥಮ ದ್ವಿಶತಕ ಎನ್ನುವುದು ನಿಜವಾದರೂ ...ನ್ ಇನ್ನಿಂಗ್ಸ್‌ನ್ನು ಕಟ್ಟಿದ ರೀತಿಯೇ ಇವನೊಳಗಿರುವ ...ನಶೀಲ ಕಲಾವಿದ ಇನ್ನೂ ಜೀವಂತವಾಗಿದ್ದಾನೆ ...ಬುದನ್ನು ಪುನಃ ಸಾರಿದೆ. ಹಾಗೆಯೇ ಮೂವತ್ತರ ...ಯಸ್ಸಿನಾಚೆಯ ಅಂಚಿನಲ್ಲಿದ್ದರೂ ಈತ ಇನ್ನೂ ಅಬ್ಬರಿಸ...ಲ್ಲ ಎಂಬುದೂ ಸಾಧಿತವಾಗಿದೆ. ಸಮಕಾಲೀನ ಕ್ರಿಕೆಟ್ ...ಕ್ರಿ ಎಷ್ಟೇ ಕಮರ್ಷಿಯಲ್ ಆಗಿರಬಹುದು ಅಥವಾ ಕಾರ್ಪೋರೇಟ್ ವಲಯ ಇದನ್ನು ಉದ್ಯಮದ ಮತ್ತೊಂದು ಸಾಧ್ಯತೆಯಾಗಿ ಪರಿಗಣಿಸಿರಬಹುದು. ಸ್ವತಃ ಸಚಿನ್ ಕೂಡಾ ಹಲವಾರು ಕಂಪನಿಗಳ ರೂಪದರ್ಶಿಯಾಗಿರುವುದೂ ನಿಜವೇ. ಈತನ ವ್ಯಕ್ತಿತ್ವದ ಒಳಗೆ ಒಬ್ಬ ಕಲಾವಿದನ ಜೊತೆಗೆ ನಯನಾಜೂಕಾದ 'ಬ್ಯುಸಿನೆಸ್ ಮ್ಯಾನ್' ಕೂಡಾ ಇರುವುದನ್ನು ತಳ್ಳಿ ಹಾಕಲಾಗದು. ಆಧುನಿಕ ಕ್ರಿಕೆಟ್‌ನಲ್ಲಿ ಇದು ಅನಿವಾರ್ಯ ಕೂಡಾ ಹೌದು. ಆದರೆ 'ಹೊಡಿ ಬಡಿ' ಕ್ರಿಕೆಟ್‌ನಲ್ಲೂ ನಯ-ನಾಜೂಕಿನ ಕಲಾತ್ಮಕತೆಗೆ ಇನ್ನೂ ಸ್ಥಾನವಿದೆ ಎಂಬುದನ್ನು ಸಾರಿದ್ದೇ ಮೊನ್ನಿನ ಸಚಿನ್ ಬ್ಯಾಟಿಂಗ್‌ನ ಪ್ರಾಮುಖ್ಯತೆ. ಈತ ದ್ವಿಶತಕ ಬಾರಿಸಿ ಆಕಾಶದತ್ತ ಇಳಿದು ಬಾ ತಾಯೇ ಎಂಬಂತೆ ಮುಖ ಮಾಡಿದಾಗ ನಮುಗ್ಯಾರಿಗೂ ಆತನ ಪೆಪ್ಸಿ-ಕೋಲಾದ ಜಾಹೀರಾತಾಗಲೀ, ಪ್ರಾಯೋಜಕರ ಹಣವಾಗಲೀ ನೆನಪಾಗಲೇ ಇಲ್ಲ, ಅಲ್ಲವೇ? ಕ್ರೀಡಾ ಕ್ಷೇತ್ರದ ಮಹೋನ್ನತ ಸಾಧನೆ ಈ ತರಹದ ಮಾನವ ನಿರ್ಮಿತಿಗಳನ್ನು ಉಲ್ಲಂಘನೆ ಮಾಡುತ್ತಲೇ ಇರುತ್ತದೆ.


ಇತ್ತೀಚಿನ ದಿನಗಳ ಸಚಿನ್‌ನ ನಿಧಾನಗತಿಯ ಬ್ಯಾಟಿಂಗ್ ಹಲವಾರು ವಿಮರ್ಶಕರಿಗೆ ಯಕ್ಷಪ್ರಶ್ನೆಯಾಗಿತ್ತು. ಇವನು ಅಧಿಕಾರಯುತವಾಗಿ ಬ್ಯಾಟಿಂಗ್ ನಡೆಸಿ ಬೌಲರ್‌ಗಳ ಆತ್ಮವಿಶ್ವಾಸ ಕೆಡಿಸುವುದನ್ನು ಮರೆತಿದ್ದಾನೇನೋ ಎನ್ನುವ ಸಂಶಯ ದಟ್ಟವಾಗತೊಡಗಿತ್ತು. ಅನೇಕ ಬಾರಿ ಸಚಿನ್ ಆಶ್ಲೆ ಜೈಲ್ಸ್ ಅಥವಾ ಯೂಹಾನ್ ಬೋಥಾರಂತಹ ತೀರಾ ಸಾಮಾನ್ಯ ಬೌಲರ್‌ಗಳನ್ನು ಸಿಕ್ಕಾಪಟ್ಟೆ ಎಚ್ಚರಿಕೆಯಿಂದ ಆಡಿ ಅವರೂ ಶೇನ್‌ವಾರ್ನ್ ರೀತಿ ಅಪ್ರತಿಮರಿರಬಹುದೇ ಎಂಬ ಸಂಶಯ ಬರುವಂತೆ ಮಾಡಿದ್ದೂ ಇದೆ!! ಏಕೆಂದರೆ ಒಬ್ಬ ಬ್ಯಾಟ್ಸ್‌ಮನ್ ಸಾರ್ವಕಾಲಿಕ ಶ್ರೇಷ್ಠ ಎಂಬ ಕೀರ್ತಿಗೆ ಭಾಜನವಾಗಬೇಕಾದರೆ ಆತ ಮೈದಾನದಲ್ಲಿ ಯಾವ ಬಗೆಯಲ್ಲಿ ವಿಜೃಂಭಿಸಿ ತನ್ನ ಪರಮಾಧಿಕಾರ ಸ್ಥಾಪಿಸುತ್ತಾನೆ ಎಂಬುದು, ನಿರ್ಣಾಯಕ ಅಂಶವಾಗಿರುತ್ತದೆ. ಮೊನ್ನಿನ ಸಚಿನ್ ಇನ್ನಿಂಗ್ಸ್ ಬ್ಯಾಟಿಂಗ್ ಕೌಶಲ್ಯದ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿತ್ತು ಎಂಬುದನ್ನು ನೆನಪಿಡಬೇಕು. ಖಚಿತತೆ, ಲಯ, ರೇಶ್ಮೆಯಂತಹ ನಯ-ನಾಜೂಕು, ಚೆಂಡಿನ ಗತಿ ಅರಿತು ಅಧಿಕಾರದಿಂದ ಆಡುವ ಕೌಶಲ್ಯ, ಪ್ರಯೋಗಶೀಲತೆಗಳೆಲ್ಲವೂ ಮೊನ್ನೆಯ ಇನ್ನಿಂಗ್ಸ್‌ನಲ್ಲಿ ಮೇಳೈಸಿತ್ತು. ಚೆಂಡು ಈತ ಹೇಳಿದಂತೆ ಕೇಳತೊಡಗಿತ್ತು. ಅತ್ಯುತ್ತಮ ಎನ್ನಬಹುದಾದ ದಕ್ಷಿಣ ಆಫ್ರಿಕಾದ ಫೀಲ್ಡಿಂಗ್ ಈತನಿಗೆ ಯಾವ ತೊಂದರೆಯನ್ನೂ ನೀಡಲಿಲ್ಲ. ಸಚಿನ್ ಅಕ್ಷರಶಃ ಮಾಂತ್ರಿಕನಾಗಿ ಬದಲಾಗಿದ್ದ!

ಹಾಗಾದರೆ ತೆಂಡೂಲ್ಕರ್ ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ನನೇ? ಎಂಬ ಪ್ರಶ್ನೆ ನಮ್ಮನ್ನು ಕಾಡುವುದು ಸಹಜ. ಆದರೆ ನಮ್ಮ ಭಾರತೀಯತೆಯನ್ನು ಮರೆತು ನಾವು ಯೋಚಿಸಿದರೆ ಇದಕ್ಕೆ ಸರಳ ಉತ್ತರವಿಲ್ಲ ಎನ್ನುವುದು ನಮಗೆ ಗೊತ್ತಾಗುತ್ತದೆ. ಈತನ ಸಮಕಾಲೀನ ಬ್ಯಾಟ್ಸ್‌ಮನ್ ಬ್ರಿಯಾನ್ ಲಾರಾ ಈತನಿಗಿಂತಲೂ ಅದ್ಭುತವೆನ್ನಿಸುವ ಹಲವಾರು ಸುದೀರ್ಘ ಇನ್ನಿಂಗ್ಸ್ ಕಟ್ಟಿರುವುದನ್ನು ನಾವು ಒಪ್ಪಲೇಬೇಕು. ಪತನಗೊಂಡ, ಕ್ಲಬ್ ಮಟ್ಟದ ವೆಸ್ಟ್ ಇಂಡೀಸ್ ತಂಡದಲ್ಲಿ ಸತತ ಸೋಲಿನ ಮಧ್ಯೆಯೂ ಆಡಿ ಕ್ರಿಕೆಟ್ ವೀಕ್ಷಕರಲ್ಲಿ ಕಿಚ್ಚು ಹೊತ್ತಿಸಿದ್ದು ಲಾರಾನ ಸಾಧನೆ. ಒಮ್ಮೆ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಒಂದರಲ್ಲಿ ದಿನದ ಆಟ ಮುಗಿಯುವ ಎರಡನೇ ಅಂತಿಮ ಓವರ್‌ನಲ್ಲಿ ಲಾರಾ ಪ್ಯಾಟ್ ಸಿಮ್‌ಕಾಕ್ಸ್‌ನ ಬೌಲಿಂಗ್‌ನಲ್ಲಿ ಸತತ ಐದು ಬೌಂಡರಿ ಬಾರಿಸಿದ್ದ! ಈ ರೀತಿಯ ಸಾಹಸವನ್ನು ಸಚಿನ್‌ನಲ್ಲಿ ನಿರೀಕ್ಷಿಸಲಾಗದು. ಆದರೆ ಲಾರಾ ಸಚಿನ್‌ನಷ್ಟು **consistent** ಅಲ್ಲ ಎನ್ನುವುದನ್ನು ಸ್ವತಃ ಆತನೇ ಒಪ್ಪಿದ್ದಾನೆ. ಅಥವಾ ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಕಳೆದ ಐದು-ಆರು ವರ್ಷಗಳಲ್ಲಿ ಗಳಿಸುತ್ತಿರುವ ಶತಕದ ವೇಗ ಗಮನಿಸಿದರೆ ಈತ ಸಚಿನ್‌ನ ದಾಖಲೆಯನ್ನು ಮೀರಬಹುದು ಎಂಬುದೂ ಸತ್ಯವೇ. ಆದರೆ ಪಾಂಟಿಂಗ್ ಮೊದಲಿನಿಂದಲೂ ಒಂದು ಸಶಕ್ತ ತಂಡದಲ್ಲಿ ಆಡುತ್ತಿದ್ದಾನೆಂಬುದನ್ನು ಮರೆಯುವಂತಿಲ್ಲ. ಕಳೆದ ದಶಕದ ಅತಿಶ್ರೇಷ್ಠ ಬ್ಯಾಟ್ಸ್‌ಮನ್ ಎಂಬ ಖ್ಯಾತಿ ಈತನಿಗಿದ್ದರೂ ರಿಕಿ ಪಾಂಟಿಂಗ್ ಬ್ಯಾಟಿಂಗ್‌ನ್ನು **redefine** ಮಾಡಿದ್ದಾನೆ ಎನ್ನಿಸುವುದಿಲ್ಲ. ಸಚಿನ್ ಅಥವಾ ಲಾರಾ ಖಂಡಿತಾ ಬ್ಯಾಟಿಂಗ್ ಕುಶಲತೆಯನ್ನು ಮತ್ತೊಂದು ಲೋಕಕ್ಕೆ ತೆಗೆದೊಯ್ಯಬಲ್ಲರು. ಪ್ರಾಯಶಃ ಹಿಂದಿನ ತಲೆಮಾರಿನ ವಿವಿಯನ್ ರಿಚರ್ಡ್ಸ್ ಇವರಷ್ಟೇ ಅಥವಾ ಸ್ವಲ್ಪ ಹೆಚ್ಚೇ ಬೌಲರ್‌ಗಳ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಿದ್ದ. ರಿಚರ್ಡ್ಸ್ ಆಡುತ್ತಿದ್ದ ದಿನಗಳಲ್ಲಿ ಬೆಂಕಿಯುಗುಳುವ ವೇಗಿಗಳು ಸಾಕಷ್ಟಿದ್ದರು. ಹಾಗೆಯೇ ಮೈದಾನದ ಪಿಚ್‌ಗಳು ಈಗಿನಷ್ಟು ಏಕಪಕ್ಷೀಯವಾಗಿ ಬ್ಯಾಟ್ಸ್‌ಮನ್ ಪರವಾಗಿರಲಿಲ್ಲ. ಚೆಂಡು ಸ್ವಿಂಗ್ ಆಗುತ್ತಿರುವ ಹೆಡಿಂಗ್ಲೇ ಪಿಚ್‌ನಲ್ಲಿ ರಿಚರ್ಡ್ಸ್ ಗಳಿಸಿದ ಅಜೇಯ 189 ರನ್‌ಗಳನ್ನು ಯಾರಿಂದಲೂ ಮರೆಯಲು ಸಾಧ್ಯವಿಲ್ಲ. ಇದರರ್ಥ ಸಚಿನ್ ಇವರೆಲ್ಲರಿಗಿಂತ ಕೆಳಮಟ್ಟದವನೆಂದು ನಾನು ವಾದಿಸುತ್ತಿಲ್ಲ. ಬದಲಾಗಿ, ಯಾರು ಸರ್ವಶ್ರೇಷ್ಠರು ಎಂಬ ಪ್ರಶ್ನೆ ಬಹಳ ಗೊಂದಲಕಾರಿಯಾದದು ಎಂಬುದನ್ನು ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹಾಗೆ ನೋಡಿದರೆ ಈ ಪ್ರಶ್ನೆಯೇ ತೀರಾ ಅಪ್ರಸ್ತುತ. ಶ್ರೇಷ್ಠತೆಯ ವ್ಯಸನವನ್ನು ಬದಿಗಿಟ್ಟು ಭಾರತೀಯ ಸಂದರ್ಭದಲ್ಲಿ ಸಚಿನ್‌ನನ್ನು ಅರ್ಥಮಾಡಿಕೊಳ್ಳುವುದು ಹಾಗೂ ಆತನ ಬ್ಯಾಟಿಂಗ್‌ನ್ನು ಸವಿಯುವುದೇ ಹೆಚ್ಚು ಸೂಕ್ತ ಎನ್ನಿಸುತ್ತದೆ.


ನೋಡಿ.. ಭಾರತದಂತಹ ದೇಶದ ಅಂತರರಾಷ್ಟ್ರೀಯ ಕ್ರೀಡಾ ಸಾಧನೆ ತೀರಾ ಗೌಣ. ಹಾಗಾಗಿ ಪ್ರೇಕ್ಷಕರು ಒಬ್ಬ ಪರಿಪೂರ್ಣ ಕ್ರೀಡಾ ತಾರೆಗಾಗಿ ಹಪಹಪಿಸುತ್ತಿರುತ್ತಾರೆ. ತಮ್ಮಲ್ಲಿ ಇರದ ಕ್ರೀಡಾ ಕೌಶಲ್ಯವನ್ನು, ಸ್ಟಾರ್ ಗಿರಿಯನ್ನು, ಆದರ್ಶದ ವ್ಯಕ್ತಿತ್ವವನ್ನು ಇವರು ಬೇರೆಯವರಲ್ಲಿ ಹುಡುಕುತ್ತಿರುತ್ತಾರೆ. ಸಚಿನ್ ಈ ರೀತಿ ಕೋಟಿ-ಕೋಟಿ ಜನರ ಅಪೇಕ್ಷೆಗಳ ಒತ್ತಡವನ್ನು ತನ್ನ ಮೈಮೇಲೆ ಎಳೆದುಕೊಂಡಿದ್ದಾನೆ. ಇದಕ್ಕಿಂತ ಹೆಚ್ಚಾಗಿ ತನಗೆ ಸಂದ ಖ್ಯಾತಿಯನ್ನು ಒಬ್ಬ ಸಭ್ಯಸ್ಥನಂತೆ ಬಹಳ ಜವಾಬ್ದಾರಿಯುತವಾಗಿ ನಿಭಾಯಿಸಿದ್ದಾನೆ. ಯಾವ ಸಂದರ್ಭದಲ್ಲೂ ಈತ ಮಾನಸಿಕ ಸ್ಥಿಮಿತ ಕಳೆದುಕೊಂಡಿಲ್ಲ. ತನ್ನ ವೈಯಕ್ತಿಕ ಆಸೆ-ಆಕಾಂಕ್ಷೆಗಳನ್ನು ತ್ಯಾಗ ಮಾಡಿ ಸತತವಾಗಿ ಉತ್ಕೃಷ್ಟ ಪ್ರದರ್ಶನ ನೀಡಿದ್ದಾನೆ. ಈ ಖ್ಯಾತಿ-ಒತ್ತಡಗಳನ್ನು ನಿಭಾಯಿಸಲು ಋಷಿ ಸದೃಶ ಮಾನಸಿಕ ಸದೃಢತೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಈತನ ಒಂದು ಕಾಲದ ಗೆಳೆಯ ವಿನೋದ್ ಕಾಂಬ್ಳಿಯಂತೆ ಅಥವಾ ನಮ್ಮವನೇ ಆದ ಸದಾನಂದ ವಿಶ್ವನಾಥ್‌ನಂತೆ ಅಥವಾ ಅಮೋಘ ಲೆಗ್ ಸ್ಪಿನ್ನರ್ ಆಗಬಹುದಾಗಿದ್ದ ಎಲ್. ಶಿವರಾಮಕೃಷ್ಣನ್‌ನಂತೆ ಖ್ಯಾತಿಯನ್ನು ನಿಭಾಯಿಸಲಾಗದೇ ವ್ಯಸನ-ಚಟಗಳಿಗೆ ಬಲಿಯಾಗಬೇಕಾಗಿ ಬರುತ್ತಿತ್ತು. ಎಲ್ಲವಿದ್ದೂ ಮೋಸದಾಟದ ಜಾಲಕ್ಕೆ ಬಲಿಯಾದ ಹ್ಯಾನ್ಸಿ ಕ್ರೋನಿಯೇ-ಅಜರುದ್ದೀನ್-ಜಡೇಜಾರಂತೆ ಈತ ಕಾಲ್ಜಾರಬಹುದಿತ್ತು. ಅಂತಹ ವಿಷ ಗಳಿಗೆಯಲ್ಲೂ ಈತ ಕಾಯ್ದುಕೊಂಡ ನೈತಿಕತೆಯನ್ನು ನಾವು ನೆನಪಿಸಿಕೊಳ್ಳಲೇಬೇಕು. ಸಚಿನ್ ಎಷ್ಟೊಂದು ವಿನಯವಂತ ಎಂದರೆ ಈ ಅಮೋಘ ದ್ವಿಶತಕದ ನಂತರ ರವಿ ಶಾಸ್ತ್ರಿ 'ಏನಯ್ಯಾ, ಏನು ಹೇಳುತ್ತೀಯಾ' ಎಂದು ಕೇಳಿದರೆ 'ಇದರಲ್ಲಿ ನನ್ನದು ಹೆಚ್ಚೇನಿಲ್ಲ, ತಂಡಕ್ಕಾಗಿ ಆಡಿದೆ. ನಾವು ನಾನೂರು ರನ್ ತಲುಪಲು ದೋನಿ, ಯೂಸೂಫ್ ಪಠಾನ್ ಹಾಗೂ ದಿನೇಶ್ ಕಾರ್ತಿಕ್‌ರೇ ಕಾರಣ' ಎಂದ! ಇದು ತೋರಿಕೆಯ ವಿನಯವಲ್ಲ. ಕಳೆದ ದಶಕದ ಮಹೋನ್ನತ ಟೆನಿಸ್ ತಾರೆ ಪೀಟ್ ಸಾಂಪ್ರಾಸ್ ಸಂದರ್ಶನವೊಂದರಲ್ಲಿ ತಾನು ಸರ್ವಶ್ರೇಷ್ಠ ಪಟ್ಟಕ್ಕೇರಲು ಕಳೆದುಕೊಂಡ ಬಾಲ್ಯ-ತಾರುಣ್ಯ ಹಾಗೂ ತ್ಯಾಗ ಮಾಡಿರುವುದನ್ನು ಕುರಿತು ತನ್ನ ನಿವೃತ್ತಿಯ ನಂತರ ಬಹಿರಂಗಪಡಿಸಿದ್ದ. ಹಾಗೆಯೇ ಸಚಿನ್ ಕೂಡಾ ಕ್ರಿಕೆಟ್‌ನಿಂದ ಗಳಿಸಿದಂತೆ ತ್ಯಾಗ ಮಾಡಿದ್ದೂ ಬಹಳವಿದೆ. ಹದಿನಾರನೇ ವಯಸ್ಸಿನಲ್ಲಿದ್ದ ಪ್ಯಾಶನ್ ಇವತ್ತಿನವರೆಗೂ ಈತ ಕಾಯ್ದುಕೊಂಡು ಬಂದಿದ್ದಾನೆನ್ನುವುದು ಸರಳ ಮಾತೇನಲ್ಲ. ಆಧುನಿಕ ಕ್ರೀಡೆ ಕೇವಲ ಪ್ರತಿಭೆಯನ್ನಷ್ಟೇ ಬೇಡುವುದಿಲ್ಲ. ಅದು ದೊಡ್ಡ ಮಟ್ಟದ ಕಮಿಟ್‌ಮೆಂಟ್‌ನ್ನು ಅಪೇಕ್ಷಿಸುತ್ತದೆ. ಅಗ್ನಿದಿವ್ಯದಲ್ಲಿ ಮಿಂದಾಗಲೇ ಪ್ರತಿಫಲ ಸಾಧ್ಯ.



ಈತನ ಹಲವಾರು ವೈಯಕ್ತಿಕ ದೋಷಗಳನ್ನು ನಾವು ಪಟ್ಟಿ ಮಾಡಬಹುದು. ಆಧುನಿಕ ಪ್ರಗತಿಪರ ಪ್ರಜ್ಞೆಯಲ್ಲಿ ಈತನನ್ನು ಅಳೆಯುವುದು ಸಚಿನ್ನನ ಕ್ರೀಡಾ ಸಾಮರ್ಥ್ಯಕ್ಕೆ ಮಾಡುವ ಅನ್ಯಾಯವೇ ಸರಿ. ಆದರೆ ಈತ ಕ್ರಿಕೆಟ್ ಮೈದಾನದಲ್ಲಿ ಉಂಟುಮಾಡುವ ಕಂಪನದ ಎದುರು ಇವುಗಳೆಲ್ಲವು ಸದ್ಯಕ್ಕೆ ಗೌಣ. ಈಗ ನಾವು ಗವಾಸ್ಕರ್ ಅಥವಾ ಕಪಿಲ್‌ರನ್ನು ಅವರ ಆಟಕ್ಕೆ ನೆನಪಿಸಿಕೊಳ್ಳುತ್ತೇವೆ ಹೊರತು ಆ ಕಾಲದ ಅವರ ನಡುವಿನ ಶೀತಲ ಸಮರದ ಕಾರಣಕ್ಕಲ್ಲ, ಅಲ್ಲವೇ? ●




ನೋಡಿ.. ಭಾರತದಂತಹ ದೇಶದ ಅಂತರರಾಷ್ಟ್ರೀಯ ಕ್ರೀಡಾ ಸಾಧನೆ ತೀರಾ ಗೌಣ. ಹಾಗಾಗಿ ಪ್ರೇಕ್ಷಕರು ಒಬ್ಬ ಪರಿಪೂರ್ಣ ಕ್ರೀಡಾ ತಾರೆಗಾಗಿ ಹಪಹಪಿಸುತ್ತಿರುತ್ತಾರೆ. ತಮ್ಮಲ್ಲಿ ಇರದ ಕ್ರೀಡಾ ಕೌಶಲ್ಯವನ್ನು, ಸ್ಟಾರ್ ಗಿರಿಯನ್ನು, ಆದರ್ಶದ ವ್ಯಕ್ತಿತ್ವವನ್ನು ಇವರು ಬೇರೆಯವರಲ್ಲಿ ಹುಡುಕುತ್ತಿರುತ್ತಾರೆ. ಸಚಿನ್ ಈ ರೀತಿ ಕೋಟಿ-ಕೋಟಿ ಜನರ ಅಪೇಕ್ಷೆಗಳ ಒತ್ತಡವನ್ನು ತನ್ನ ಮೈಮೇಲೆ ಎಳೆದುಕೊಂಡಿದ್ದಾನೆ. ಇದಕ್ಕಿಂತ ಹೆಚ್ಚಾಗಿ ತನಗೆ ಸಂದ ಖ್ಯಾತಿಯನ್ನು ಒಬ್ಬ ಸಭ್ಯಸ್ಥನಂತೆ ಬಹಳ ಜವಾಬ್ದಾರಿಯುತವಾಗಿ ನಿಭಾಯಿಸಿದ್ದಾನೆ. ಯಾವ ಸಂದರ್ಭದಲ್ಲೂ ಈತ ಮಾನಸಿಕ ಸ್ಥಿಮಿತ ಕಳೆದುಕೊಂಡಿಲ್ಲ.



ರಾಜಶೇಖರ್ ಹತ್ಯೆ ಸುಪಾರಿ ಕೊಟ್ಟಿದ್ದು ಕಾಟನ್‌ಪೇಟೆ ಪುಷ್ಪ?

ಈ ವಾರಕ್ಕೆ ಡೆಡ್ಲಿ ಸೋಮನ ಬಂಟ ರಾಜಶೇಖರ್ ಕೊಲೆಯಾಗಿ ತಿಂಗಳಾಗುತ್ತದೆ. ಹಂತಕರ ಜಾಡಿರಲಿ ಹತ್ಯೆಗೆ ಕಾರಣವೇನೆಂಬುದನ್ನೂ ಪೊಲೀಸರಿಂದ ಪತ್ತೆಹಚ್ಚಲಾಗುತ್ತಿಲ್ಲ. ಕಾರಣ ಗೊತ್ತಾದರೆ ತಾನೇ ಹಂತಕನ ವಾಸನೆ ಹಿಡಿಯೋದು?



ಜನವರಿ 26ರ ಗಣರಾಜ್ಯೋತ್ಸವದಂದು ಶಂಕರಪುರದ ರಂಗರಾವ್ ರಸ್ತೆಯ ಆರೆಸ್ಸೆಸ್ ಅಡ್ಡೆ ಕೇಶವಕೃಪದ ಎದುರಿಗೇ ಕೊಲೆಯಾದವನು ರಾಜಶೇಖರ. ಸಾಯುವ ಮುನ್ನ ಹಂತಕ ಪಡೆ ಅಟ್ಟಾಡಿಸಿ ಕತ್ತರಿಸುತ್ತಿದ್ದರೆ ರಾಜಶೇಖರ 'ಏಯ್... ಶಂಕ್ರಾ... ಹೊಡಿಬ್ಯಾಡೋ... ಶಂಕ್ರಾ' ಎಂದು ಕಿರುಚಾಡಿದ್ದನ್ನು ಸ್ವತಃ ಆತನ ಪತ್ನಿ ಜಯಶ್ರೀಯೇ ಕಿವಿಯಾರೆ ಕೇಳಿದ್ದಳಲ್ಲ-

ಶಂಕರಪುರಂ ಇನ್ಸ್‌ಪೆಕ್ಟರ್ ವಾಲಿಭಾಷಾ ಮೊದಲು ವಾಲೆ ಶಂಕ್ರನನ್ನು ಎಳೆದೊಯ್ದು ಬಾಯಿಬಿಡಿಸಿದಾಯ್ತು. ನಂತರ ಕುಳ್ಳ ಶಂಕ್ರನನ್ನು ತಂದು ರುಬ್ಬಿದರು. ಮೀಟರ್ ಮಹೇಶನೂ ಸಿಕ್ಕಿಬಿದ್ದ. ತಕ್ಕಾಳಿ ಬಾಬು, ಗಾರ್ಡನ್ ಸೀನ, ಚಂದ್ರಾಲೇಔಟಿನ ಪುಟ್ಟಾ, ಹನುಮಂತನಗರದ ಶೇಖಿ, ಚಾಮರಾಜಪೇಟೆಯ ಶಿವಾ, ಕತ್ರಿಗುಪ್ಪೆ ಲಿಂಗ- ಹೀಗೆ ಯಾರ್‍ಯಾರನ್ನೋ ಎಳೆದೊಯ್ದು ಬಾಯಿ ಬಡಿಸಿದರೂ ರಾಜಶೇಖರನ ಹಂತಕರ್‍ಯಾರು, ಕೊಂದದ್ದು ಏಕೆಂಬುದೇ ಪೊಲೀಸರಿಗೆ ನಿಲುಕಲಿಲ್ಲ. ಯಾರ್‍ಯಾರ ಮೇಲೆ ಗುಮಾನಿಯಿತ್ತೋ ಅವರ್‍ಯಾರೂ ರಾಜಶೇಖರನ ಕೊಲೆಗೆ ಕಾರಣರಾಗಿರಲಿಲ್ಲ.

ಒಂದೆಡೆ ಶಂಕರಪುರಂ ಇನ್ಸ್‌ಪೆಕ್ಟರ್ ವಾಲಿಭಾಷಾ, ಮತ್ತೊಂದೆಡೆ ಚಾಮರಾಜಪೇಟೆ ಪೊಲೀಸರು, ಮಗದೊಂದೆಡೆ ಸಿಸಿಬಿಯ ಎಸಿಪಿ ಹಾದಿಮನಿ; ಇತ್ಯಾದಿ ಹಿಂಡುಗಟ್ಟಲೇ ಪೊಲೀಸರೆಲ್ಲ ಅಂತಿಮವಾಗಿ ನಿರ್ಧರಿಸಿದ್ದು ರಾಜಶೇಖರನಿಂದ ಸರಿಸುಮಾರು ಒಂದೂವರೆ ಕೋಟಿಯಷ್ಟು ಸಾಲ ಪಡೆದಿದ್ದ ಯಾರೋ ಉಮಾಶಂಕ್ರ ಎಂಬಾತನೇ ಹಂತಕನೆಂದು.



ಆದರೆ ಉಮಾಶಂಕರ್ ಎಂಬಾತ ತಾನೇ ಮುಂದಾಗಿ ಟೀವಿ ಚಾನಲ್ಲೊಂದಕ್ಕೆ ಹೋಗಿ ತನಗೂ ಕೊಲೆಗೂ ಏನೇನೂ ಸಂಬಂಧವಿಲ್ಲ ಎಂದು ಆಣೆ ಪ್ರಮಾಣ ಮಾಡಿಬಿಟ್ಟ. ಅಲ್ಲಿಗೆ ಒಂದು ಸುತ್ತಿನ ಪೊಲೀಸ್ ತನಿಖೆ ಮುಗಿದು ಹಂತಕನ ಸುಳಿವಿನ ಎಲ್ಲಾ ದಾರಿಗಳೂ ಮುಚ್ಚಿಹೋದಂತಾಗಿತ್ತು. ಮೀಟರ್ ಮಹೇಶ ದೆಹಲಿಯಲ್ಲಿ ಸಿಕ್ಕಿಬಿದ್ದರೂ ಏನಾದರೂ ಗೊತ್ತಿದ್ದರೆ ತಾನೇ ಬಾಯಿ ಬಿಡೋದು?



ವಿಧಿಯಿಲ್ಲದೇ ಪೊಲೀಸರು ತಕ್ಕಾಳಿ ಬಾಬು ಮತ್ತು ಮೀಟರ್ ಮಹೇಶನ ತಲೆಗೆ ರಾಜಶೇಖರನ ಕೊಲೆ ಕೇಸನ್ನು ತಗುಲಿ ಹಾಕಿ ಕೈತೊಳೆದುಕೊಳ್ಳುವ ಸಿದ್ಧತೆಯಲ್ಲಿದ್ದಾರೆಂಬುದು ಲೇಟೆಸ್ಟ್ ಸುದ್ದಿಯಷ್ಟೇ.

ಹಾಗಾದರೆ ರಾಜಶೇಖರನನ್ನು ಕೊಂದ ಅಸಲೀ ಹಂತಕರ್‍ಯಾರು?

ಈ ಪ್ರಶ್ನೆಗೆ ಪೊಲೀಸರಲ್ಲಿ ಉತ್ತರವಾಗಲಿ, ಸುಳಿವಾಗಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಅಂಡರ್‌ವರ್ಲ್ಡ್ ಮೂಲಗಳು ಬೇರೆಯದೇ ಸಾಧ್ಯತೆಯೊಂದನ್ನು ಅರ್ಥೈಸುತ್ತಿವೆ. ಅದು ಕಾಟನ್ ಪೇಟೆ ಪುಷ್ಪ!

ಬೆಂಗಳೂರು ಪಾಪ ಕೂಪದ ಸೂಕ್ಷ್ಮ ಕದಲಿಕೆಗಳನ್ನು ಬಹುಶಃ ಪೊಲೀಸರೂ ಗಮನಿಸಿರಲಿಕ್ಕಿಲ್ಲ. ಅಂಥದೊಂದು ಸದ್ದಿಲ್ಲದ ವಿದ್ಯಮಾನಕ್ಕೆ ಕಾರಣನಾದವನು ಡೆಡ್ಲಿ ಸೋಮನ ಮತ್ತೊಬ್ಬ ಬಂಟ ಚಂದು. ಸದ್ಯ ಆತ ಮೈಸೂರಿನ ವಾಸಿ. ಡೆಡ್ಲಿ ಸೋಮನ ಎನ್‌ಕೌಂಟರ್ ನಂತರ ಪೊಲೀಸ್ ಕಾಟಕ್ಕೆ ಹೆದರಿಯೇ ಊರು ಬಿಟ್ಟ ಚಂದು ಇಲ್ಲಿಗೆ ಆರು ತಿಂಗಳ ಹಿಂದೆ ಇದ್ದಕ್ಕಿದ್ದಂತೆ ಬೆಂಗಳೂರಿನಲ್ಲಿ ಕಾಣಿಸಿಕೊಂಡ. ಒಂದೆರಡು ಕಡೆ ರಾಜಶೇಖರನನ್ನು ಜೊತೆ ಹಾಕಿಕೊಂಡೇ ಪೋಜು ಕೊಟ್ಟಿದ್ದ.

ಚಂದು ಮತ್ತು ರಾಜಶೇಖರ ಹೇಳಿಕೇಳಿ ಡೆಡ್ಲಿ ಸೋಮನ ಹಾರ್ಡ್‌ಕೋರ್ ಸಹಚರರು. ಇಬ್ಬರೂ ಒಟ್ಟೊಟ್ಟಿಗೆ ಓಡಾಡುತ್ತಿದ್ದುದ್ದರ ವಾಸನೆ ಡೆಡ್ಲಿ ಸೋಮನ ಪಾಲಿಗೆ ಕಡುವೈರಿಯಾಗಿದ್ದ ಪುಷ್ಪನ ಮೂಗಿಗೆ ಬಡಿಯದೇ ಇರುತ್ತಾ?

ಬಹುಶಃ ತಕ್ಕಾಳಿ ಬಾಬು ಮತ್ತು ತನ್ನ ಮಧ್ಯೆ ವೈಮನಸ್ಯ ಬಂದಿದ್ದರಿಂದಲೇ ರಾಜಶೇಖರ ಚಂದು ಜೊತೆ ಸುತ್ತುತ್ತಿದ್ದಾನೆಂದು ಅಂಡರ್‌ವರ್ಲ್ಡ್ ಮಾತಾಡಿಕೊಂಡಿತಾದರೂ ಅದಕ್ಕಿದ್ದ ಕಾರಣವೇ ಬೇರೆಯಿತ್ತು.

ಡೆಡ್ಲಿಸೋಮನ ಕೈಯಿಂದ ಯಾವತ್ತೋ ಹತನಾಗಿದ್ದ ಪುಷ್ಪನ ಶಿಷ್ಯ ಕಾಟನ್‌ಪೇಟೆ ವಸಂತನ ತಮ್ಮನಾದ ಮೀಟರ್ ಮಹೇಶನನ್ನು ತಕ್ಕಾಳಿ ಬಾಬು ಜೊತೆ ಹಾಕಿಕೊಂಡಿದ್ದು ರಾಜಶೇಖರನ ಅಸಹನೆಗೆ ಕಾರಣವಾಗಿತ್ತು. ದುಷ್ಮನ್ ಯಾವತ್ತಿದ್ದರೂ ದುಷ್ಮನ್ನೇ ತಾನೆ? ಹೀಗೆ ಮೀಟರ್ ಮಹೇಶನನ್ನು ತನ್ನ ಜೊತೆ ಹಾಕಿಕೊಂಡ ತಕ್ಕಾಳಿ ಬಾಬು ಉದ್ದೇಶದ ಹಿಂದೆ ರಾಜಶೇಖರನಿಗೂ ಆತನಿಗೂ ಇದ್ದ ದುಡ್ಡೂಕಾಸಿನ ಮನಸ್ತಾಪ ಕಾರಣವಾಗಿತ್ತಾ? ಅಥವಾ ಧಿಮಾಕಿಗೆ ಬಿದ್ದು ತಕ್ಕಾಳಿ ಬಾಬು ಆ ರೀತಿ ಪೋಜು ಕೊಟ್ಟನಾ ಗೊತ್ತಿಲ್ಲ.

ನಿಜಕ್ಕೂ ತಕ್ಕಾಳಿ ಬಾಬು ಮೇಲೆ ಮುನಿಸಿಗೆ ಬಿದ್ದಿದ್ದರೆ ಚಂದೂನಂಥ ಬೆಂಗಳೂರನ್ನೇ ಬಿಟ್ಟ, ಫೀಲ್ಡಿನ ಟಚ್ಚನ್ನೇ ಕಳಕೊಂಡವನ ಜೊತೆ ರಾಜಶೇಖರ ಸುತ್ತಬೇಕಿರಲಿಲ್ಲ. ಈ ಹೊತ್ತಿಗಾಗಲೇ ಮಾರ್ಕೆಟ್ ವೇದಿ ಮತ್ತು ಸೈಲೆಂಟ್ ಸುನೀಲನ ತಂಡಕ್ಕೆ ರಾಜಶೇಖರ ಆಪ್ತನಾಗಿಬಿಟ್ಟಿದ್ದ. ಅಂಥಾ ಸಶಕ್ತ ಸುನೀಲನ ಗ್ಯಾಂಗೇ ಜೊತೆಗಿರುವಾಗ ತಕ್ಕಾಳಿ ಬಾಬುಗೋ ಮೀಟರ್ ಮಹೇಶನಿಗೋ ಚಂದೂ ಜೊತೆ ಸುತ್ತುವಷ್ಟು ಮೂರ್ಖ ರಾಜಶೇಖರನಲ್ಲ.

ಚಂದೂ ರಾಜಶೇಖರ ಒಟ್ಟೊಟ್ಟಿಗೆ ಸುತ್ತಾಟಕ್ಕಿಳಿದಿದ್ದರ ಹಕೀಕತ್ತೇ ಬೇರೆಯಿತ್ತು. ಅದು ಚಂದೂನ ರೀಎಂಟ್ರಿ!

ಅಂದರೆ ಮತ್ತೆ ಫೀಲ್ಡಿಗೆ ಬರಲು ಚಂದೂ ಕಾತರಿಸುತ್ತಿದ್ದ. ಮೈಸೂರು ಸೇರಿಕೊಂಡು ದುಡ್ಡೂಕಾಸಿನ ವಿಷಯದಲ್ಲಿ ಬರಬಾದ್ ಆಗಿದ್ದ ಚಂದೂ ಮತ್ತೆ ಬೆಂಗಳೂರಿನಲ್ಲಿ ಫೀಲ್ಡಿಗಿಳಿಯಬೇಕೆಂದರೆ ಸೈಲೆಂಟ್ ಸುನೀಲನಂತೆ ದೊಡ್ಡ ತಲೆ ತೆಗೆದೇ ಎಂಟ್ರಿ ಕೊಡಬೇಕು. ಅದಕ್ಕೆ ಚಂದೂ ಆಯ್ದುಕೊಂಡಿದ್ದು ಡೆಡ್ಲಿ ಸೋಮನ ಹಳೇ ದುಷ್ಮನ್ ಪುಷ್ಪನನ್ನು.

ಸದ್ಯ ಬದುಕಿರುವ ರೌಡಿಗಳ ಪೈಕಿ ಹಳೇತಲೆ ಎಂದರೆ ಪುಷ್ಪನೇ. ಆತನನ್ನು ಮುಗಿಸಿಬಿಟ್ಟರೆ ಗುರು ಸೋಮನ ಜಿದ್ದೂ ತೀರಿದಂತಾಯ್ತು, ಹೆಸರಿಗೆ ಹೆಸರೂ ಸಿಕ್ಕಂತಾಯ್ತು. ಬಹುಶಃ ಚಂದೂನ ಹುನ್ನಾರ ರಾಜಶೇಖರನಿಗೆ ಸರಿ ತೋಚಿರಬೇಕು. ತಾನು ಸೀನಿಗೆ ಬರದೇ ತೆರೆಮರೆಯಿಂದಲೇ ನೆರವಾಗುತ್ತೇನೆಂದು ರಾಜಶೇಖರ ಮಾತು ಕೊಟ್ಟರಲಿಕ್ಕೂ ಸಾಕು. ಅತ್ತ ಪುಷ್ಪ ನಿಕಾಲಿಯಾಗಿ ಚಂದು ಮತ್ತೆ ಫೀಲ್ಡಿಗಿಳಿದನೆಂದರೆ ಅದು ತನಗೇ ಲಾಭವೆಂದು ಆತ ಲೆಕ್ಕ ಹಾಕಿರಬೇಕು.

ಇಷ್ಟಾಗಿದ್ದೇ ತಡ ಹನುಮಂತನಗರದ ಗುಂಡಾ ಎಂಬ ಪಡ್ಡೆ ಹುಡುಗನನ್ನು ಜೊತೆ ಹಾಕಿಕೊಂಡಿದ್ದೇ ಚಂದು ರೌಂಡಿಂಗ್ ಆರಂಭಿಸಿಬಿಟ್ಟ. ಒಂದೆರಡು ಸಾರಿ ಕಾಟನ್ ಪೇಟೆಯ ಪುಷ್ಪನ ಮನೆ ಸುತ್ತಮುತ್ತ ಹೊಂಚು ಹಾಕಿದ್ದ. ತನ್ನನ್ನು ಮುಗಿಸಲೆಂದೇ ಚಂದು ರೌಂಡಿಂಗ್ ಆರಂಭಿಸಿದ್ದಾನೆಂಬ ಸುಳಿವು ಪುಷ್ಪನ ಕಿವಿ ಮುಟ್ಟುವುದು ಎಷ್ಟು ಹೊತ್ತು?



ಇಲ್ಲಿ ಚಂದು ಗಮನಿಸದ ಒಂದು ಸಂಗತಿಯೆಂದರೆ ತನ್ನ ಮತ್ತು ರಾಜಶೇಖರನ ಜೊತೆ ಯಾರೆಲ್ಲ ಹುಡಿಪುಡಿ ರೌಡಿಗಳು ನಂಬಿಕಸ್ತರಂತೆ ಮಾತಾಡುತ್ತಾರೋ ಅವರಿಗೆ ಪುಷ್ಪನ ಜೊತೆಗೂ ಲಿಂಕ್ ಇದ್ದೇ ಇರುತ್ತದೆ. ಪುಷ್ಪ ಕಾಟನ್ ಪೇಟೆ ಬಿಟ್ಟಿರಬಹುದು. ಕ್ರೈಮ್ ಮಾಡದೇ ಇರಬಹುದು. ಹಾಗಂತ ಭೂಗತ ಸಂಪರ್ಕಗಳಿಂದ ಪೂರ್ತಿ ದೂರವಾಗಿಲ್ಲ. ಆತನದೇ ಆದ ಮಾಹಿತಿ ಜಾಲವನ್ನೂ ತೊರೆದಿಲ್ಲ. ಬಹುಶಃ ಚಂದು ರೌಂಡಿಂಗ್ ಗಿಳಿದ ಸಂಗತಿಯನ್ನು ಯಾರೋ ಪುಷ್ಪನ ಕಿವಿ ಮುಟ್ಟಿಸಿದ್ದಾರೆ.

ಮೊದಮೊದಲು ಇದನ್ನು ಪುಷ್ಪ ನಂಬಿರಲಿಲ್ಲ. ಯಾವತ್ತು ರಾಜಶೇಖರ ಮತ್ತು ಚಂದು ಸೇರಿ ತನಗೆ ಸ್ಕೆಚ್ ಹಾಕುವುದನ್ನು ಅವರ ಜೊತೆಗೇ ಇದ್ದ ಯಾರೋ ಒಬ್ಬ ತನ್ನ ಮೊಬೈಲ್ ಆನ್ ಮಾಡಿ ಕೇಳಿಸಿದನೋ ಪುಷ್ಪನ ತಲೆ ತಿರುಗಿದೆ. ಆವತ್ತಿನಿಂದ ತನ್ನ ಬಿಳಿ ಬಣ್ಣದ ಸ್ಕಾರ್ಪಿಯೋ ಗಾಡಿಯನ್ನು ಕಾಟನ್ ಪೇಟೆಯ ಮನೆಯ ಗ್ಯಾರೇಜಿನಲ್ಲೇ ಕಾಯಮ್ಮಾಗಿ ನಿಲ್ಲಿಸಿ ಬೇರೆಬೇರೆ ಗಾಡಿಗಳಲ್ಲಿ ಸುತ್ತಲಾರಂಭಿಸಿದ. ಚಂದು-ರಾಜಶೇಖರ್‌ರಂತೆ ತನ್ನ ಸ್ಕೆಚ್ಚನ್ನು ತನ್ನದೇ ಪರಮಾಪ್ತರ ಬಳಿ ಬಾಯಿತಪ್ಪಿಯೂ ಹೇಳಿಕೊಳ್ಳಲಿಲ್ಲ. ರಾಜಶೇಖರ ತೆರೆಮರೆಯಲ್ಲಿ ಚಂದುವನ್ನು ಮುಂದೆಬಿಟ್ಟು ಕತ್ತಿ ಮಸೆಯುತ್ತಿದ್ದುದರಿಂದ ಆತ ತಾನೇ ಮೊದಲ ಶತ್ರು ಎಂಬುದು ಪುಷ್ಪನ ಲೆಕ್ಕಾಚಾರವಾಗಿತ್ತು.

ಹೇಗೂ ಚಂದು ಕೈಗೆ ಸಿಗಲಾರ. ಆದರೆ ರಾಜಶೇಖರ ಹಾಗಲ್ಲ. ಜಯನಗರದ ತನ್ನ ಸ್ಕಿಲ್‌ಗೇಮ್ ಅಡ್ಡೆಯಲ್ಲೋ ಶಂಕರಪುರದ ಕೇಶವಕೃಪ ಪಕ್ಕದ ತನ್ನ ಮನೆಯಲ್ಲೋ ಸಲೀಸಾಗಿ ಸಿಕ್ಕಿಬಿಡುತ್ತಾನೆ. ರಾಜಶೇಖರನಿಂದ ಚಂದುಗೆ ದುಡ್ಡೂಕಾಸಿನ ನೆರವು ತಪ್ಪಿತೆಂದರೆ ಆತನ ಶಕ್ತಿ ಸಂಪೂರ್ಣವಾಗಿ ಉಡುಗಿದಂತೆಯೇ; ಎಂದು ಲೆಕ್ಕ ಹಾಕಿದ್ದಾನೆ ಪುಷ್ಪ. ತನ್ನ ಶಿಷ್ಯ ಯಶವಂತಪುರದ ಜನಾಗೌಡನೋ ಅಥವಾ ರಾಮಾಚಾರಿ ಕೊಲೆ ಕೇಸಿನಲ್ಲಿದ್ದ ಸುರೇಶನೋ, ಚಾಣಸವಾಡಿ ಕಡೆಯ ಯಾರೋ ಹುಡುಗರನ್ನೋ ಸೆಟ್ ಮಾಡಿ ಜನವರಿ 26 ರ ಗಣರಾಜ್ಯೋತ್ಸವದಂದೇ ಮುಹೂರ್ತವಿಟ್ಟಿರಬೇಕು.

ಪುಷ್ಪನ ಕೈ ತನಗಿಂತಲೂ ಉದ್ದವಿದೆಯೆಂಬುದನ್ನು ಅರಿಯದೇ ರಾಜಶೇಖರ ಅನ್ಯಾಯವಾಗಿ ಬಲಿಯಾಗಿರಬೇಕು. ಹಾಗಾದರೆ ಹಂತಕರ ಪಡೆಯಲ್ಲಿದ್ದ ಶಂಕ್ರ ಯಾರು? ಅಥವಾ ರಾಜಶೇಖರ ಹಂತಕರಲ್ಲಿ ಯಾರೋ ಒಬ್ಬನನ್ನು ಶಂಕ್ರ ಎಂದು ತಪ್ಪಾಗಿ ಗ್ರಹಿಸಿದ್ದನೆ?

ಸದ್ಯ ಅಂಡರ್‌ವರ್ಲ್ಡ್ ಮೂಲಗಳ ಪ್ರಕಾರ ಈ ಸಾಧ್ಯತೆಯೇ ಹೆಚ್ಚಿದೆ. ಬಹುಶಃ ಚಂದು ಮತ್ತು ರಾಜಶೇಖರ ಒಟ್ಟೊಟ್ಟಿಗೆ ಸುತ್ತುತ್ತಿದ್ದದ್ದನ್ನು ಪುಷ್ಪ ತಪ್ಪಾಗಿ ಗ್ರಹಿಸಿದನಾ? ಅಥವಾ ರಾಜಶೇಖರನನ್ನು ಕಂಡರಾಗದ ಯಾರಾದರೂ ಇಲ್ಲದ್ದನ್ನು ಕತೆ ಕಟ್ಟಿ ಪುಷ್ಪನ ಕಿವಿ ಮುಟ್ಟಿಸಿದರಾ?


ಸಿಸಿಬಿಯ ಎಸಿಪಿ ಹಾದಿಮನಿಯವರೇ ಉತ್ತರಿಸಬೇಕಲ್ಲವೆ?

● ರಾ. ಸೋಮನಾಥ್

ಪುಷ್ಪನ ಫಾರಿನ್ ಟೂರ್ ಮತ್ತು ಹನುಮಂತನಗರದ ಶೇಖಿ

ಶಂಕ್ರ, ಉಮಾಶಂಕ್ರ, ತಕ್ಕಾಳಿ ಬಾಬು ಮುಂತಾದವರ ಹೆಸರೇನಾದರೂ ರಾಜಶೇಖರ್ ಹತ್ಯೆಯಲ್ಲಿ ಕೇಳಿಬರದಿರುತ್ತಿದ್ದರೆ ಪುಷ್ಪ ಈ ಹೊತ್ತಿಗಾಗಲೇ ಪೊಲೀಸರಿಗೆ ಶರಣಾಗುತ್ತಿದ್ದ ಎಂಬುದು ಕೆಲವರ ವಾದ. ಹೇಗೂ ಪೊಲೀಸರು ತಕ್ಕಾಳಿ ಬಾಬು ಮತ್ತು ಮೀಟರ್ ಮಹೇಶನನ್ನು ಕೇಸಿಗೆ ಫಿಟ್ ಮಾಡುತ್ತಾರಾದ್ದರಿಂದ ತಾನ್ಯಾಕೆ ರಿಸ್ಕ್ ಪಡೆಯುವುದು ಎಂದು ಪುಷ್ಪ ಲೆಕ್ಕ ಹಾಕಿದ್ದಾನೆಂಬುದು ಇನ್ನೂ ಕೆಲವರ ಲೆಕ್ಕಾಚಾರ.

ರಾಜಶೇಖರ್ ಹತ್ಯೆಯಲ್ಲಿ ನಿಜಕ್ಕೂ ಪುಷ್ಪನ ಕೈವಾಡವಿದೆಯಾ ಅಥವಾ ಯಾರೋ ಕಿಡಿಗೇಡಿಗಳು ಅಂಥದೊಂದು ಕುಚೋದ್ಯ ನಡೆಸುತ್ತಿದ್ದಾರಾ ಗೊತ್ತಿಲ್ಲ.



ಆದರೆ ಪೊಲೀಸರಂತೂ ಸಿಕ್ಕಸಿಕ್ಕವರನ್ನು ತಂದು ಬಾಯಿಬಡಿಸುತ್ತಿದ್ದಾರೆ. ಸದ್ಯ ಪೊಲೀಸ್ ತನಿಖೆಗೆ ಹೆದರಿ ಅನೇಕ ರೌಡಿಗಳು ಬೆಂಗಳೂರು ಬಿಟ್ಟು ಪರಾರಿಯಾಗಿದ್ದಾರೆ. ಹೀಗೆ ತಪ್ಪು ಗ್ರಹಿಕೆಗೆ ಸಿಲುಕಿ ಪೊಲೀಸ್ ಕೆಂಗಣ್ಣಿಗೆ ಗುರಿಯಾದವನು ಹನುಮಂತನಗರದ ಶೇಖಿ ಅಲಿಯಾಸ್ ಚಂದ್ರಶೇಖರ್.

ಯಾವುದೋ ಕಾಲಕ್ಕೆ ಪ್ರವೀಣನ ತಮ್ಮ ಕುಪ್ಪ ಎಂಬಾತನನ್ನು ಕುಯ್ದಿದ್ದು ಬಿಟ್ಟರೆ ಈತನ ಮೇಲಿರುವ ಮತ್ತೊಂದು ಕೇಸೆಂದರೆ ರಾಜಶೇಖರ ಎಂಬ ಫೈನಾನ್ಶಿಯರ್‌ನನ್ನು ಕೊಂದ ಖೊಟ್ಟಿ ಕೇಸು. ರಾಜಶೇಖರ್‌ನ ಅಣ್ಣನ ಮಕ್ಕಳೇ ಆಸ್ತಿಗಾಗಿ ತಮ್ಮ ಚಿಕ್ಕಪ್ಪನನ್ನು ಮುಗಿಸಿದ್ದಕ್ಕೆ ಅನ್ಯಾಯವಾಗಿ ಶೇಖಿ ಜೈಲು ಪಾಲಾದ. ಇದು ಬಿಟ್ಟರೆ ಶೇಖಿಯ ವಿರುದ್ಧ ಮತ್ತೊಂದು ಕೇಸಿಲ್ಲ.

ಇವತ್ತೇನೋ ವಿಚಾರಣೆಗೆ ಕರೀತಾರೆ ಅಂತ ನಾನು ಪೊಲೀಸ್ ಠಾಣೆಗೇನಾದರೂ ಹೋದೆ ಅಂದ್ರೆ ಆವತ್ತು ಸುಳ್ಳು ಕೇಸ್ ಹಾಕಿ ಜೈಲಿಗೆ ಹಾಕಿದಂತೆ ಇವತ್ತು ರಾಜಶೇಖರ ಕೊಲೆ ಕೇಸನ್ನು ನನ್ನ ತಲೆಗೆ ಕಟ್ಟಲ್ಲ ಅನ್ನೋದಕ್ಕೆ ಏನು ಗ್ಯಾರಂಟಿ?

ಇದು ಕೇವಲ ಶೇಖಿಯ ಭೀತಿಯಷ್ಟೇ ಅಲ್ಲ. ನಿಜಕ್ಕೂ ಕೊಂದವರನ್ನು ಬಿಟ್ಟು ಪೊಲೀಸರು ಯಾರ್‍ಯಾರನ್ನೋ ಕೇಸಿಗೆ ತಗುಲಿಸಿ ಜೈಲಿಗೆ ಹಾಕುತ್ತಾರೆಂಬ ಭೀತಿಯುಳ್ಳ ಪ್ರತಿಯೊಬ್ಬ ಪುಡಿರೌಡಿಯ ಲೆಕ್ಕಾಚಾರ. ಇಂಥದ್ದೇ ಭೀತಿಗೆ ಬಿದ್ದ ಅನೇಕ ರೌಡಿಗಳು ಸದ್ಯ ಭೂಗತರಾಗಿದ್ದಾರೆ. ರಾಜಶೇಖರ್‌ನ ಅಸಲೀ ಹಂತಕರು ಪತ್ತೆಯಾಗುವ ತನಕ ಇವರ್‍ಯಾರೂ ಬೆಂಗಳೂರಿಗೆ ಬರುವುದಿಲ್ಲ. ಅಂದಹಾಗೆ ಪುಷ್ಪ ಕೂಡ ಇದೇ ಭೀತಿಯಲ್ಲಿ ಫಾರಿನ್ ಟೂರ್‌ಗೆ ಹೋಗಿದ್ದಾನಂತೆ! ●



ಎಸ್.ಐ. ಸುಷ್ಮಾ ಸಾವಿನ ಮರ್ಮ?

ಒಂದೋ ಹಿರಿಯ ಅಧಿಕಾರಿಗಳ ಕಿರುಕುಳವಿರಬೇಕು ...ಾ ಹೆತ್ತವರ ಕಾಟಕ್ಕೆ ರೋಸತ್ತಿರಬೇಕು. ಇದಾವುದೂ ...ವೆಂದರೆ ಕನಿಷ್ಠ ವಾಸಿಯೇ ಆಗದ ಭಯಂತರ ...ುಲೆಯಿರಬೇಕು. ಈ ಯಾವುದೂ ಇಲ್ಲದೇ ಪೊಲೀಸ್ ...ಖೆಯ ಕೆಲಸ, ಕೈತುಂಬಾ ಸಂಬಳ, ಸೌಲಭ್ಯ ಎಲ್ಲಾ ...ದ್ದು ಓರ್ವ ಲೇಡಿ ಸಬ್‌ಇನ್ಸ್‌ಪೆಕ್ಟರ್ ಆತ್ಮಹತ್ಯೆ ...ಡಿಕೊಳ್ಳುತ್ತಾಳೆಂದರೆ ಅದು ಭಗ್ನಪ್ರೇಮದ ಹತಾಶೆ ...ಲ್ಲದೇ ಮತ್ತೇನು?

...ಆನೇಕಲ್ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ... ಸುಷ್ಮಾ ಆತ್ಮಹತ್ಯೆಗೆ ಸಂಬಂಧಪಟ್ಟಂತೆ ಇಲಾಖಾ ...ಾಮಿಸ್ತರ ಮುಂದೆ ಇನ್ನಾವುದೇ ಸಾಧ್ಯತೆ ಕಾಣುತ್ತಿಲ್ಲ.

...ಮೊನ್ನೆ ಅಂದರೆ 2010 ರ ಫೆಬ್ರವರಿ 22 ರ ...ಮವಾರ ರಾತ್ರಿ ಆನೇಕಲ್‌ನ ಪೊಲೀಸ್ ವಸತಿಗೃಹದ ...ಕೋಣೆಯಲ್ಲೇ ಆತ್ಮಹತ್ಯೆ ಮಾಡಿಕೊಂಡ ಕ್ರೈಂ ಎಸ್ಸೈ ... ಸುಷ್ಮಾ ಇನ್ನೂ 25ರ ವಯಸ್ಸಿನ ದಿಟ್ಟ ಹುಡುಗಿ. ...ಕಲ್ ಕೋರ್ಟಿಗೆ ಹೊಂದಿಕೊಂಡಂತೆ ಇದ್ದ ಪೊಲೀಸ್ ... ಗೃಹದ ತನ್ನ ಕೋಣೆಯಲ್ಲಿ ಕಳೆದ ನಾಲ್ಕು ತಿಂಗಳಿಂದ ...ಂಗಿಯಾಗಿ ವಾಸಿಸುತ್ತಿದ್ದಳು. ಆನೇಕಲ್‌ನಿಂದ ಕೇವಲ ...ಕಿ.ಮೀ. ದೂರದಲ್ಲಿದ್ದ ತನ್ನ ತಂದೆಯ ಮನೆಯಿಂದ ...ೀಗಿ ಬಂದು ಮಾಡಬಹುದಿತ್ತು. ...ಖೆಯೇ ಕೊಟ್ಟಿದ್ದ ಬೈಕ್ ಇತ್ತು. ಹಾಗಿದ್ದೂ ...ಕಲ್‌ನ ಪೊಲೀಸ್ ಕ್ವಾಟ್ರಸ್ಸಿನಲ್ಲಿ ಏಕಾಂಗಿ ...ಗಿ ಇರುತ್ತಿದ್ದ ಸುಷ್ಮಾಳನ್ನು ಅಲ್ಲಿನ ...ೀಸರು ಕೊನೆಯ ಬಾರಿ ನೋಡಿದ್ದು ...ಮವಾರ ರಾತ್ರಿಯೇ.


ಸುಷ್ಮಾ

...ಬೆಳಿಗ್ಗೆಯಾದರೂ ಸುಷ್ಮಾ ಠಾಣೆಗೆ ಬರದೇ ...ು ಮೊಬೈಲ್ ಕೂಡ ಸ್ವಿಚ್ ಆಫ್ ...ದ್ದನ್ನು ಗಮನಿಸಿದ ಪೊಲೀಸರು ಪೊಲೀಸ್ ...ಗೃಹಕ್ಕೆ ಬಂದು ನೋಡಿದರೆ ಬಾತ್‌ರೂಮಿ... ಹೆಣವಾಗಿ ಬಿದ್ದಿದ್ದಳು ಸುಷ್ಮಾ!

...ಪಕ್ಕದಲ್ಲೇ ಬಿದ್ದಿದ್ದ ಆಕೆಯ ಸರ್ವೀಸ್ ರಿವಾಲ್ವರ್, ... ಹೊಕ್ಕಿದ್ದ ಗುಂಡು, ಧಾರಾಕಾರವಾಗಿ ಸೋರುತ್ತಿದ್ದ ...ಮತ್ತು ಪಕ್ಕದಲ್ಲೇ ಆಕೆ ಬರೆದಿಟ್ಟಿದ್ದ ಡೆತ್‌ನೋಟ್; ...ುದು ಆತ್ಮಹತ್ಯೆಯೆಂದು ಒಂದೇ ನೋಟಕ್ಕೆ ಸಾರಿ ...ದ್ದವು. 'ನನ್ನ ಸಾವಿಗೆ ನಾನೇ ಕಾರಣ' ಎಂಬ ಒಂದೇ ...ನ ಆಕೆಯ ಹಸ್ತಾಕ್ಷರವಿದ್ದ ಮರಣಪತ್ರವೊಂದೇ ಇಡೀ ...ಂತದ ನಿಗೂಢತೆಗೆ ಸಾಕ್ಷಿಯಂತಿತ್ತು.

...ಸುಷ್ಮಾ ಆನೇಕಲ್ ಕಂಡ ಜನಾನುರಾಗಿ ಪೊಲೀಸ್ ...ಾರಿಣಿ. ಆಕ್ಷನ್ ಸಿನಿಮಾಗಳಲ್ಲಷ್ಟೇ ಕಾಣಬಹುದಾಗಿದ್ದ ...ಸಿ ಲೇಡಿ ಇನ್ಸ್‌ಪೆಕ್ಟರ್ ಪಾತ್ರವನ್ನೇ ಸುಷ್ಮಾ ...ಲುತ್ತಿದ್ದಳು. ನಡುರಾತ್ರಿಯಲ್ಲೂ ತನ್ನ ಬೈಕ್ ಎತ್ತಿಕೊಂಡು ...ಯೊಬ್ಬನನ್ನು ಕೂರಿಸಿಕೊಂಡಿದ್ದೇ ಬೀಟ್‌ಗೆ ಹೊರಟು ...ತ್ತಿದ್ದಳು. ಹೆಣ್ಣುಮಕ್ಕಳ ಕಾಲೇಜಿನ ಸುತ್ತ ಅಡ್ಡೆ ಹಾಕುತ್ತಿದ್ದ ...ರನ್ನು ಅಟ್ಟಾಡಿಸಿ ಬಡಿದಿದ್ದಳು. ಠಾಣೆಗೆ ಬರುವ ...ಹೆಣ್ಣುಮಕ್ಕಳನ್ನೂ ಕೂರಿಸಿ ಕಷ್ಟ ಕೇಳುತ್ತಿದ್ದಳು.

...ಮನುಷ್ಯತ್ವ ಮತ್ತು ಕರ್ತವ್ಯನಿಷ್ಠೆಯಲ್ಲಿ ಸುಷ್ಮಾ ಬಗ್ಗೆ ...ು ಮಾತಿಲ್ಲ. ಆದರೆ ಕ್ರೋಢೀ ಆಕೆಯಲ್ಲೇ ಮನೆ ...ತ್ತು. ಅದು ಆಕೆಯ ಮದುವೆಯ ಸಂಘರ್ಷ. ...ಲತಃ ದಾವಣಗೆರೆಯ ಹೊನ್ನಾಳಿಯ ರಾಮಕೃಷ್ಣಪ್ಪ ... ಹೇಮಾವತಿ ಎಂಬ ಲಂಬಾಣಿ ದಂಪತಿಗಳ ಮಗಳಾದ ...ಗೂ ಸದ್ಯ ದೇವನಹಳ್ಳಿಯಲ್ಲಿ ಟ್ರಾಫಿಕ್ ಎಸ್‌ಐ ...ುವ ಎ.ವಿ. ಕುಮಾರ್‌ಗೂ ಯಾವತ್ತೋ ಪ್ರೀತಿ ...ತ್ತು.

2006-07 ರ ಬ್ಯಾಚನಲ್ಲಿ ಪೊಲೀಸ್ ಎಸ್‌ಐ ಹುದ್ದೆಗೆ ...ಯಾದ ಸುಷ್ಮಾ ತರಬೇತಿಗೆ ಸೇರಿದ್ದು ಮೈಸೂರಿನ ...ೀಸ್ ಅಕಾಡೆಮಿಗೆ. ಕುಮಾರ್ ಅದೇ ಬ್ಯಾಚಿನ ...ಇನ್ಸ್‌ಪೆಕ್ಟರ್. ತರಬೇತಿಯ ಸಂದರ್ಭದಲ್ಲೇ ಇಬ್ಬರಿಗೂ ...ನ ಬೆಳೆದು ಕ್ರಮೇಣ ಅದು ಪ್ರೀತಿಯಾಗಿ ಮದುವೆಯ ... ಬಂದು ನಿಂತಿದೆ.

...ಈ ಮಧ್ಯೆ ತರಬೇತಿ ಮುಗಿಸಿ ಶಿವಮೊಗ್ಗದ ತುಂಗಾ ...ೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆಗಳಲ್ಲಿ ...ೃಷನರಿ ಆರಂಭಿಸಿದ ಸುಷ್ಮಾ ಇಲ್ಲಿಗೆ ನಾಲ್ಕು ತಿಂಗಳ ...ಷ್ಟೇ ಆನೇಕಲ್ಲಿಗೆ ಬಂದಿದ್ದಾಳೆ. ಹೀಗೆ ಆನೇಕಲ್ಲಿಗೆ ತನ್ನ ವರ್ಗಾವಣೆ ಮಾಡಿಸಿಕೊಂಡ ಸುಷ್ಮಾಳ ನಿರ್ಧಾರಕ್ಕಿದ್ದ ಏಕೈಕ ಕಾರಣವೆಂದರೆ ಪಕ್ಕದ ದೇವನಹಳ್ಳಿಯಲ್ಲಿ ಕುಮಾರ್ ಟ್ರಾಫಿಕ್ ಎಸ್.ಐ. ಆಗಿದ್ದ. ವಾರಕ್ಕೆ ಕಮ್ಮಿಯೆಂದರೂ ಮುರ್ನಾಲ್ಕು ಬಾರಿ ಕುಮಾರ್-ಸುಷ್ಮಾ ಸೇರುತ್ತಿದ್ದರು. ಇದು ಹೇಗೋ ಹೆತ್ತವರ ಕಿವಿ ಮುಟ್ಟಿದೆ.

ಸುಷ್ಮಾಳ ತಂದೆ ರಾಮಕೃಷ್ಣಪ್ಪ ಕೆಎಸ್ಸಾರ್ಪಿಯ ಸಬ್‌ಇನ್ಸ್‌ಪೆಕ್ಟರ್. ಕೋರಮಂಗಲದಲ್ಲೇ ಇಲಾಖೆಯ ವಸತಿ ಗೃಹವಿತ್ತು. ಸುಷ್ಮಾ ತನ್ನ ತಂದೆಯ ಮನೆಯಿಂದ ಬಂದುಹೋಗಿ ಮಾಡದೇ ಆನೇಕಲ್‌ನ ಪೊಲೀಸ್ ಕ್ವಾಟ್ರಸ್ಸಿನಲ್ಲೇ ಏಕಾಂಗಿಯಾಗಿದ್ದುದಕ್ಕೆ ಮುಖ್ಯ ಕಾರಣ ಹೆತ್ತವರು ಪದೇಪದೇ ಮಾಡುತ್ತಿದ್ದ ಮದುವೆಯ ಒತ್ತಾಯ. ತಮ್ಮದೇ ಸಮೀಪದ ಸಂಬಂಧದ ಯಾರೋ ಹುಡುಗನನ್ನು ನೋಡಿ ಆತನನ್ನೇ ಮದುವೆಯಾಗುವಂತೆ ತಂದೆತಾಯಿ ಒತ್ತಾಯಿಸುತ್ತಲೇ ಇದ್ದರು. ಸದ್ಯ ತನಗೆ ಮದುವೆ ಬೇಡವೆಂದೇ ಕಾಲ ನೂಕುತ್ತಾ ಬಂದ ಸುಷ್ಮಾ ಬಹುಶಃ ತನ್ನ ಹೆತ್ತವರನ್ನು ಹೇಗಾದರೂ ಮಾಡಿ ಒಪ್ಪಿಸುತ್ತಿದ್ದಳೋ ಏನೋ.

ಆದರೆ ಆಘಾತವಾಗಿದ್ದು ಕುಮಾರನ ವರ್ತನೆಯಿಂದ. ಬೆಂಗಳೂರು ಪಕ್ಕದ ತಾತುಗುಣಿಯ ಒಕ್ಕಲಿಗರ ಹುಡುಗ ಕುಮಾರ್ ಮೊದಮೊದಲು ತಾನೇ ಮೇಲೆ ಬಿದ್ದು ಸುಷ್ಮಾಳನ್ನು ಪ್ರೀತಿಸಿದ್ದ. ಕೇವಲ ಪ್ರೀತಿಯಷ್ಟೇ ಅಲ್ಲದೆ ಅದನ್ನು ಮೀರಿದ ಸಂಬಂಧವೊಂದು ಅವರಿಬ್ಬರ ನಡುವಿತ್ತು. ಕಳೆದೆರಡು ವರ್ಷಗಳಿಂದ ಸುಷ್ಮಾಳನ್ನು ಅಕ್ಷರಶಃ ತನ್ನ ಪತ್ನಿಯಂತೆ ನಡೆಸಿಕೊಂಡಿದ್ದ ಕುಮಾರನಿಗೆ ಬಹುಶಃ ಬರುಬರುತ್ತ ಸುಷ್ಮಾ ಬೋರ್ ಎನಿಸಿರಬೇಕು. ಆತ ಹೊಸ ಸಂಬಂಧವೊಂದಕ್ಕೆ ಕೈ ಹಾಕಿದ್ದನಾ ಅಥವಾ ಸುಷ್ಮಾಗೆ ಕೈಕೊಟ್ಟು ತನ್ನದೇ ಜಾತಿಯ ಮತ್ತೊಬ್ಬ ಯುವತಿಯ ಜೊತೆ ಮದುವೆಗೆ ಮುಂದಾಗಿದ್ದನಾ ಗೊತ್ತಿಲ್ಲ.

ಬರುಬರುತ್ತ ಕುಮಾರ್ ಸುಷ್ಮಾಳನ್ನು ಸಂಪರ್ಕಿಸುವುದನ್ನೇ ಬಿಟ್ಟುಬಿಟ್ಟ. ಕೇಳಿದರೆ ತನ್ನ ತಂದೆತಾಯಿ ಮದುವೆಗೆ ಒಪ್ಪುತ್ತಿಲ್ಲ ವಿಷಾ ಕುಡಿತೀವಿ ಅಂತ ಬ್ಲ್ಯಾಕ್‌ಮೇಲ್ ಮಾಡ್ತಿದ್ದಾರೆ ಎಂದು ದಿನಕ್ಕೊಂದು ಸಬೂಬು ಹೇಳುತ್ತಿದ್ದ. ಇಲ್ಲಿಗೆ ತಿಂಗಳ ಹಿಂದಷ್ಟೇ ಸುಷ್ಮಾ ಮತ್ತು ಕುಮಾರ್ ನಡುವಿನ ಜಗಳ ತಾರಕಕ್ಕೆ ಹೋಗಿ ಅದು ಇಬ್ಬರ ಮನೆಯವರ ಮಧ್ಯೆ ಜಗಳದ ತನಕ ಮುಟ್ಟಿದೆ.

ಮೇಲುನೋಟಕ್ಕೆ ತನ್ನ ತಂದೆತಾಯಿ ಮದುವೆಗೆ ಒಪ್ಪುತ್ತಿಲ್ಲ ಎಂದಷ್ಟೇ ಸಬೂಬು ಹೇಳುತ್ತಿದ್ದ ಎಸ್‌ಐ ಕುಮಾರ್ ಚಕ್ಕಂದಕ್ಕಷ್ಟೇ ಸುಷ್ಮಾಳನ್ನು ಬಳಸಿಕೊಂಡವನು. ತೀರ ಸಂಸಾರದ ವಿಷಯದಲ್ಲಿ ಅಪ್ಪಟ ಸ್ವಾರ್ಥಿಯಾಗಿದ್ದಾನೆ. ಆತನಿಗೆ ಬೇಕಿದ್ದದ್ದು ಮನೆ, ಮುಸುರೆಗಷ್ಟೇ ಸೀಮಿತವಾಗಿರುವ ಗೃಹಿಣಿ ಪತ್ನಿ. ಹೊತ್ತಲ್ಲದ ಹೊತ್ತಲ್ಲೂ ಪೊಲೀಸ್ ಡ್ಯೂಟಿಯಲ್ಲಿ ಹೆಣಗಾಡುವ ತನ್ನದೇ ಸರಿಸಮಾನ ರ್‍ಯಾಂಕಿನ ಪತ್ನಿಯನ್ನು ಕಟ್ಟಿಕೊಂಡು ಪೇಚಾಡುವುದಕ್ಕಿಂತ ಸದಾ ಮನೆಯಲ್ಲಿದ್ದು ಜೀತ ಮಾಡುವ ಪತ್ನಿಯೇ ಲೇಸಲ್ಲವೇ?

ಪ್ರಿಯಕರ ಎಸ್‌ಐ ಕುಮಾರನ ಇಂಥ ನಿರ್ಧಾರ ಕಂಡಿದ್ದೇ ಸುಷ್ಮಾ ಕಂಗಾಲಾಗಿದ್ದಾಳೆ. ಬಹುಶಃ ಮದುವೆಯಾಗಿ ಆಕೆ ಪೊಲೀಸ್ ಕೆಲಸವನ್ನೇ ಬಿಡುವುದಕ್ಕೂ ಅಣಿಯಾಗಿದ್ದಳೋ ಏನೋ. ಆದರೆ ಕುಮಾರ್ ಯಾವತ್ತೋ ತನ್ನ ನಿರ್ಧಾರ ಬದಲಿಸಿಬಿಟ್ಟಿದ್ದನಲ್ಲ. ಎಷ್ಟೆಂದರೂ ಹೆಣ್ಣು, ಪೊಲೀಸ್ ಅಧಿಕಾರಿಣಿಯಾಗಿ ಖಾಕಿ ಧರಿಸಿದ್ದರೂ ಕೂಡ ಆಕೆಯೊಳಗಿದ್ದ ಹೆಣ್ತನ ಅಳಿಯುವುದುಂಟೆ? ಪ್ರಿಯಕರನೇ ಕೈಕೊಟ್ಟ ಮೇಲೆ ಯಾವ ಎಸ್‌ಐ ಹುದ್ದೆ? ದಿಕ್ಕುತೋಚದೆ ಪೆದ್ದು ಯುವತಿಯಂತೆ ತನ್ನ ಸರ್ವೀಸ್ ರಿವಾಲ್ವರಿನಿಂದಲೇ ಆತ್ಮಹತ್ಯೆಗೆ ಶರಣಾಗಿದ್ದಾಳೆ ಸುಷ್ಮಾ.

ತನ್ನನ್ನು ವಂಚಿಸಿದವನ ವಿರುದ್ಧ ಹೋರಾಡಬಹುದಿತ್ತು. ಮೇಲಧಿಕಾರಿಗಳೇ ನಿಂತು ಮದುವೆ ಮಾಡಿಸುತ್ತಿದ್ದರು. ಪೊಲೀಸ್ ಗತ್ತು, ಖಾಕಿಯ ತಾಕತ್ತು ಯಾವುದೂ ಆಕೆಯೊಳಗಿದ್ದ ಹೆಣ್ಣನ್ನು ನಿಯಂತ್ರಿಸಲಾಗಲೇ ಇಲ್ಲ.

ತನ್ನದೇ ಇಲಾಖೆಯ ದಕ್ಷ ಎಸ್‌ಐ ಒಬ್ಬಳ ಸಾವಿಗೆ ಕಾರಣರಾದವರನ್ನಾದರೂ ಪೊಲೀಸ್ ವ್ಯವಸ್ಥೆ ಶಿಕ್ಷಿಸದೇ ಬಿಡಬಾರದಲ್ಲವೇ? ಇದಕ್ಕೆ ಗ್ರಾಮಾಂತರ ಎಸ್.ಪಿ. ಮಹೇಶ್ ಮತ್ತು ಐಜಿ ಕಮಲ್ ಪಂತ್ ತಾನೇ ಉತ್ತರಿಸಬೇಕು.

● ರಾ. ಸೋಮನಾಥ್

ಗದಗಿನಲ್ಲಿ ನಡೆದದ್ದು ಬಂಡಾಯ ಸಾಹಿತ್ಯ ಸಮ್ಮೇಳನವಂತಲ್ಲಾ!

ಗದಗಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಬಿಜೆಪಿಗಳು ನಡೆಸಿದ ಸಾಹಿತ್ಯ ಸಮ್ಮೇಳನವಾಗುವುದರ ಬದಲು ಅಖಿಲ ಭಾರತ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನವಾಗಿ ವಿಜೃಂಭಿಸಿತೆಂದು ಬಂಡಾಯ ಸಾಹಿತಿಗಳು ಹೆಮ್ಮೆಯಿಂದ ಬೀಗುತ್ತಿದ್ದಾರಂತಲ್ಲಾ, ಇದಕ್ಕೆ ಕಾರಣ ಗೀತಾ ಬಂಡಾಯಗಾತಿ. ಈ ಯಮ್ಮನ ಆಯ್ಕೆಯಾದಾಗಲೇ ಸ್ತ್ರೀವಿರೋಧಿ ಚೆಡ್ಡಿಗಳು ಸಮ್ಮೇಳನದ ಬಗ್ಗೆ ಅರ್ಧ ಆಸಕ್ತಿ ಕಳೆದುಕೊಂಡವಂತಲ್ಲಾ, ಇನ್ನು ಹ್ಯಾಪಯ್ಯನಾದ ಸ್ತ್ರೀರಾಮುಲು-ಹ್ಯಾಪಯ್ಯ ಅಂದರೆ ಸದಾ ಹ್ಯಾಪು ಮೋರೆಯುಳ್ಳವನು ಎಂದರ್ಥವಂತೆ. ಕಡೆಗಳಿಗೆಯಲ್ಲಿ ತನ್ನ ಪಟಾಲಂನೊಂದಿಗೆ ಒಂದು ಮುತುವರ್ಜಿ ವಹಿಸಿದನಂತಲ್ಲಾ, ಅವನ ಹಿಂಬಾಲಕರಲ್ಲೂ ಅಂತಹ ಹೇಳಿಕೊಳ್ಳುವ ಚೆಡ್ಡಿಗಳಿರಲಿಲ್ಲವಂತಲ್ಲಾ, ಇನ್ನು ಈ ಹಾಳು ಸಾಯಿತಿಗಳು ಮೊದಲೇ ಬಾಯಿ ಬಡುಕರು ಎಂದು ಹೆದರಿದ ಎಡೂರಪ್ಪ ಉದ್ಘಾಟನೆಗೆ ಬರಲಿಲ್ಲವಂತಲ್ಲಾ, ಆದರೂ ಸಮಾರೋಪಕ್ಕೆ ಬಂದು ಗೀತಕ್ಕನಿಂದ ಸಮಾ ಇಕ್ಕಿಸಿಕೊಂಡನಂತಲ್ಲಾ, ಅದೂ ಕೂಡ ಬಂಡಾಯದ ಹೊಡೆತವಾಗಿತ್ತೆಂದು ಡಂಬಾಯಗಾರರು ಬಡಾಯಿ ಕೊಚ್ಚಿಕೊಳ್ಳುವುದರಲ್ಲಿ ನಿಜವೇ ಕಾಣಿಸುತ್ತಿದೆಯಲ್ಲಾ, ಥೂತ್ತೇರಿ!

* * * *

ಥೂತ್ತೇರಿ

ಗದಗಿನದ್ದು ಅಪ್ಪಟ ಬಂಡಾಯ ಸಾಹಿತ್ಯ ಸಮ್ಮೇಳನವಾಯ್ತು ಎಂಬುದಕ್ಕೆ ಮರಿ ಬಂಡಾಯಗಾರರು ಒದಗಿಸುವ ಪ್ರಬಲ ಸಾಕ್ಷಿಯೆಂದರೆ, "ಆ ಸಮ್ಮೇಳನದಲ್ಲಿ ಹುಟ್ಟು ಬಂಡಾಯಗಾರರಾದ ಕಡಿದಾಳು ಶಾಮಣ್ಣನವರು ಭಾಗವಹಿಸಿದ್ದೂ ಅಲ್ಲದೇ ವೇದಿಕೆಯಲ್ಲಿ ಭಾಷಣ ಮಾಡಿದ್ದು ಇದಕ್ಕೆ ಸಾಕ್ಷಿ. ಬಗಲಲ್ಲಿದ್ದ ಛತ್ರಿಯನ್ನೆ ಹರಿದು ಕಪ್ಪು ಬಾವುಟ ಮಾಡಿಕೊಂಡು ಮಂತ್ರಿಯಿರಲಿ, ಮುಖ್ಯಮಂತ್ರಿಯಿರಲಿ, ಅವರ ಮುಸುಡಿಗೆ ಬೀಸುವ ಶಾಮಣ್ಣ ಮತ್ತು ಬಂಡಾಯಗಾರರ ಮೂಲ ಪುರುಷನಂತೆ ಕಾಣುವ ಡಿ.ಎಸ್. ನಾಗಭೂಷಣ, ರಹಮತ್ ತರೀಕೆರೆ ಇವರೆಲ್ಲಾ ವೇದಿಕೆಯಲ್ಲಿದ್ದ ಸಮ್ಮೇಳನ ಬಂಡಾಯ ಸಾಹಿತ್ಯ ಸಮ್ಮೇಳನವೇ ಹೊರತು ಹಂಪನಾ ಮಾಡುತ್ತಿದ್ದಂತಹ ಸಾಹಿತ್ಯ ಸಮ್ಮೇಳನವಲ್ಲ. ಅದರಲ್ಲೂ ಈ ಸಮ್ಮೇಳನದ ಇನ್ನೊಂದು ಹೆಗ್ಗಳಿಕೆ ಏನೆಂದರೆ ಈ ಹಿಂದೆ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ಊಟ ಅಧ್ವಾನ. ಆದರೆ ಗದುಗಿನಲ್ಲಿ ಊಟಕ್ಕಾಗಿ ಯಾರೂ ಬಂಡಾಯವೇಳಲಿಲ್ಲ ಗೊತ್ತಾ ಎನ್ನುತ್ತಿವೆಯಲ್ಲಾ, ಥೂತ್ತೇರಿ!!

* * * *

ಇದಲ್ಲವೆ ತಮಾಷೆ! ವಿದ್ಯುತ್ ಖಾತೆಯನ್ನು ಅಧ್ವಾನ ಮಾಡಿ, ಸಿಕ್ಕಷ್ಟನ್ನು ಜುಬ್ಬದ ದೊಗಲೆ ಜೇಬಿಗೆ ತುಂಬಿಕೊಂಡು ಹೊರಟುಹೋದ ಈಶ್ವರಪ್ಪನೆಂಬ ಕತ್ತಲೆ ಪ್ರಿಯ ಹಾಲಿ ಸರಕಾರದ ಮಂತ್ರಿಗಳ ಕಾರ್ಯವೈಖರಿಯನ್ನು ಆಗಾಗ್ಗೆ ಪರಿಶೀಲಿಸುತ್ತಾನಂತಲ್ಲಾ, ಈಶ್ವರಪ್ಪನ ಇಂತಹ ಹೇಳಿಕೆಯಿಂದ ಹೊಟ್ಟೆ ಹಿಡಿದುಕೊಂಡು ನಕ್ಕ ಶರಣ ಮಂತ್ರಿಗಳು "ತನ್ನ ಖಾತೆಯಲ್ಲಿ ಬಿದ್ದ ಹೆಗ್ಗಣ ತೆಗೆದು ಹಾಕಲಾರದೆ ಓಡಿಹೋದ ಈತ, ನಮ್ಮ ಖಾತೆಯನ್ನು ಪರಿಶೀಲಿಸುತ್ತಾನಂತೆ!" ಎಂದು ಗಹಗಹಿಸುತ್ತಿರುವಾಗಲೇ ಅತ್ತ ಮುಖ್ಯಮಂತ್ರಿ ಎಡೂರಪ್ಪ ಸಮರ್ಪಕವಾಗಿ ವಿದ್ಯುತ್ ಪೂರೈಸಲೆಂದು ಎಂಟುನೂರು ಕೋಟಿ ಕೊಟ್ಟು ಕರೆಂಟು ಕೊಳ್ಳುತ್ತಾರಂತಲ್ಲಾ, ಇದನ್ನು ಕೇಳಿದ ಈಶ್ವರಪ್ಪ "ನನ್ನ ಬಳಿ ಖಾತೆಯಿದ್ದಾಗಲೇ 800 ಕೋಟಿ ಕೊಟ್ಟಿದ್ದರೆ ನಾನ್ಯಾಕೆ ಹಾಳು ಪಾರ್ಟಿ ಅಧ್ಯಕ್ಷನಾಗುತ್ತಿದ್ದೆ" ಎಂದು ತೀರಾ ಖಾಸಗಿ ಚೆಡ್ಡಿಗಳ ಬಳಿ ಗೊಣಗಿದರಂತಲ್ಲಾ ಥೂತ್ತೇರಿ!



* * * *

ಆರಂಭದಿಂದಲೂ ಗಣಿಧೂಳಿಗೆ ಬಿದ್ದು ಉಸಿರುಕಟ್ಟಿದಂತಾಡುತ್ತಿರುವ ಎಡೂರಪ್ಪನನ್ನು ಹಿಡಿದ ಗಣಿಧನಿಗಳು ಮತ್ತೆ ಹೊಸ ಜಾಗದಲ್ಲಿ ಹೊಸ ಗುದ್ದ ಅಗೆಯಲು ಪರವಾನಗಿ ಗಿಟ್ಟಿಸಿದ್ದಾರಂತಲ್ಲಾ, ಈ ಬಗ್ಗೆ ಎಡೂರಪ್ಪನನ್ನ ಪತ್ರಕರ್ತರು ಕೇಳಲಾಗಿ "ಗಣಿಗಾರಿಕೆ ಪರವಾನಗಿಯನ್ನು ಹಿಂದೂ ಕೊಟ್ಟಿಲ್ಲ, ಮುಂದೂ ಕೊಡಲ್ಲ" ಎಂದುಬಿಟ್ಟರಂತಲ್ಲಾ, ಗಲಿಬಿಲಿಯಾದ ಪತ್ರಕರ್ತರು "ಶಿವಮೊಗ್ಗ ಮೈಸೂರು ಕಡೆ ಗಣಿ ಅಗೆಯುವ ಪರವಾನಗಿ ಕೊಟ್ಟಿದ್ದೀರಲ್ಲ ಸಾರ್?" ಎಂದಾಗ "ಅದು ನಮ್ಮ ಜನಗಳಿಗೆ ಉದ್ಯೋಗ ಸೃಷ್ಟಿ ಮಾಡಲು ಕೊಡಲಾಗಿದೆ" ಎಂದರಂತಲ್ಲಾ, "ಸರಿ ಇನ್ನುಳಿದ ಕಡೆ ಕೊಟ್ಟ ಕಾರಣ ಹೇಳಿ" ಎನ್ನಲಾಗಿ, "ಅದೆಲ್ಲಾ ಉಕ್ಕಿನ ಕಾರ್ಖಾನೆ ತೆರೆಯಲು ಕೊಡಲಾಗಿದೆ. ಆದರೂ ಯಾವುದೇ ಕಾರಣಕ್ಕೂ ಗಣಿಗಾರಿಕೆಗೆ ಅವಕಾಶ ಕೊಡುವುದಿಲ್ಲ" ಎಂದು ಆವೇಶಭರಿತರಾಗಿ ಹೇಳಿದರಂತಲ್ಲಾ, ಥೂತ್ತೇರಿ!!

* * * *

ಬೀಗರೂಟಕ್ಕೆಂದು ಬಂದ ಬೀಗನಂತೆ ಕಾಣುವ ಕೋಲಾರದ ಮುನಿಯಪ್ಪ ಈ ಬಾರಿ ಮಮತಕ್ಕನ ಹಿಂದೆ ಬಿದ್ದು ಕರ್ನಾಟಕದಲ್ಲಿ ಮತ್ತೊಂದಿಷ್ಟು ರೈಲು ಓಡಾಡುವಂತೆ ಮಾಡಿದರಂತಲ್ಲಾ, ಇತ್ತ ಮಮತಕ್ಕ ಬಿಟ್ಟ ರೈಲು ನೋಡಿದ ಮಾಧ್ಯಮದ ಗಡವರು ಜಾಫರ್‌ಷರೀಫ್ ಮತ್ತು ಜಾರ್ಜ್‌ಫರ್ನಾಂಡಿಸರನ್ನೇ ಮರೆತು ಮನಸ್ಸಿಗೆ ಬಂದಂತೆ ಮಾತನಾಡುತ್ತಿರುವಾಗಲೇ ಅತ್ತ ಚೆಡ್ಡಿಗಳು "ಅಂತೂ ಎಡೂರಪ್ಪನವರ ಸತತ ಪ್ರಯತ್ನದಿಂದ ಕರ್ನಾಟಕಕ್ಕೆ ಸಾಕಷ್ಟು ರೈಲು ಬಂದು ನಿಂತಿದೆ. ಆದ್ದರಿಂದ ಸಂಘದ ಸಂಚಾಲಕರುಗಳು ನಾಡಿನ ಮೂಲೆಮೂಲೆಗೆ ಹೋಗಿ ಸಂಘವನ್ನು ಬಲಗೊಳಿಸಿಕೊಳ್ಳಬೇಕು" ಎಂದಿವೆಯಂತಲ್ಲಾ ಮಮತಕ್ಕನ ರೈಲ್ವೆ ಬಜೆಟ್ ನೋಡಿ ಇಡೀ ದೇಶವೇ ಕೊಂಡಾಡುತ್ತಿರುವಾಗ, ನಮ್ಮ ಲಲ್ಲುಲಾಲ್ ಎಂಬ ಬಫೂನ್ "ಇದೊಂದು ನಿರಾಶಾದಾಯಕ ಬಜೆಟ್" ಎಂದು ಬಡಬಡಿಸುತ್ತಿದ್ದಾನಂತಲ್ಲ, ಈ ಮಧ್ಯೆ ಮಾಜಿ ಪ್ರಧಾನಿಗಳಾದ ದೇವೇಗೌಡರು, "ಎಡೂರಪ್ಪ ಮೆಚ್ಚಿಕೊಂಡಿರುವ ಬಜೆಟ್ಟನ್ನು ಮೆಚ್ಚಿಕೊಳ್ಳಲು ಸಾಧ್ಯವೇ" ಎಂದು ಯೋಚಿಸುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

ರೈಲ್ವೆ ಬಜೆಟ್ ಏನೇಳುತ್ತದೆಂದು ರೈಲಾವಲಂಬಿಗಳು ಓಡಿಹೋಗಿ ಪ್ರಜಾವಾಣಿ ಕೊಂಡರೆ, ಪ್ರಜಾವಾಣಿಯ ಪತ್ರವಳಿಗಳು ಕ್ರಿಕೆಟ್ ಮ್ಯಾಚನ್ನೇ ಕವರ್ ಪೇಜ್‌ನಲ್ಲಿ ಮುದ್ರಿಸಿ ಬಸಾಕಿದ್ದವಂತಲ್ಲಾ, ವಾರದ ಹಿಂದೆಯೂ ಕೂಡ ನಕ್ಸಲರು ಅರೆಸೇನಾಪಡೆಯ ನಲವತ್ತು ಮಂದಿಯನ್ನು ಉಡಾಯಿಸಿದಾಗಲೂ ಮೂರು ಸೆಂಟಿಮೀಟರ್ ಸುದ್ದಿಮಾಡಿ ಇನ್ನುಳಿದಂತೆ ಸಚಿನ್, ಸೇವಾಗ್‌ರ ಸುದ್ದಿಯನ್ನೇ ವಾಚಾಮಗೋಚರವಾಗಿ ಹೊಗಳಿ ಬಸಾದಿದ್ದರಂತಲ್ಲಾ, ಈಗಲೂ ಅಷ್ಟೇ, ದೇಶದ ನರನಾಡಿಯಂತಿರುವ ರೈಲ್ವೇ ಹಳಿಗಳ ಸುದ್ದಿಯನ್ನು ಸೈಡಿಗೆ ತಳ್ಳಿದ ಪ್ರಜಾವಾಣಿ ಕ್ರಿಕೆಟ್ ಆಟಗಾರನನ್ನು ದೇವರಿಗೆ ಹೋಲಿಸಿದನ್ನು ನೋಡಿದ ಪ್ರಜಾವಾಣಿ ಓದುಗರು, "ಅರೇ ಆಟಕ್ಕೆಂದೇ ಪುಟಗಳಿರುವಾಗ ಮುಖಪುಟದಲ್ಲೇ ಆಟದ ಸುದ್ದಿ ಬರೆಯುವ ಈ ಪ್ರಜಾವಾಣಿಗೂ ಪ್ರಜಾಸಮೂಹಕ್ಕೂ ಏನು ಸಂಬಂಧ?" ಎಂದು ಚರ್ಚಿಸಿದವಂತಲ್ಲಾ, ಥೂತ್ತೇರಿ!!!

ಟ್ರಸ್ಟ್ ಸದಸ್ಯರ ಜಾತಕ

ವಿಜಯನಗರ ಪುನಃಶ್ಚೇತನ ಟ್ರಸ್ಟ್ ಎನ್ನುವ ಭೂಗಳ್ಳರ ಲೆಟರ್‌ಹೆಡ್ ಗುಂಪೊಂದು ಹಂಪಿಯ ಕನ್ನಡ ವಿವಿಗೆ ಸೇರಿರುವ 220 ಎಕರೆ ಜಮೀನು ಲಪಟಾಯಿಸಲು ತಯಾರಾಗಿದೆಯಷ್ಟೇ. ಈ ಟ್ರಸ್ಟಿನ ಮೆಂಬರ್‌ಗಳು ಯಾರ್‍ಯಾರೆಂಬುದನ್ನೊಮ್ಮೆ ನೋಡಬೇಕು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್. ನಾರಾಯಣಪ್ಪನ ಹೆಸರಿನಲ್ಲಿ ಹೊರಡಿಸಲಾಗಿರುವ ಸರ್ಕಾರಿ ಆದೇಶ ಸಂಖ್ಯೆ ಇಡಿ.03 ಕೆವಿವಿ 2010 ಬೆಂಗಳೂರು ದಿನಾಂಕ 22.1.2010 ರಲ್ಲಿ ಈ ಭೂಗಳ್ಳರ ಪಟ್ಟಿ ಇದೆಯಾದರೂ ಅವರ ಹಿನ್ನೆಲೆಗಳ ಬಗ್ಗೆ ಮಾಹಿತಿ ನೀಡಿಲ್ಲ. ವಿಜಯನಗರ ಪುನಃಶ್ಚೇತನವೇ ಈ ಟ್ರಸ್ಟಿನ ನೈಜ ಉದ್ದೇಶವಾಗಿದೆ ಎಂದು ಒಂದು ವೇಳೆ ನಾವು ನಂಬುವುದಾದರೂ ಅಂತಹ ಟ್ರಸ್ಟಿನೊಳಗೆ ಇತಿಹಾಸ ತಜ್ಞರು, ಸಂಶೋಧನಾಕಾರರು ಹಾಗೂ ಅಕಾಡೆಮಿಕ್ ಜನ ಇರಬೇಕು ತಾನೆ?

ಆದರೆ ಈ ಟ್ರಸ್ಟಿನ ಸದಸ್ಯರ ಬಗ್ಗೆ 'ಲಂಕೇಶ್' ತನಿಖೆ ಮಾಡಿದಾಗ ಸಿಕ್ಕ ವಿವರಗಳು ಹೀಗಿವೆ.

1. ಹಾಲಪ್ಪ ಆಚಾರ್- ಹಾಲಿ ಬಿಜೆಪಿ ಎಂಎಲ್‌ಸಿ, ಗಣಿಕಳ್ಳ ಜನಾರ್ದನ ರೆಡ್ಡಿಯ ಬಂಟ. ಕಲೆ-ಸಂಸ್ಕೃತಿ, ಇತಿಹಾಸದಲ್ಲಿ ಶುದ್ಧ ಅನಕ್ಷರಸ್ಥ

2. ಡಾ. ವಿಷ್ಣುಕಾಂತ್ ಎಚ್. ಚಟಪಲ್ಲಿ-ಅತ್ಯಂತ ಅನುಮಾನಾಸ್ಪದ ಹಿನ್ನೆಲೆಯ ವ್ಯಕ್ತಿ, ಬಿಜೆಪಿ ಸಂಸದ ಅನಂತ್‌ಕುಮಾರ್‌ರ ಪತ್ನಿ ತೇಜಸ್ವಿಯವರ ಅಮೃತ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ (ಬಿಡದಿ ಬಳಿ) ನಿರ್ದೇಶಕರಲ್ಲೊಬ್ಬ, ಹಾಲಿ ಕರ್ನಾಟಕ ವಕೇಶನಲ್ ಟ್ರೈನಿಂಗ್ ಕಾರ್ಪೊರೇಷನ್ನಿನ ನಿರ್ದೇಶಕ. ಜೊತೆಗೆ RSSನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಬೆಂಗಳೂರು-ಧಾರವಾಡ ಘಟಕದ ಕಾರ್ಯದರ್ಶಿ. ಇತ್ತೀಚೆಗೆ ನಡೆದ ಶ್ರೀಕೃಷ್ಣದೇವರಾಯ ಪಟ್ಟಾಭಿಷೇಕ ಕಾರ್ಯಕ್ರಮ ಸಮಿತಿಯ ಕಾರ್ಯದರ್ಶಿಯಾಗಿದ್ದ. ಓದಿರುವುದು ಇಂಜಿನಿಯರಿಂಗ್. ಹುಟ್ಟಾ ಚೆಡ್ಡಿ. ಕನ್ನಡ ಸಂಸ್ಕೃತಿ ಅಂದರೆ 'ಕೇಜಿಗೆಷ್ಟು ರೇಟು' ಎನ್ನುವಂತ ವಿಷಯತಜ್ಞ .


ಚಟಪಲ್ಲಿ


ನಾಗ

3. ಮೃತ್ಯುಂಜಯ ಜಿನಿಗಾ- ಹಾಲಿ ಬಿಜೆಪಿ ಎಂಎಲ್‌ಸಿ. ರೆಡ್ಡಿ ಬ್ರದರ್‍ಸ್ ಆಸ್ಥಾನ ವಿದೂಷಕ. ವಿದ್ಯೆ ನೈವೇದ್ಯೆ.

4. ವಿ. ನಾಗರಾಜ-ಆರ್‌ಎಸ್‌ಎಸ್‌ನ ಬೌದ್ಧಿಕ ಪ್ರಮುಖ. ಕರ್ನಾಟಕ-ಆಂಧ್ರದಲ್ಲಿ ಕಾರ್ಯಾಚರಣೆ. ಹಿಂದೆ ಇನ್ಶೂರೆನ್ಸ್ ಕಂಪೆನಿ ಕೆಲಸ. ಹಾಲಿ ಮಿಥಿಕ್ ಸೊಸೈಟಿಯ ಕಾರ್ಯದರ್ಶಿ. ಬ್ರಾಹ್ಮಣಶಾಹಿ ಇತಿಹಾಸ ಪ್ರತಿಪಾದಕ.

5. ಡಾ.ದೇವರ ಕೊಂಡಾರೆಡ್ಡಿ- RSS ಸಿದ್ಧಾಂತಿ. ಆವರೇಜ್ ವಿದ್ವಾಂಸ. ಟ್ರಸ್ಟ್ ಸದಸ್ಯತ್ವಕ್ಕೆ ಇದೇ ಅರ್ಹತೆ.

6. ಡಾ. ಎಂ. ಕೊಟ್ರೇಶ್-ಕನ್ನಡ ವಿ.ವಿಯ ಶಾಸನ ಶಾಸ್ತ್ರ ವಿಭಾಗ ಮುಖ್ಯಸ್ಥ RSS ಸೇವಕ ಚಾಲಕ.

7. ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್- ಅದಮ್ಯ ಚೇತನ ಟ್ರಸ್ಟ್, ಅಮೃತ್ ಇಂಜಿನಿಯರಿಂಗ್ ಕಾಲೇಜ್ ಇತ್ಯಾದಿ ಒಡತಿ. ಇತಿಹಾಸದ ಬಗ್ಗೆ ಎಷ್ಟು ಗೊತ್ತಿದೆಯೋ ಗೊತ್ತಿಲ್ಲ, ಆದರೆ RSS ಮಾತ್ರ ಚೆನ್ನಾಗಿ ಗೊತ್ತಿದೆ.

8. ಎನ್. ಮಾಲತೀಶ್, ಬೆಂಗಳೂರು- ಸಚಿವ ಅರವಿಂದ ಲಿಂಬಾವಳಿಯ ಆಪ್ತ ಸಹಾಯಕ. ಪೂರ್ತಿ ಹೆಸರು ಮಾಲತೀಶ ಭಟ್ಟ. ಬೆಂಗಳೂರು ನಿವಾಸಿಯಾದರೂ ಬಳ್ಳಾರಿಯ ಕಪಗಲ್ ರಸ್ತೆ ನಿವಾಸಿ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದಾನೆ. ವರ್ಗಾದಂಧೆ, ರೋಲ್‌ಕಾಲ್‌ನ ಇತಿಹಾಸ ಇದೆ. ಲಿಂಬಾವಳಿಯ ಎತ್ತುವಳಿ ವಿಭಾಗದ ಮುಖ್ಯಸ್ಥ.


ಲಲಿತಾರಾಣಿ

9. ಲಲಿತಾರಾಣಿ, ಕೊಪ್ಪಳ-ವಿಜಯನಗರ ಸಾಮ್ರಾಜ್ಯ ಕಾಲದ ಪಾಳೆಯಗಾರರ ಪರಂಪರೆಯ ತುಂಡು. ಪುರಾತನ ಪಳೆಯುಳಿಕೆ. ಇತಿಹಾಸ ಅಂದರೆ ರಾಜ-ರಾಣಿಯರ ಕತೆ ಎಂದು ನಂಬಿರುವ ಅನಕ್ಷರಸ್ಥೆ.

10. ಶ್ರೀಪಾದ ಮಲ್ಲಿಗೆ, ಹೊಸಪೇಟೆ- ಮೂಲತಃ ಹೋಟೆಲ್ ಉದ್ಯಮಿ. ಈ ಟ್ರಸ್ಟಿನ ಬ್ಯುಸಿನೆಸ್ ಆಯಾಮ ಈತ.


ಸಂಜೀವ

11. ಕೆ.ಬಿ. ಶ್ರೀನಿವಾಸ, ಹೊಸಪೇಟೆ- ವ್ಯಾಪಾರಿ, ವ್ಯಕ್ತಿತ್ವರಹಿತ ವ್ಯಕ್ತಿ.

12. ಸಂಜೀವ ಬೆಟಗೇರಿ-ಹುಬ್ಬಳ್ಳಿಯಾಂವ... ಹಿಂದೆ ಪಿಗ್ಮಿ ಕಲೆಕ್ಟರ್ ಆಗಿದ್ದ. ಈಗ ರೆಡ್ಡಿಗಳ ಸೇವಾನಿರತ, ವರ್ಗಾದಂಧೆ ಪ್ರವೀಣ. ಬರಹಗಾರ ಎಂದು ಸುಳ್ಳು ಹೇಳಿಕೊಂಡಿದ್ದಾನೆ.

-ಇನ್ನುಳಿದಂತೆ ವಿಜಯನಗರ, ಗಂಗಾವತಿ, ಕಂಪ್ಲಿ ವಿಧಾನಸಭಾ ಸದಸ್ಯರು ಹಾಗೂ ಟೂರಿಸಂ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳೆಲ್ಲಾ ಈ ಭೂಗಳ್ಳರ ಟ್ರಸ್ಟಿನ ಮೆಂಬರ್‌ಗಳಾಗಿದ್ದಾರೆ. ಇವರೆಂಥ ಮಾನಗೇಡಿಗಳೆಂದರೆ ಇರುವ 18 ಮಂದಿ ಟ್ರಸ್ಟ್ ಮೆಂಬರ್‌ಗಳ ಪೈಕಿ ಒಬ್ಬರಾದರೂ ಇತಿಹಾಸ ತಜ್ಞರಿಲ್ಲ. ಬಳ್ಳಾರಿಯವರೇ ಆಗಿರುವ ಎಸ್. ಶೆಟ್ಟರ್, ಬಸವರಾಜ ಮಲಶೆಟ್ಟಿಯವರಂತಹ ವಿದ್ವಾಂಸರೂ ಇಲ್ಲ, ಕನಿಷ್ಠ ಭಾಷಣವೀರ ಕುಂ. ವೀರಭದ್ರಪ್ಪನವರೂ ಈ ಟ್ರಸ್ಟಿನವರ ನಜರಿಗೆ ಬಿದ್ದಿಲ್ಲ. ಈ ವಿಚಾರ ಯಾಕೆ ಹೇಳಬೇಕಾಯಿತೆಂದರೆ ತೋರಿಕೆಗಾದರೂ ಒಂದಿಬ್ಬರು ತಜ್ಞರನ್ನು ಸೇರಿಸಿಕೊಳ್ಳದೆ ಟ್ರಸ್ಟ್ ಅಸ್ತಿತ್ವಕ್ಕೆ ತಂದಿದ್ದಾರೆಂದರೆ ಅದಿನ್ನೆಂಥ ವಂಚನೆ ಇರಬೇಕು ಯೋಚಿಸಿ.

ಇದಿಷ್ಟೇ ಅಲ್ಲ, ಈ ಟ್ರಸ್ಟಿಗೆ ಒಂದು ಬೈಲಾ ಇಲ್ಲ. ಅಧ್ಯಕ್ಷ ಯಾವನು ಎಂಬುದೂ ಗೊತ್ತಿಲ್ಲ. ಅಧ್ಯಕ್ಷನೆಂಬುದು ಇಲ್ಲವೇ ಇಲ್ಲ.

ಹೀಗೆ ರಾತ್ರಿ ಕಂಡ ಬಾವಿಗೆ ಹಗಲಲ್ಲೇ ಕನ್ನಡ ವಿವಿಯನ್ನು ತೆಗೆದುಕೊಂಡು ಹೋಗಿ ಕೆಡವುತ್ತಿರುವ ವಿಸಿ ಮುರಿಗೆಪ್ಪ ಅದಿನ್ನೆಂಥ ಅವಿವೇಕ ಇರಬಹುದು.



ಹಂಪಿ ಕನ್ನಡ ವಿವಿಗೆ ಕಳ್ಳರ ಕೈ

ವರ್ಗಾದಂಧೆ, ಗಣಿ ಕಳ್ಳತನ, ರಿಯಲ್ ಎಸ್ಟೇಟ್ ಡೀಲ್‌ಗಳನ್ನು ಮುಗಿಸಿ ಸರ್ಕಾರಿ ಖಜಾನೆಗೇ ಕನ್ನ ಹಾಕಿ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿರುವ ಯಡಿಯೂರಪ್ಪ ಹಾಗೂ ನಲವತ್ತು ಕಳ್ಳರ ಗ್ಯಾಂಗ್ ಈಗ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೇಲೆ ತಮ್ಮ ಕೊಳಕು ಕೈಗಳನ್ನು ಚಾಚುತ್ತಿದ್ದಾರೆ.

● ಪಾರ್ವತೀಶ


ಪಾಳೇಗಾರ ರೆಡ್ಡಿ

ಕರ್ನಾಟಕದ ಹೆಮ್ಮೆಯ ವಿದ್ಯಾಕೇಂದ್ರ ಹಾಗೂ ಸಂಶೋಧನಾ ತಾಣವಾಗಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುತ್ತಿಗೆ ಹಿಸುಕುವ ದುಷ್ಟ ಪ್ರಯತ್ನವೊಂದಕ್ಕೆ ಬಿಜೆಪಿಗಳು ಕೈಹಾಕಿದ್ದಾರೆ. ವಿವಿಗೆ ಸೇರಿದ 80 ಎಕರೆ ಜಾಗವನ್ನು ಬಿಜೆಪಿ ಭೂಗಳ್ಳರೇ ಸೇರಿ ರಚಿಸಿಕೊಂಡಿರುವ ವಿಜಯನಗರ ಪುನಶ್ಚೇತನ ಪ್ರತಿಷ್ಠಾನ ಎಂಬ ಖಾಸಗಿ ಟ್ರಸ್ಟಿಗೆ ಪರಭಾರೆ ಮಾಡುವ ಸಂಚು ಅದು. ಮೊದಲ ಕಂತಾಗಿ ಈಗ 80 ಎಕರೆ ಧಾರೆ ಎರೆದುಕೊಟ್ಟು ನಂತರ ಇನ್ನೂ ನೂರಾ ನಲವತ್ತು ಎಕರೆ ಅಂದರೆ ಒಟ್ಟಾರೆ 220 ಎಕರೆ ಜಾಗವನ್ನು ಕನ್ನಡ ವಿವಿಯಿಂದ ಕಸಿಯುವ ಪಿತೂರಿಯೊಂದು ಜಾರಿಗೆ ಬರುತ್ತಿದೆ. ಪ್ರಧಾನವಾಗಿ RSS ಖೂಳರು, ಬಿಜೆಪಿ ನಾಯಕರಾದ ಯಡಿಯೂರಪ್ಪ, ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಹಾಗೂ ಬಳ್ಳಾರಿಯ ದುಷ್ಟ ಪಾಳೇಗಾರರರಾದ ರೆಡ್ಡಿ ಬ್ರದರ್ಸ್ ಈ ಭೂಕಬಳಿಕೆಯ ಫಲಾನುಭವಿಗಳಾಗಿದ್ದಾರೆ.





ವರ್ಗಾದಂಧೆ, ಗಣಿ ಕಳ್ಳತನ, ರಿಯಲ್ ಎಸ್ಟೇಟ್ ಡೀಲ್‌ಗಳನ್ನು ಮುಗಿಸಿ ಸರ್ಕಾರಿ ಖಜಾನೆಗೇ ಕನ್ನ ಹಾಕಿ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿರುವ ಯಡಿಯೂರಪ್ಪ ಹಾಗೂ ನಲವತ್ತು ಕಳ್ಳರ ಗ್ಯಾಂಗ್ ಈಗ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಮೇಲೆ ತಮ್ಮ ಕೊಳಕು ಕೈಗಳನ್ನು ಚಾಚುತ್ತಿದ್ದಾರೆ.


ಇದು ಕೇವಲ ವಿವಿಗೆ ಸೇರಿರುವ ನೂರಿನ್ನೂರು ಎಕರೆ ಭೂಮಿಯ ಪರಭಾರೆ ವಿಚಾರ ಮಾತ್ರವಲ್ಲ, ಜನಪರ ಸಂಸ್ಕೃತಿ, ಕಲೆ, ಇತಿಹಾಸಗಳ ಪರಂಪರೆಯನ್ನು ಶೋಧಿಸುವ, ಪುನರ್ ನಿರ್ಮಿಸುವ ಮಹತ್ವದ ಕೆಲಸ ಮಾಡುತ್ತಿರುವ ಕನ್ನಡ ವಿವಿಯ ಅಂಗಳದಲ್ಲೇ ಕೋಮುವಾದಿ ಗುಂಡಿ ಬಗೆದು ಎಲ್ಲವನ್ನೂ ಹಾಳು ಗೆಡುವುವ ಹುನ್ನಾರವೂ ಆಗಿದೆ. ಜೊತೆಗೆ ರಿಯಲ್ ಎಸ್ಟೇಟ್ ಲೋಭವೂ ಇದರಲ್ಲಿದೆ.

1991 ರಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದ ಹಂಪೆಯ ಕನ್ನಡ ವಿವಿಗೆ ಇಂತಾ ಮಾರಣಾಂತಿಕ ಆಪತ್ತು ಬಂದಿರಲಿಲ್ಲ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಂದಾಜು ಏಳು ನೂರು ಎಕರೆಯಷ್ಟು ಜಾಗವಿದೆ. ಅಗತ್ಯವಿರುವೆಡೆ ಕಟ್ಟಡಗಳನ್ನು ನಿರ್ಮಿಸಿ ಉಳಿದೆಡೆ ಗಿಡಮರಗಳನ್ನು ಬೆಳೆಸಲಾಗಿದೆ. ಯುಜಿಸಿ ಹಾಗೂ ಸರ್ಕಾರದಿಂದ ಬರುವ ಅನುದಾನವನ್ನು ಜತನದಿಂದ ಬಳಸುತ್ತಾ ಇಲ್ಲಿ ಕನ್ನಡ ಕಟ್ಟುವ ಕೆಲಸ ನಡೆಯುತ್ತಿದೆ. ಕರ್ನಾಟಕದ ಮೂಲೆಮೂಲೆಗಳಿಂದ ನೂರಾರು ವಿದ್ವಾಂಸರು ಇಲ್ಲಿಗೆ ಬಂದು ಕಳೆದ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರ ಕನಸೂ-ಕನವರಿಕೆಯಾಗಿರುವ ಇಂತಹ ಕನ್ನಡ ವಿವಿಯೇ ಈಗ ಆಪತ್ತಿಗೆ ಸಿಲುಕಿದೆ.

ಈ ವಿಜಯನಗರ ಪುನಶ್ಚೇತನ ಪ್ರತಿಷ್ಠಾನವೆಂಬ ಡೋಂಗಿ ಸಂಸ್ಥೆ ಯಾವ ಕಾರಣಕ್ಕೆ, ಯಾವಾಗ, ಯಾರ ತಲೆಯಲ್ಲಿ ಚಿಗುರೊಡೆಯಿತೆಂಬುದೇ ಒಂದು ಕತೆ.

ಅಡ್ವಾಣಿಯೇ ಕಲ್ಲು ಹಾಕಿದ

ವಿಜಯನಗರದ ಸಾಮ್ರಾಜ್ಯ ಸ್ಥಾಪನೆ, ಕೃಷ್ಣದೇವರಾಯನ ಆಳ್ವಿಕೆ ಹಾಗೂ 1565 ರ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಪತನವಾದದ್ದನ್ನೆಲ್ಲವನ್ನೂ ಮುಸ್ಲಿಮರ ವಿರುದ್ಧದ ಪ್ರಚಾರ ಕಾರ್ಯಕ್ಕೆ ಸಂಘ ಪರಿವಾರಿಗಳು ಮೊದಲಿನಿಂದಲೂ ಬಳಸುತ್ತಿದ್ದಾರೆ. ಈ ನೀಚರ ಗದ್ದಲದಲ್ಲಿ ರಾಜನ ವಿರುದ್ಧ ನಡೆದ ರೈತ ದಂಗೆಗಳು, ವಿಜಯನಗರ ಅರಸರಿಂದಲೇ ಹತರಾದ ಹಿಂದೂ ರಾಜರುಗಳ ವಿಚಾರವೆಲ್ಲ ನಗಣ್ಯವಾಗಿ ಬಿದ್ದಿದೆ. ಒಟ್ಟಾರೆ ವಿಜಯನಗರ ಎಂಬುದೇ ಒಂದು ಹಿಂದೂ-ಮುಸ್ಲಿಂ ಸಂಘರ್ಷದ ಕತೆ ಎಂಬಂತೆ ಬಿಂಬಿಸುವ ವಕ್ರ ಪ್ರಯತ್ನ ನಡೆಯುತ್ತಲೇ ಇದೆ. ಹಾಗಾಗಿ ಬಿಜೆಪಿ-



ಪರಭಾರೆಯ ಸರ್ಕಾರಿ ಆದೇಶ...

'ಎಸ್‌ನವರಿಗೆ ಕೃಷ್ಣದೇವರಾಯನನ್ನು ಹೊತ್ತು ಮೆರೆಸುವುದೆಂದರೆ ಬಹಳ ಪ್ರಕ್ರಿಯೆಯ ಭಾಗವಾಗಿಯೇ ಕಳೆದ ಜನವರಿ ತಿಂಗಳಲ್ಲಿ ಕೃಷ್ಣದೇವರಾಯ ಷೇಕದ 500ನೇ ವರ್ಷಾಚರಣೆಯ ಅದ್ದೂರಿ ಕಾರ್ಯಕ್ರಮ ಯಿತು. ಜನಾರ್ದನ ರೆಡ್ಡಿಯೇ ಇದರ ಮುಂಚೂಣಿಯಲ್ಲಿದ್ದ. ಗೂ ರಹಸ್ಯವಾಗಿದ್ದ 'ವಿಜಯನಗರ ಪುನಶ್ಚೇತನಾ ಟ್ರಸ್ಟ್' ವಿಚಾರ 28 ರಂದು ಬೆಳಕಿಗೆ ಬಂತು. ಬಿಜೆಪಿ ನಾಯಕ ಎಲ್. ಕೆ. ಅಡ್ವಾಣಿ ಬಂದವನೆ ಈ ಟ್ರಸ್ಟಿನ ಶಿಲಾನ್ಯಾಸ ಮಾಡಿ ಹೋದ. ವಿವಿಯ ತಾರದೆ, ಯಾರ ಅನುಮತಿಯನ್ನು ಪಡೆಯದೆ ಕನ್ನಡ ವಿವಿಗೆ ಸೇರಿದ್ದ ಹೀಗೆ RSSನವರ ಟ್ರಸ್ಟ್ ಕನ್ನ ಕೊರೆದಿತ್ತು. ಅವತ್ತಿನ ಸಭೆಯಲ್ಲಿ ಆಫ್ ಲೀವಿಂಗ್‌ನ ವ್ಯೆಯಾರಿ ಗುರು ರವಿಶಂಕರ, RSS ಎಲಿಮೆಂಟು ವಿ. ನಾಗರಾಜ, ವಿಷ್ಣುಕಾಂತ ಚಟಪಲ್ಲಿ, ಅರವಿಂದ ಲಿಂಬಾವಳಿ ದವರಿದ್ದರು. ಸಾಮಾನ್ಯ ಜನ ಹಾಗೂ ಮೀಡಿಯಾಗಳೆಲ್ಲಾ ಇದೊಂದು ಸರಾಯನ ನೆನಪಿನ ಕಾಯಕ್ರಮ ಅಷ್ಟೇ ಎಂದು ಭಾವಿಸಿದ್ದರೆ ಸಂಘ ಗಳು ತೆರೆಮರೆಯಲ್ಲೇ ಪಿತೂರಿ ನಡೆಸಿ ಖಾಸಗಿ ಟ್ರಸ್ಟ್‌ಗೆ 80 ಎಕರೆ ಕಬಳಿಕೆಯ ಸಂಚು ನಡೆಸಿದ್ದರು.

ಚೆಡ್ಡಿ ಕೇಂದ್ರ ಹಾಗೂ ದೇವಸ್ಥಾನ

ರಿಗೆ ವಿಜಯನಗರ ಪುನಶ್ಚೇತನ ಟ್ರಸ್ಟ್ ಎಂದಿದೆಯಾದರೂ ಈ ಸಂಚು ಇನ್ನೂ ಆಳವಾಗಿದೆ. ಅವತ್ತಿನ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಕುಟ್ಟಿದ ಯಡ್ಡಿ "ಟ್ರಸ್ಟಿನವರು ಇಲ್ಲೊಂದು ಥೀಮ್ ಪಾರ್ಕ್ ಮಾಡುತ್ತಾರೆ. ಹಲ್ಲಿರುವ ಅಕ್ಷರಧಾಮ ದೇವಸ್ಥಾನದ ರೀತಿಯಲ್ಲೇ ಒಂದು ಬೃಹತ್ ನ ಬರಲಿದೆ. ಜೊತೆಗೆ ವಿಜಯನಗರ ಅರಸರ ಆಡಳಿತ, ಜನಜೀವನದ ಬಿಂಬಿಸಲಾಗುವುದು ಹಾಗೂ ಕೃಷ್ಣದೇವರಾಯನ ಕಂಚಿನ ಪ್ರತಿಮೆ ದ್ದಾರೆ" ಎಂದಿದ್ದಾರೆ. ಈ ಅಜೆಂಡಾದ ವಿವರಗಳನ್ನು ನೋಡಿದರೆ ದೊಂದು ಕೋಮುವಾದಿ ಟ್ರಸ್ಟ್ ಎಂಬುದು ಗೊತ್ತಾಗುವಂತಿದೆ. ಈ ಸರ್ಕಾರದಿಂದ ಆರಂಭ ಹಂತದಲ್ಲಿ 5 ಕೋಟಿ ರೂಪಾಯಿ ಕೊಡಲು ರೆಡಿಯಾಗಿದ್ದಾರೆ. ಪಟ್ಟಾಭಿಷೇಕ ಕಾರ್ಯಕ್ರಮದ ಹೆಸರಿನಲ್ಲಿ 75 ರೂಪಾಯಿ ನುಂಗಿ ನೀರು ಕುಡಿದಿರುವ ಬಿಜೆಪಿಗಳಿಗೆ ಈಗ ಟ್ರಸ್ಟಿನ ಲ್ಲಿ ಹಣ ಲೂಟಿ ಮಾಡುವ ಅವಕಾಶ ಕೊಡಲಾಗುತ್ತಿದೆ.

ವಿಸಿ ಮುರಿಗೆಪ್ಪನ ಮುಠ್ಠಾಳತನ

ಪೆ ಕನ್ನಡ ವಿವಿ ಆಸ್ತಿಗೆ ಚೆಡ್ಡಿಗಳು ಕನ್ನ ಹಾಕಲು ಅವಕಾಶ ಕೊಟ್ಟಿರುವ ಆರೋಪಿ ಯಾರೆಂದರೆ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಪ್ಪಾ...ಕಳೆದ ಸೆಪ್ಟೆಂಬರ್ ತಿಂಗಳಿನಲ್ಲೇ ಯಾರನ್ನೂ ಕೇಳದೇ 80 ಎಕರೆ ಜಾಗವನ್ನು ಆರೆಸ್ಸೆಸ್‌ನವರಿಗೆ ಹಸ್ತಾಂತರಿಸಲು ನೀಡಿ ಪತ್ರ ಬರೆದಿದ್ದರು. (ಸಂಖ್ಯೆ ಕವಿಹಂ/ಕುಪ/ಕೃದೇ/ 10 ದಿನಾಂಕ 8-9-2009) ನಂತರ ಇದೇ ಪತ್ರವನ್ನು ಾಡಿ ಬೆನ್ನೆಲುಬಿಲ್ಲದ ಈ ವಿಸಿಗೆ ಶಿಕ್ಷಣ ಇಲಾಖೆಯ ಚಾಪಾಲಿಯೆಂಬ ಆರ್ಡಿನರಿ ಗುಮಾಸ್ತ '80 ಎಕರೆ ನ್ನು ಖಾಸಗಿ ಟ್ರಸ್ಟಿಗೆ ಕೊಡತಕ್ಕದ್ದು' ಎಂದು ಪತ್ರ ಬರೆದ ಹೂಂಗುಟ್ಟಿದ್ದಾರೆ. 2010 ರ ಜನವರಿ 22ರಂದು ಈ ರೆಯಲಾಗಿದೆ. ಇದಾದ ನಂತರ ಜನವರಿ 30 ರಂದೇ ಸಿಂಡಿಕೇಟ್ ಸಭೆ ನಡೆಸಿದ ಮುರಿಗೆಪ್ಪಾ ಭೂಮಿ ರದ ವಿಚಾರ ಮಂಡಿಸಿ ತರಾತುರಿಯಲ್ಲಿ ಅನುಮೋದನೆ ೂಂಡಿದ್ದಾರೆ. ವಿವಿಯ ಕೆಲವು ವಿಭಾಗ ಮುಖ್ಯಸ್ಥರು ಸಭೆಯಲ್ಲಿ ಹಾಜರಿರದಿದ್ದುದೂ ಮುರಿಗೆಪ್ಪನಿಗೆ ಅನುಕೂಲ . ಆದರೆ ನಂತರ ಈ ವಿಷಯ ಗೊತ್ತಾಗಿ ಸಮಾಜ ಕಾಯದ ಡಾ. ಟಿ.ಆರ್. ಚಂದ್ರಶೇಖರ್, ಕನ್ನಡ ಭಾಷಾ ಮುಖ್ಯಸ್ಥ ಡಾ. ರಹಮತ್ ತರೀಕೆರೆ ಸಿಂಡಿಕೇಟ್ ನಿರ್ಣಯಕ್ಕೆ ತಮ್ಮ ಸಮ್ಮತಿ ಇಲ್ಲ ಎಂದು ಅಧಿಕೃತವಾಗಿ ರೆ. ಕನ್ನಡ ವಿವಿಯಂತಹ ಮಹತ್ವದ ಶೈಕ್ಷಣಿಕ ಹಾಗೂ


ಮನೆಮುರುಕ ಮುರಿಗೆಪ್ಪಾ



ಒಂದು ಸ್ವಾಯತ್ತ ಸಂಸ್ಥೆಯಾಗಿರುವ ಕನ್ನಡ ವಿವಿಯ ಹಾಲಿ ಉಪಕುಲಪತಿ ಡಾ. ಮುರಿಗೆಪ್ಪಾ ಸ್ವಲ್ಪ ಜವಾಬ್ದಾರಿಯುತವಾಗಿ ವರ್ತಿಸಿದ್ದಿದ್ದರೆ ಇಷ್ಟೆಲ್ಲಾ ಅನಾಹುತ ಆಗುತ್ತಲೇ ಇರಲಿಲ್ಲ, ಮುಂದೆ ಬಂದರೆ ಹಾಯದ ಹಿಂದೆ ಬಂದರೆ ಒದೆಯದ ಮುರಿಗೆಪ್ಪಾ ಹಂಪೆ ವಿವಿಗೆ ವಕ್ಕರಿಸಿ ಎರಡು ವರ್ಷಗಳಾಗುತ್ತಿವೆ. ಈತನಿಗೆ ಕನ್ನಡ ವಿವಿಯಂತಹ ಒಂದು ಸಾಂಸ್ಕೃತಿಕ ಕೇಂದ್ರದ ಮಹತ್ವವಾಗಲಿ, ಅದನ್ನು ಕಟ್ಟಿ ಬೆಳೆಸಲು ಇರಬೇಕಾದ ದೂರದೃಷ್ಟಿಯಾಗಲಿ ಇಲ್ಲ, ಒಂದು ಸಣ್ಣ vision ಇರದ ಈ ಪೆದ್ದಂಭಟ್ಟ ಈಗ RSSನವರು ಹೇಳಿದ್ದಕ್ಕೆಲ್ಲಾ ಕೋಲೆಬಸವನಂತೆ ತಲೆ ಆಡಿಸುತ್ತಿದ್ದಾರೆ.

ಉನ್ನತ ಶಿಕ್ಷಣ ಸಚಿವ ಲಿಂಬಾವಳಿಯ ಕಚೇರಿಯ ಆರ್ಡಿನರಿ ಗುಮಾಸ್ತ ಅಧಿಕಾರಿಯೊಬ್ಬ ಪತ್ರ ಬರೆದು '80 ಎಕರೆ ಭೂಮಿ ಹಸ್ತಾಂತರಿಸಿ' ಎಂದು ಸೂಚಿಸಿದ ತಕ್ಷಣ ಅದರ ಸಾಧಕಭಾದಕಗಳನ್ನೊಂದೂ ಯೋಚಿಸದೆ ಈತ ವಿವಿಯ ಸಿಂಡಿಕೇಟ್ ಸಭೆಯಲ್ಲಿ ವಿಚಾರ ಮಂಡಿಸಿ ಅನುಮೋದನೆ ಕೊಡಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಲಿಂಗಾಯತ ಆಸಾಮಿ ಮುರಿಗೆಪ್ಪಾ ಈ ಹಿಂದೆ ಧಾರವಾಡದ ಕರ್ನಾಟಕ ಯುನಿವರ್ಸಿಟಿಯಲ್ಲಿದ್ದಾತ. ಈತನಿಗೆ ಒಳ್ಳೆಯದು, ಕೆಟ್ಟದರ ನಡುವಿನ ವ್ಯತ್ಯಾಸವೇ ಗೊತ್ತಿಲ್ಲ ಎಂಬುದು ಈತನನ್ನು ಕಂಡವರ ಅಂಬೋಣ.

ಕನ್ನಡ ವಿವಿಗೆ ಅನೇಕರು ವೈಸ್ ಛಾನ್ಸಲರ್‌ಗಳು ಆಗಿಹೋಗಿದ್ದಾರೆ. ಡಾ. ಕಂಬಾರ, ಲಕ್ಕಪ್ಪಗೌಡ, ವಿವೇಕ ರೈ ಮುಂತಾದವರೆಲ್ಲಾ ತಮ್ಮ ಶಕ್ತಿಮೀರಿ ಈ ಸಂಸ್ಥೆ ಬೆಳೆಸಲು ಶ್ರಮಿಸಿದ್ದಾರೆ. ಆದರೆ ಎಲ್ಲಾ ಬಣ್ಣ ಮಸಿ ನುಂಗಿತು ಎನ್ನುವಂತೆ ಈಗಿನ ವೀಸಿ ಮುರಿಗೆಪ್ಪಾ ವಿವಿಯ ಜಾಗವನ್ನು ಭೂಗಳ್ಳರ ಕೈಗೆ ಒಪ್ಪಿಸುವ ಮುಠ್ಠಾಳ ಕೆಲಸ ಮಾಡುತ್ತಿದ್ದಾರೆ. ಇದು ಕನ್ನಡ ದ್ರೋಹದ ಕೆಲಸ ಎಂತಲೂ ಮುರಿಗೆಪ್ಪನಿಗೆ ಅರ್ಥವಾಗದಿರುವುದೇ ದುರಂತ.



220 ಎಕರೆ ಥೀಮ್ ಪಾರ್ಕ್ ಬಗ್ಗೆ ಬಿಜೆಪಿ ವೆಬ್‌ಸೈಟ್‌ನಲ್ಲಿ ಮಾಹಿತಿ....


ಸಾಂಸ್ಕೃತಿಕ ಕೇಂದ್ರದ ಆಸ್ತಿಯನ್ನು ಪರಭಾರೆ ಮಾಡುವ ವಿಚಾರ ಹೀಗೆ ತಣ್ಣಗೆ ಮುಗಿದುಹೋಗುವುದರಲ್ಲಿತ್ತು, ಆದರೆ ಅಲ್ಲಿನ ಸಿಬ್ಬಂದಿ ಸಕಾಲದಲ್ಲಿ ಎಚ್ಚೆತ್ತುಕೊಂಡಿದ್ದಾರೆ.

ಈ ಮುರಿಗೆಪ್ಪಾ ಅದಿನ್ನೆಂತಹ ನಾಲಾಯಕ್ ಎಂದರೆ ವಿಜಯನಗರ ಪುನಶ್ಚೇತನ ಟ್ರಸ್ಟ್ ಅಂದರೆ ಏನು? ಅದರ ಬೈಲಾ ಏನಿದೆ? ಅಧ್ಯಕ್ಷನಾರು? ಟ್ರಸ್ಟ್ ಮೆಂಬರ್‌ಗಳ ಹಿನ್ನೆಲೆ ಹಾಗೂ ಯೋಗ್ಯತೆಗಳೇನು ಎಂಬ ಒಂದೂ ಪ್ರಶ್ನೆ ಕೇಳದೆ 80 ಎಕರೆ ಭೂಹಸ್ತಾಂತರಕ್ಕೆ ಒಪ್ಪಿಕೊಂಡಿದ್ದಾರೆ. "ಇದು ಸರಿಯಲ್ಲ" ಎಂದು ಕೆಲವರು ವಾದಿಸಿದಾಗ "ನೀವು ಏನು ಬೇಕಾದ್ರೂ ಮಾಡಿಕೊಳ್ಳಿ" ಎನ್ನುತ್ತಿದ್ದಾರೆ. "ಈ 80 ಎಕರೆ ಜಮೀನನ್ನು ಟ್ರಸ್ಟಿನವರಿಗೆ ಪುಕ್ಕಟ್ಟೆಯಾಗಿ ಕೊಡುತ್ತಿಲ್ಲ, ಅವರು 3 ಕೋಟಿ ರೂಪಾಯಿ ವಿವಿಗೆ ಕೊಡುತ್ತಿದ್ದಾರೆ" ಎಂತಲೂ ಭಂಡವಾದ ಮಾಡುತ್ತಿದ್ದಾರೆ.ಕನ್ನಡ ವಿವಿಯಲ್ಲಿ 8 ಮಂದಿ ಸಿಂಡಿಕೇಟ್ ಮೆಂಬರ್‌ಗಳು ಬಿಜೆಪಿಯವರೇ ಆಗಿದ್ದಾರೆ. ಹಂಪಣ್ಣ, ಗಾಯತ್ರಿ ನಾವಡ, ಮೈಸೂರಿನ ವಸಂತ್‌ಕುಮಾರ್ ವಿವಿಯನ್ನು ಹರಾಜಿಗಿಡಲು ತುದಿಗಾಲಲ್ಲಿ ನಿಂತಿದ್ದಾರೆ.

ಈಗ ಜನರಿಗಿರುವ ದಾರಿ ಒಂದೆ: ಮುರಿಗೆಪ್ಪಾನ ಕಾಲರ್ ಹಿಡಿದು "ಜುಜುಬಿ 3 ಕೋಟಿ ರೂಪಾಯಿಗೆ ವಿವಿಯ 80 ಎಕರೆ ಮಾರಿಕೊಳ್ಳುವಂಥ ದುರ್ಗತಿ ಏನು ಬಂದಿದೆ?" ಎಂದು ಕೇಳುವುದು!



ಅಡ್ವಾಣಿ



ಭರದ್ವಾಜ್

ವಿವಿಯ ಸಿಂಡಿಕೇಟ್‌ನ ಈ ಕನ್ನಡ ದ್ರೋಹಿ ನಿರ್ಣಯಕ್ಕೆ ರಾಜ್ಯಪಾಲರ ಅನುಮೋದನೆಯೂ ಬೇಕಾಗುತ್ತದೆ. ಈಗಾಗಲೇ ಈ ಭೂಗಳ್ಳರ ಸಂಚಿನ ವಾಸನೆ ರಾಜ್ಯಪಾಲ ಭಾರದ್ವಾಜ್‌ರಿಗೆ ಹತ್ತಿದೆ. ಹಾಗಾಗಿ ಅವರು 80 ಎಕರೆ ಭೂಮಿ ಹಸ್ತಾಂತರ ಹಾಗೂ RSS ನವರ ಟ್ರಸ್ಟಿನ ಬಗ್ಗೆ ಪೂರ್ಣ ಮಾಹಿತಿ ಕೊಡುವಂತೆ ಮುರಿಗೆಪ್ಪನಿಗೆ ಪತ್ರ ಬರೆದಿದ್ದಾರೆ.

ಕೊನೆಯದಾಗಿ,

ಅತ್ಯಂತ ಅಪಾಯಕಾರಿ ವಿಚಾರ ಯಾವುದೆಂದರೆ ವಿಜಯನಗರ ಪುನಶ್ಚೇತನ ಟ್ರಸ್ಟಿನ ಭೂಗಳ್ಳರು ಕೇಳುತ್ತಿರುವುದು 80 ಎಕರೆ ಅಲ್ಲ ಬದಲಾಗಿ 220 ಎಕರೆ!

ಸಂಘ ಪರಿವಾರಿಗಳ ವೆಬ್‌ಸೈಟ್‌ಗಳಲ್ಲಿ, ಹೇಳಿಕೆಗಳಲ್ಲಿ ಈ 220 ಎಕರೆಯ ಥೀಮ್‌ಪಾರ್ಕಿನ ಬಗ್ಗೆ ಮಾಹಿತಿಗಳಿವೆ.

ಅಂದರೆ ಇಡೀ ಕನ್ನಡ ವಿಶ್ವವಿದ್ಯಾಲಯವನ್ನೇ ಆಪೋಷನ ತೆಗೆದುಕೊಳ್ಳುವ ಸಂಚು ಇದು. ಕರ್ನಾಟಕದ ಜನರೆಲ್ಲರೂ ಒಗ್ಗೂಡಿ ಈ ಭೂಗಳ್ಳರನ್ನು ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಕಾಂಪೌಂಡಿನಿಂದಾಚೆಗೆ ಹೊಡೆದು ಓಡಿಸಬೇಕಿದೆ. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ.



ಅವಿವೇಕಿ ರೆಡ್ಡಿ ಸೋದರರ ಮೂರ್ಖ ಹೇಳಿಕೆಗಳು

ಟೂರಿಸಂ ಮಂತ್ರಿ ಜನಾರ್ದನ ರೆಡ್ಡಿಯ ತಲೆಯಲ್ಲಿ ಆ ಭಗವಂತ ಅದೆಷ್ಟು ಜೇಡಿಮಣ್ಣು ತುಂಬಿ ಕಳಿಸಿದ್ದಾನೋ ಏನೋ.....

ಈತನಿಗೆ ಒಂದು ಯೂನಿವರ್ಸಿಟಿ ಅಂದರೇನು? ಸ್ವಾಯತ್ತ ಸಂಸ್ಥೆ ಅಂದರೇನು? ಯುಜಿಸಿ ಅಂದರೆ ಏನೆಂಬುದೇ ಗೊತ್ತಿರುವಂತಿಲ್ಲ.

ಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ವರ್ಷಾಚರಣೆಯ ಕಾರ್ಯಕ್ರಮ ನಡೆಯುತ್ತಿರುವಾಗಲೇ ಹಂಪಿಯ ಕನ್ನಡ ವಿವಿ ಹೆಸರನ್ನು 'ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ' ಎಂದು ಬದಲಾಯಿಸಲಾಗುವುದು ಎಂದಿದ್ದ. ಈ ಅವಿವೇಕಿ ಒಂದು ವಿವಿಯ ಹೆಸರು ಬದಲಾಯಿಸುವುದೆಂದರೆ ಕರ್ನಾಟಕ-ಆಂಧ್ರ ಗಡಿ ರೇಖೆ ಬದಲಿಸಿದಷ್ಟೇ ಸಲೀಸು ಎಂದುಕೊಂಡಿದ್ದಾನೆ. ಕನ್ನಡ ವಿವಿ ಎಂದರೆ ಅದೇನು ರೆಡ್ಡಿ ಸಾಕಿರುವ ನಾಯಿಯಾ ಅಥವಾ ಅವನ ಪಾಳೆಯಪಟ್ಟಾ? ಯುಜಿಸಿ ಅನುಮತಿ ಇಲ್ಲದೆ ಇದೆಲ್ಲ ಸಾಧ್ಯವಿಲ್ಲ ಎಂಬ ಸರಳ ವಿಚಾರವೂ ರೆಡ್ಡಿಗೆ ಗೊತ್ತಿಲ್ಲ, ಇವನ ಸೋದರ ಸೋಮಶೇಖರ ರೆಡ್ಡಿ ಕೆಎಂಎಫ್‌ನ ನಂದಿನಿ ಹಾಲಿನ ಪ್ಯಾಕೇಟ್ ಮೇಲೆ ಹಸುವಿನ ಚಿತ್ರದ ಬದಲಾಗಿ ಕೃಷ್ಣದೇವರಾಯನ ಫೋಟೋ ಹಾಕಿಸುತ್ತೇನೆ ಅಂತ ಹೊರಟಿದ್ದ. 16 ನೇ ಶತಮಾನದಲ್ಲಿದ್ದ ಕೃಷ್ಣದೇವರಾಯನ ಫೋಟೋ ಈ ರೆಡ್ಡಿಗೆ ಅದೆಲ್ಲಿ ಸಿಕ್ಕಿತೊ?

ಈ ರೆಡ್ಡಿಗಳು ಹೀಗೆ ಕೃಷ್ಣದೇವರಾಯನಿಗೆ ಗಂಟು ಬೀಳಲು ಒಂದು ಕಾರಣವಿದೆ. ಜನಸಾಮಾನ್ಯರಲ್ಲಿ ಕೃಷ್ಣದೇವರಾಯ ಎಂದರೆ ಅಪ್ರತಿಮ ಸೇನಾನಿ, ಆಡಳಿತಗಾರನೆಂಬ ಭಾವನೆಯಿದೆ. ಹಾಗಾಗಿ ಅಂತಹ ಅಸಾಮಾನ್ಯ ರಾಜನ ಹೆಸರನ್ನು ಮುಂದಿಟ್ಟುಕೊಂಡು ಗಣಿ ಲೂಟಿ, ಮೋಸ ವಂಚನೆಗಳ ದಂಧೆಯಿಂದ ಕೆಟ್ಟ ಹೆಸರು ಬಂದಿರುವ ತಮ್ಮ ಮುಖಕ್ಕೆ ರಕ್ಷಾಕವಚದಂತೆ ಬಳಸುವ ಹುನ್ನಾರ ರೆಡ್ಡಿಗಳದ್ದು.

ಡ ವಿಶ್ವವಿದ್ಯಾಲಯವನ್ನು ಭೂಗಳ್ಳರಿಂದ ರಕ್ಷಿಸಿ' ಆಂದೋಲನ

ತಿ-ಬುದ್ಧಿಜೀವಿ-ಕಸಾಪ-ಕನ್ನಡ ಪ್ರಗತಿಪರ ಸಂಘಟನೆಗಳ ಬೆಂಬಲ

ಘ ಪರಿವಾರದ ಭೂಗಳ್ಳರು ಹಿಂದೆ ಸರಿಯದೆ ಹೋದರೆ ಇದೊಂದು ದೊಡ್ಡ ಹೋರಾಟವಾಗಿ ಬೆಳೆಯುವುದು ಖಚಿತ.

ಂಪಿಯ ಕನ್ನಡ ವಿವಿಯನ್ನು ಭೂಗಳ್ಳರಿಂದ ರಕ್ಷಿಸಿ' ಎಂಬ ಬ್ಯಾನರಿನಡಿ ಈಗಾಗಲೇ ರಾಜ್ಯಾದ್ಯಂತ ಪ್ರತಿಭಟನೆಗಳು ಶುರುವಾಗಿವೆ. ಕನ್ನಡ ಸಮಸ್ತ ಸಿಬ್ಬಂದಿ ದೃಢ ತೀರ್ಮಾನ ಹಾಗೂ ಒಗ್ಗಟ್ಟಿನಿಂದ ಪ್ರತಿಭಟಿಸುತ್ತಿದ್ದಾರೆ. ಮೊನ್ನೆ ಫೆಬ್ರವರಿ 24ರಂದು ಸಾಹಿತಿಗಳಾದ ರ್.ಅನಂತಮೂರ್ತಿ, ಕಿ.ರಂ.ನಾಗರಾಜ, ಕೆ.ಮರುಳಸಿದ್ದಪ್ಪ, ಪ್ರೊ.ಜಿ.ರಾಮಕೃಷ್ಣ ಆಲಿಬಾಬಾ ಮುಂತಾದ ನೂರಾರು ಮಂದಿ ಟೌನ್‌ಹಾಲ್ ಪ್ರತಿಭಟನಾ ಸಭೆ ನಡೆಸಿದ್ದಾರೆ.

ಡ ವಿ.ವಿ.ಯ ಕುತ್ತಿಗೆ ಮುರಿಯಲು ಹೊರಟಿರುವ ಸಂಘ ಪರಿವಾರಿಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಗಟ್ಟಿಯಾಗುತ್ತಿದೆ. ಕನ್ನಡ ಪರಿಷತ್ ಅಧ್ಯಕ್ಷ ನಲ್ಲೂರು ಪ್ರಸಾದ್ ಸಹ ಈ ಬಗ್ಗೆ ಯಡ್ಡಿಗೆ ಪತ್ರ ಬರೆದು ಯಾವುದೇ ಕಾರಣಕ್ಕೂ ಕನ್ನಡ ವಿವಿಯ ಜಾಗವನ್ನು ಎಸ್‌ನವರಿಗೆ ನೀಡದಂತೆ ಒತ್ತಾಯಿಸಿದ್ದಾರೆ. ಗದಗ ಸಾಹಿತ್ಯ ಸಮ್ಮೇಳನಕ್ಕೆ ಯಡ್ಡಿ ಬಂದಾಗಲೂ ನಲ್ಲೂರು ಈ ವಿಚಾರ ಪ್ರಸ್ತಾಪಿಸಿದಾಗ ಯಡ್ಡಿ "ಆ.... ಏನು ಎಲ್ಲಿ" ಎಂದು ವಿಚಿತ್ರವಾಗಿ ಮಾತಾಡಿದ್ದಾರೆ. ಈ ಮಧ್ಯೆ ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ "ಹಂಪೆಯ ಕನ್ನಡ ವಿಶ್ವವಿದ್ಯಾಲಯ ಉಳಿಸಿ" ಹೋರಾಟಕ್ಕೆ ದನಿಗೂಡಿಸಲು ನಿರ್ಧರಿಸಿದೆ. ಧಾರವಾಡದಲ್ಲಿ ಉಪನ್ಯಾಸಕ ಶ್ರೀಶೈಲ ಮತ್ತವರ ಗೆಳೆಯರು ಸಹಿ ಸಂಗ್ರಹಣಾ ಆಂದೋಲನ ಶುರು ಮಾಡಿದ್ದಾರೆ. ಮೈಸೂರಿನಲ್ಲಿ ಪ್ರತಿಭಟನೆಗಳಾಗಿವೆ.



ಬೆಂಗಳೂರಿನ ನಡೆದ ಪ್ರತಿಭಟನಾ ಸಭೆ...

ಕನ್ನಡ ವಿಶ್ವವಿದ್ಯಾಲಯ: ರೆಸಾರ್ಟ್ ಆಗಬಹುದು ಎನ್ನುವ ಭಯ..

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಎಂಬತ್ತು ಎಕರೆ ಭೂಮಿಯನ್ನು ಈಗತಾನೆ ರಚನೆಯಾದ 'ವಿಜಯನಗರ ಪುನಶ್ಚೇತನ ಪ್ರತಿಷ್ಠಾನ'ಕ್ಕೆ ಹಸ್ತಾಂತರಿಸುವ ನಿರ್ಣಯದ ಬಗ್ಗೆ ಕಳೆದ ಕೆಲವು ದಿನಗಳಿಂದ ಮಾಧ್ಯಮಗಳಲ್ಲಿ ಬಂದ ಸುದ್ದಿಯನ್ನು ಗಮನಿಸಿದಾಗ ಆತಂಕ ಆಯಿತು.ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಹಾಗೂ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಟಿ. ಆರ್. ಚಂದ್ರಶೇಖರ್ ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಕಳುಹಿಸಿದ ಎಲ್ಲ ದಾಖಲೆಗಳ ಕಟ್ಟು ನಿನ್ನೆ ತಾನೇ ನನ್ನ ಕೈಸೇರಿತು.



ಶ್ರೀಕೃಷ್ಣ ದೇವರಾಯನ ಪಟ್ಟಾಭಿಷೇಕದ 500ನೆಯ ವರ್ಷಾಚರಣೆಯ ಹಿನ್ನೆಲೆಯಲ್ಲಿ, ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಪುನರ್ ನೆನಪಿಸುವ ಹಾಗೂ ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಇತ್ಯಾದಿ ಭಾರತೀಯ ಸಂಸ್ಕೃತಿಯ ವೈವಿಧ್ಯವನ್ನು ಪ್ರೋತ್ಸಾಹಿಸಿ ಪ್ರೇರಣೆ ನೀಡುವ ದೃಷ್ಟಿಯಿಂದ ಹಾಗೂ ವಿಜಯನಗರ ಸಾಮ್ರಾಜ್ಯದಲ್ಲಿ ನಡೆಸಿದ ಚಟುವಟಿಕೆಗಳನ್ನು ಬಿಂಬಿಸುವ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಹಂಪಿ,ಕಮಲಾಪುರ ಇಲ್ಲಿ 'ವಿಜಯನಗರ ಪುನಶ್ಚೇತನ ಪ್ರತಿಷ್ಠಾನ (ಟ್ರಸ್ಟ್)' ಅನ್ನು ಕರ್ನಾಟಕ ಸರಕಾರ ರಚಿಸಿದೆ.18 ಸದಸ್ಯರನ್ನು ಉಳ್ಳ ಈ ಆದೇಶ ಜನವರಿ 1, 2010ರನ್ನು ಹೊರಬಿದ್ದಿದೆ.

22-1-2010ರ ಸರಕಾರೀ ಆದೇಶದಲ್ಲಿ ಹಂಪಿಯ ಕನ್ನಡ ವಿವಿಯ ವ್ಯಾಪ್ತಿಯಲ್ಲಿ ಇರುವ 80 ಎಕರೆ ಜಮೀನನ್ನು, ಒಂದು ಅಂತರರಾಷ್ಟ್ರೀಯ ಮಟ್ಟದ ಉದ್ಯಾನವನ, ಸಂಶೋಧನಾ ಕೇಂದ್ರ, ಶ್ರೀ ಕೃಷ್ಣದೇವರಾಯನ ಪುತ್ಥಳಿ ಸ್ಥಾಪನೆಗಾಗಿ ವಿಜಯನಗರ ಪುನಶ್ಚೇತನ ಪ್ರತಿಷ್ಠಾನಕ್ಕೆ ಹಸ್ತಾಂತರಿಸಲು ಅನುಮತಿ ನೀಡಿ ಆದೇಶಿಸಿದೆ.ಇದೆ ಆದೇಶದ ಪ್ರಸ್ತಾವನೆಯಲ್ಲಿ ಕನ್ನಡ ವಿವಿ, ಹಂಪಿಯ ಕುಲಪತಿಗಳು ಇದಕ್ಕೆ ಸಮ್ಮತಿಸಿ, 8.9.2009ರನ್ನು ಸರಕಾರಕ್ಕೆ ಬರೆದ ಪತ್ರದ ಉಲ್ಲೇಖ ಇದೆ.

ಹೀಗೆ ಒಂದು ಮಹತ್ವದ ನಿರ್ಧಾರ ಇಷ್ಟು ಅವಸರದಲ್ಲಿ ಕಾರ್ಯರೂಪಕ್ಕೆ ಬರುವುದು ಆತಂಕ ಉಂಟುಮಾಡುತ್ತದೆ.ಪ್ರಸ್ತಾವಿತ ಮಾಡಲು ಉದ್ದೇಶಿಸಿರುವ ಎಲ್ಲ ಕೆಲಸಗಳನ್ನು ಕನ್ನಡ ವಿವಿಯೇ ಮಾಡಬಹುದು.ಕನ್ನಡ ವಿವಿಯಲ್ಲಿ ಇರುವ ಸಂಗೀತ, ಚಿತ್ರಕಲೆ, ಶಿಲ್ಪ, ಇತಿಹಾಸ, ಪುರಾತತ್ವ, ಸಾಹಿತ್ಯ ಮುಂತಾದ ವಿಭಾಗಗಳಿಗೆ ಹೆಚ್ಚಿನ ಸಿಬ್ಬಂದಿ ಅನುದಾನ ಕೊಟ್ಟು ಇವನ್ನು ಮಾಡಿಸಬಹುದು. ಸಂಗೀತ ಮತ್ತು ನೃತ್ಯಕ್ಕೆ ಪ್ರತ್ಯೇಕ ವಿವಿ ಆರಂಭ ಆಗಿದೆ. ಇಲ್ಲಿನ ಅನೇಕ ಯೋಜನೆಗಳನ್ನು ಆ ವಿವಿ ಮೂಲಕ ಮಾಡಿಸಬಹುದು. ಜೊತೆಗೆ ಇದೀ ಯೋಜನೆಯ ಉದ್ದೇಶಗಳು ಸರಿಯಾಗಿ ಎಲ್ಲೂ ಬಿಂಬಿತ ಆಗಿಲ್ಲ, ಉದ್ಯಾನವನ ರೆಸಾರ್ಟ್ ಆಗಬಹುದು ಎನ್ನುವ ಭಯ ಇದ್ದೇ ಇರುತ್ತದೆ.ಕನ್ನಡ ವಿವಿಯಲ್ಲೇ ಇರುವ ಅನೇಕ ತಜ್ಞರು ಈ ಕುರಿತು ಸರಿಯಾಗಿ ಯೋಜನೆ ರೂಪಿಸಬಲ್ಲವರಾಗಿದ್ದಾರೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ವಿದ್ಯಾರಣ್ಯ ಆವರಣದಲ್ಲಿ ವಿಸ್ತಾರವಾದ ಜಮೀನು ನೋಡುವವರ ಕಣ್ಣು ಕುಕ್ಕುತ್ತದೆ. ನಾನು ಅಲ್ಲಿ ಕುಲಪತಿ ಆಗಿದ್ದ ಅವಧಿಯಲ್ಲಿ (ಸೆಪ್ಟೆಂಬರ 2004ರಿಂದ ಜೂನ್ 2007)ಆಗಿನ ಬಳ್ಳಾರಿ ಜಿಲ್ಲಾಧಿಕಾರಿ ಆಗಿದ್ದ ಅರವಿಂದ ಶ್ರೀವಾತ್ಸವ ಅವರ ಸಹಕಾರದಿಂದ, ಇದೀ ಆವರಣದ ಜಮೀನಿನ ರೆವಿನ್ಯೂ ಸರ್ವೇ ಮಾಡಲಾಯಿತು.ಸ್ವಲ್ಪ ಮಟ್ಟಿಗೆ ಜಮೀನಿನ ಕೆಲವು ಭಾಗ ಆಗಲೇ ಕೈತಪ್ಪಿಹೋಗಿತ್ತು, ಆದರೂ ಬಳ್ಳಾರಿ -ಕಮಲಾಪುರ-ಹಂಪಿ ರಸ್ತೆಯಲ್ಲಿ ಬರುವವರಿಗೆ ವಿವಿಯ ವಿಶಾಲ ಖಾಲಿ ಜಾಗ ಆಸೆ ಬರಿಸುತ್ತದೆ.. ಹಾಗಾಗಿಯೇ ಕೆಲವು ರೆಸಾರ್ಟ್‌ಗಳು ಸುತ್ತಮುತ್ತ ಎದ್ದುಬಂದಿವೆ. ಈಗ 80 ಎಕರೆ ಜಮೀನು ಅರಣ್ಯಪ್ರದೇಶದ ಪಕ್ಕ ಇರುವ ಕಾರಣ ಇನ್ನಷ್ಟು ಬೆಲೆಬಾಳುತ್ತದೆ.

ನಾನು ಕುಲಪತಿ ಆಗಿದ್ದ ಅವಧಿಯಲ್ಲಿ ಇಂತಹ ಎರಡು ಒತ್ತಡಗಳು ನನ್ನ ಮೇಲೆ ಬಿದ್ದಿದ್ದವು. ಬಳ್ಳಾರಿ ಜಿಲ್ಲೆಯ ಒಂದು ಬೃಹತ್ ಕಾರ್ಖಾನೆಯವರು ಅಭಿವೃದ್ಧಿಯ ಪರೋಕ್ಷ ರೂಪದಲ್ಲಿ ಜಾಗ ಕೇಳಿದ್ದರು. ಅದರಿಂದ ವಿವಿಗೆ ದೊಡ್ಡ ಮೊತ್ತದ ಹಣ ಕೂಡಾ ಬರುತ್ತಿತ್ತು. 2004 ರಿಂದ 2006ರ ಅವಧಿಯಲ್ಲಿ ಕನ್ನಡ ವಿವಿಯಲ್ಲಿ ತುಂಬಾ ಹಣದ ಮುಗ್ಗಟ್ಟು ಇತ್ತು, ಸಂಬಳ ಕೊಡಲು ಕಷ್ಟ ಆಗುತ್ತಿತ್ತು. ಆದರೆ ತಾತ್ಕಾಲಿಕ ಲಾಭಕ್ಕಿಂತ ವಿವಿಯ ಶಾಶ್ವತ ಆಸ್ತಿ ಮುಖ್ಯ ಎನ್ನುವ ಕಾರಣಕ್ಕೆ ನಾನು ಅವರ ಕೋರಿಕೆಯನ್ನು ತಿರಸ್ಕರಿಸಿದೆ. ಅವರ ಅಧಿಕಾರಿ ನನ್ನನ್ನು ಭೇಟಿ ಆಗುವ ಅವಕಾಶವನ್ನೇ ಅಸೌಜನ್ಯದಿಂದ ನಾನು ನಿರಾಕರಿಸಿದೆ. ಇನ್ನೊಂದು, ಸರಕಾರದ ಕಡೆಯಿಂದ ಬಂದ ಒತ್ತಡ .ಬಳ್ಳಾರಿ ಬಳಿಯ ವನ್ಯಸಂರಕ್ಷಣಾ ಘಟಕದ ಸ್ಥಳಾಂತರದ ಜೊತೆಗೆ ಕನ್ನಡ ವಿವಿಯ ಆವರಣದ ಜಾಗವನ್ನು, ಸರಕಾರದ ಅರಣ್ಯ ಇಲಾಖೆಗೆ ಬಿಟ್ಟುಕೊಡುವ ಪ್ರಸ್ತಾವ. ತುಂಬಾ ಸೌಜನ್ಯದಿಂದ ಸರಕಾರದ ವರಿಷ್ಠರ ಪ್ರಸ್ತಾವನೆಯನ್ನು ನಾನು ತಿರಸ್ಕರಿಸಿದೆ. ಈ ಎರಡೂ ಸಂಗತಿಗಳನ್ನು ಎಲ್ಲೂ ನಾನು ದಾಖಲೆ ಮಾಡಿಲ್ಲ, ಆದರೆ ವಿವಿಯ ಆಸ್ತಿಯನ್ನು ಬಿಟ್ಟುಕೊಟ್ಟಿಲ್ಲ.

ಹಂಪಿ ಅಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ಸರಕಾರ ಸ್ಥಾಪಿಸಿದೆ.ಅದಕ್ಕೆ ಸರಿಯಾದ ಸವಲತ್ತು ಸಿಬ್ಬಂದಿಯನ್ನು ಹಿಂದಿನ ಮತ್ತು ಇಂದಿನ ಸರಕಾರಗಳು ಕೊಟ್ಟಿಲ್ಲ. ಯುನೆಸ್ಕೋ ತಂಡ ಹಂಪಿಗೆ ಬಂದಾಗ ನಮ್ಮ ವಿವಿಯಲ್ಲಿ ಮತ್ತು ಹಂಪಿಯಲ್ಲಿ ಅವರೊಂದಿಗೆ ನಾನು ಸಾಕಷ್ಟು ಬಾರಿ ಚರ್ಚಿಸಿದ್ದೆ, ಅವರ ಪ್ರಕಾರ ಬಳ್ಳಾರಿ ಜಿಲ್ಲೆಯ ಬಹುಭಾಗ, ಅದರ ಯೋಜನಾ ವ್ಯಾಪ್ತಿಗೆ ಬರುತ್ತದೆ.ತಿರುಳಿನ ಭಾಗ, ಮಧ್ಯಂತರ ಭಾಗ ಮತ್ತು ಅಂಚಿನ ಭಾಗ ಎಂದು ಹಂಪಿಯ ಯೋಜನೆಯನ್ನು ರೂಪಿಸಲಾಗಿದೆ. ಅವನ್ನೆಲ್ಲ ಸಮರ್ಪಕವಾಗಿ ಅಧ್ಯಯನ ಮಾಡದೆ, ಉತ್ಸವ ಮಾಡಿದಂತೆ ದೀರ್ಘಕಾಲೀನ ಯೋಜನೆಗಳನ್ನು ಅವಸರದಿಂದ ಕೈಗೆತ್ತಿಕೊಳ್ಳಬಾರದು.


ಕನ್ನಡ ವಿವಿಯ ಆಸ್ತಿ ನಮ್ಮಂತಹ ಕುಲಪತಿಗಳದ್ದೂ ಅಲ್ಲ, ಅಧಿಕಾರಸ್ಥ ರಾಜಕಾರಣಿಗಳದ್ದೂ ಅಲ್ಲ, ಅದು ಎಲ್ಲ ಕನ್ನಡಿಗರ ಸೊತ್ತು, ಅದನ್ನು ಉಳಿಸಿಕೊಳ್ಳುವುದು ಎಲ್ಲ ಕನ್ನಡಿಗರ ಕರ್ತವ್ಯ. ಅಂತಹ ವಿಶಾಲ ಕನ್ನಡಿಗರಲ್ಲಿ ಕುಲಪತಿಗಳು, ಸರಕಾರ, ಜನಪ್ರತಿನಿಧಿಗಳು, ಅಧಿಕಾರಿಗಳು, ಅಧ್ಯಾಪಕರು, ನೌಕರರು, ಊರವರು -ಎಲ್ಲ ಸೇರುತ್ತಾರೆ.ಅದು ಕನ್ನಡದ ಕೂಡುಕುಟುಂಬ.ಅದು ಇತಿಹಾಸವನ್ನು ಮಾತ್ರ ಅಲ್ಲ, ಭವಿಷ್ಯವನ್ನೂ ನೋಡಬೇಕು.

ಜರ್ಮನಿಯಿಂದ ವಿವೇಕ ರೈ

ಮಾಜಿ ಉಪಕುಲಪತಿಗಳು, ಕನ್ನಡ ವಿವಿ

ಶತಮಾನಗಳ ಕನಸಿಗೆ ವಿಘ್ನ


ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಿಂದೆ ಇದೀ ಕರ್ನಾಟಕದ ಸಾಂಸ್ಕೃತಿಕ ಲೋಕದ ಶತಶತಮಾನಗಳ ಕನಸು ಇದೆ. ಈಗ ಈ ಕನಸಿಗೊಂದು ವಿಘ್ನ ಒದಗಿ ಬಂದಿದೆ. ನಮ್ಮ ಹಿರಿಯರು ವಿಶ್ವವಿದ್ಯಾಲಯದ ಬೆಳವಣಿಗೆಗೆ ಎಂದು ಮುದುಪಾಗಿ ಇಟ್ಟ ಭೂಮಿಯನ್ನು ಯಾವುದೋ ನೆವದಲ್ಲಿ ಈ ಕಾಲದ ಭೂಗಳ್ಳರಿಗೆ ಕೊಡಲು ವಿಶ್ವವಿದ್ಯಾಲಯ ನಿರ್ಧರಿಸಿದೆ ಎಂಬ ಸುದ್ದಿ ಕೇಳಿ ನನಗೆ ದುಃಖವಾಗಿದೆ. ನನ್ನಂತೆಯೇ ವಿಶ್ವವಿದ್ಯಾಲಯದಿಂದ ನಾಡೋಜ ಗೌರವ ಸ್ವೀಕರಿಸಿದ ಎಲ್ಲರೂ ನಮ್ಮ ಮುಖ್ಯಮಂತ್ರಿಗಳಿಗೆ ಕಾಗದ ಬರೆದು ಕನ್ನಡದ ಬೆಳವಣಿಗೆಗೆ ಆಗುತ್ತ ಇರುವ ದ್ರೋಹವನ್ನು ಖಂಡಿಸಿ ತಡೆಯಬೇಕು.



ಭೂಮಿಯನ್ನು ಪಡೆಯುವವರು ತಮ್ಮ ಗುಪ್ತ ಉದ್ದೇಶಗಳನ್ನು ಮುಚ್ಚಿಟ್ಟು ಘನವೆನ್ನಿಸುವ ಮಾತುಗಳನ್ನು ಆಡುತ್ತಾರೆ. ಇದರಿಂದ ನಾವು ಮೋಸಹೋಗಬಾರದು. ಹಂಪಿಯ ನೆಲ ಪವಿತ್ರವಾದ್ದು; ಕನ್ನಡದಲ್ಲಿ ಜ್ಞಾನದ ಸೃಷ್ಟಿಗೆ ಬಳಕೆಯಾಗಬೇಕಾದ್ದು.

-ಯು. ಆರ್. ಅನಂತಮೂರ್ತಿ

ಕನ್ನಡ ವಿ.ವಿ. ಭೂಮಿಯನ್ನು ಅನ್ಯ ಸಂಸ್ಥೆಗಳಿಗೆ ಪರಭಾರೆ ಮಾಡದಿರಲು ಮುಖ್ಯಮಂತ್ರಿಗೆ ಕ.ಸಾ.ಪ. ಆಗ್ರಹ



ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಜಾಗವನ್ನು ವಿಶ್ವವಿದ್ಯಾಲಯದ ಕಾರ್ಯ ಮತ್ತು ಉದ್ದೇಶಗಳಿಗೆ ಬಳಸಿಕೊಳ್ಳದೆ ಬೇರೆಯವರಿಗೆ ಪರಭಾರೆ ಮಾಡುವ ತೀರ್ಮಾನವನ್ನು ಕನ್ನಡ ಸಾಹಿತ್ಯ ಪರಿಷತ್ತು ತೀವ್ರವಾಗಿ ವಿರೋಧಿಸುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಭೂಮಿಯನ್ನು ಪರಭಾರೆ ಮಾಡದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಈಗ ನೀಡಬೇಕೆಂದಿರುವ ಜಾಗದಲ್ಲಿ ಪಾರಂಪರಿಕ ಗ್ರಾಮ ನಿರ್ಮಾಣಕ್ಕೆ ಕನ್ನಡ ವಿಶ್ವವಿದ್ಯಾಲಯ ಯೋಜನೆ ರೂಪಿಸಿ, ಅದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಂಡಿರುವುದಾಗಿ ತಿಳಿದುಬಂದಿದೆ. ಆದ್ದರಿಂದ ಯಾವುದೇ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪ್ರದೇಶ ಅನ್ಯ ಸಂಸ್ಥೆಗಳಿಗೆ ಪರಭಾರೆ ಮಾಡಕೂಡದೆಂದು, ಸನ್ಮಾನ್ಯ ಮುಖ್ಯಮಂತ್ರಿಗಳು ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಆಗ್ರಹಿಸುತ್ತದೆ.

(ನಲ್ಲೂರು ಪ್ರಸಾದ್ ಆರ್.ಕೆ.)

ಅಧ್ಯಕ್ಷರು, ಕಸಾಪ

ಕನ್ನಡ ವಿವಿ ಉಳಿಸಿ-ಹಂಪಿ ಚಲೋ ಸಮಾಲೋಚನಾ ಸಭೆ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಜಮೀನನ್ನು ಕೋಮುವಾದಿಗಳ ಖಾಸಗಿ ಟ್ರಸ್ಟ್‌ಗೆ ನೀಡುತ್ತಿರುವ ಬಿಜೆಪಿ ಸರ್ಕಾರದ ನಿಲುವನ್ನು ಖಂಡಿಸುವುದು ನಾಡಿನ ಪ್ರಜ್ಞಾವಂತರೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿವಿಯ ಸಿಂಡಿಕೇಟ್ ಸಭೆ ನಡೆಯಲಿರುವ ಮಾರ್ಚ್ 13 ರಂದು 'ಹಂಪಿ ಚಲೋ' ಪ್ರತಿಭಟನಾ ಕಾರ್ಯಕ್ರಮ ನಡೆಸುವ ಬಗ್ಗೆ ಒಂದು ಸಮಾಲೋಚನಾ ಸಭೆಯನ್ನು ಕರೆಯಲಾಗಿದೆ. ದಯಮಾಡಿ ಬನ್ನಿ.

ಸ್ಥಳ: ಲಂಕೇಶ್ ಕಚೇರಿ
ಬಸವನಗುಡಿ, ಬೆಂಗಳೂರು
ದಿನಾಂಕ: 28.12.2010 ಸಂಜೆ 6 ಗಂಟೆಗೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಪಾರ್ವತೀಶ 9448380637, bparvateesha@gmail.com



ಕೀಚಕ ವಿವೇಕನ ವಿರುದ್ಧ ರೌಡಿಶೀಟ್

ಮಾನವ ಹಕ್ಕು ವಂಚಕ ವಿವೇಕಾನಂದನ ಪಾಪದ ಕೊಡ ತುಂಬಿರಬೇಕು. ಪ್ರಿಯಾಂಕಾ ಎಂಬ ನತದೃಷ್ಟ ಹೆಣ್ಣುಮಗಳನ್ನು ವಂಚಿಸಿ ಆಕೆಯ ಬದುಕನ್ನೇ ಹಾಳುಗೆಡವಿದ ಪುಂಡನಿಗೆ ನೆರವಾದ ಹ್ಯೂಮನ್ ರೈಟ್ಸ್ ಕೌನ್ಸಿಲ್ ಎಂಬ ನಕಲಿ ಸಂಘಟನೆಯ ಅಧ್ಯಕ್ಷ ವಿವೇಕಾನಂದನ ವಿರುದ್ಧ ಉಪ್ಪಾರಪೇಟೆ ಇನ್ಸ್‌ಪೆಕ್ಟರ್ ಲೋಕೇಶ್ವರ್ ರೌಡಿ ಪೀಟು ತೆರೆದಿದ್ದಾರೆ.

ಅದರರ್ಥ ವಿವೇಕಾನಂದ ಈಗ ರೌಡಿ ಪೀಟರ್. ಸಾಲದ್ದಕ್ಕೆ ಆತನ ರಿವಾಲ್ವರ್ ಲೈಸೆನ್ಸನ್ನು ರದ್ದುಗೊಳಿಸುವುದಕ್ಕೂ ಇನ್ಸ್‌ಪೆಕ್ಟರ್ ಲೋಕೇಶ್ವರ್ ಕ್ರಮ ಜರುಗಿಸುತ್ತಿದ್ದಾರೆ. ಆನಂದರಾವ್ ಸರ್ಕಲ್ಲಿನ ಐಷಾರಾಮಿ ಬ್ರಿಗೇಡ್ ಪ್ಲಾಜಾದಲ್ಲಿದ್ದ ಆತನ ಛೇಂಬರಿಗೂ ಪೊಲೀಸರೇ ಬೀಗ ಜಡಿದಿದ್ದಾರೆ. ಹೊರಗೆ ಎಲ್ಲೆಂದರಲ್ಲಿ ತೂಗುಬಿಟ್ಟಿದ್ದ ನಕಲಿ ಹ್ಯೂಮನ್ ರೈಟ್ಸ್ ಕೌನ್ಸಿಲ್ಲಿನ ಬೋರ್ಡು, ಬ್ಯಾನರ್, ಫ್ಲೆಕ್ಸ್ ಎಲ್ಲವನ್ನೂ ಸಾಕ್ಷಿಗೆಂದು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಸದ್ಯ ವಿವೇಕಾನಂದನ ವಂಚನೆ ಮತ್ತು ಹಾವಳಿಗೊಂದು ತಾತ್ಕಾಲಿಕ ತಡೆ ಬಿದ್ದಿರುವುದಂತೂ ನಿಚ್ಚಳ.

ಆದರೆ ಆತನಿಂದ ವಂಚನೆಗೊಳಗಾದವರ ಕಣ್ಣೀರನ್ನು ಅಳಿಸುವವರ್‍ಯಾರು? ವಿಧಾನಸೌಧದಲ್ಲಿ ಕೆಲಸ ಕೊಡಿಸುತ್ತೇನೆಂದು ಹತ್ತಾರು ಹೆಣ್ಣುಮಕ್ಕಳಿಂದ ದುಡ್ಡು ಕಿತ್ತ, ರಕ್ಷಣೆ ಬಯಸಿ ಬಂದ ದಂಪತಿಗಳ ಆಸ್ತಿಯನ್ನೇ ನುಂಗಿ ಹಾಕಿದ. ಮಾನವಹಕ್ಕು ಪರ ಹೋರಾಡಲೆಂದು ತನ್ನ ಜೊತೆ ಕೈಜೋಡಿಸಿದವರನ್ನೇ ಮುಂಡಾಮೋಚಿದ. ಕಳಕೊಂಡ ರೊಕ್ಕಕ್ಕೊಂದು ವಸೂಲಿಗೆ ನಿಂತವರನ್ನು ರಿವಾಲ್ವರ್ ತೋರಿಸಿ ಬೆದರಿಸಿದ್ದ, ಗಂಡನಿಂದ ಪೀಡಿಸಲ್ಪಟ್ಟ, ಅತ್ತೆ ಮಾವಂದಿರಿಂದ ಹೊರದಬ್ಬಲ್ಪಟ್ಟು, ರೌಡಿಗಳಿಂದ ಆಸ್ತಿ ಕಳಕೊಂಡ ನತದೃಷ್ಟ ಹೆಂಗುಸರನ್ನೇ ನ್ಯಾಯ ಕೊಡಿಸುತ್ತೇನೆಂದು ನಂಬಿಸಿ ಅಂಥವರನ್ನೇ ಮತ್ತೆ ವಂಚಿಸಿ ಬೀದಿಪಾಲು ಮಾಡುವುದು ಯಾವ ಮಾನವ ಹಕ್ಕು ಹೋರಾಟ?

ಪಾಪದ ಕೊಡ ತುಂಬದೇ ಹೋಗಿದ್ದರೆ ವಿವೇಕಾನಂದ ಇನ್ನೆಷ್ಟು ಹೆಣ್ಣುಮಕ್ಕಳ ಕಣ್ಣೀರಿಗೆ ಮೂಲವಾಗುತ್ತಿದ್ದನೊ. ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಒಂದಲ್ಲ ನಾಲ್ಕು ವಂಚನೆ ಕೇಸು, ಯಲಹಂಕ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಕ್ರಿಮಿನಲ್ ಕೇಸು, ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪೆಟ್ರೋಲ್ ಬಂಕ್ ದಾಬರಿ ಕೇಸು ಸೇರಿದಂತೆ ಬರೋಬ್ಬರಿ ಒಂದು ಡಜನ್ ಕೇಸಿನಲ್ಲಿ ಸದ್ಯ ವಿವೇಕಾನಂದ ಆರೋಪಿ. ಉಪ್ಪಾರಪೇಟೆ ಪೊಲೀಸರು ಹಿಡಿದು ಜೈಲಿಗೆ ಹಾಕಿದ್ದರಿಂದಾಗಿ ಹದಿನೈದು ದಿನಗಳ ಕಾಲ ಕಂಬಿ ಎಣಿಸಿದ ವಿವೇಕಾಂದನಿಗೆ ಕೋರ್ಟು ಜಾಮೀನು ಕೊಟ್ಟದೆಯಾದರೂ ಸ್ವಾಗತಕ್ಕೆ ರೌಡಿ ಪೀಟು ಕಾದಿದೆಯಲ್ಲ-

ನತದೃಷ್ಟ ಹೆಣ್ಣುಮಕ್ಕಳ ಕಣ್ಣೀರು ಹೇಗೆ ಶಾಪವಾಗಿ ಸುಡುತ್ತದೆಯಲ್ಲವೇ?



ಉತ್ತರ ಕನ್ನಡ: ಚೆಡ್ಡಿ ಮಂತ್ರಿ ಕಾಗೇರಿ ಕಳ್ಳಾಟ!

ವಿತನ ಗೆಟಪ್‌ನಲ್ಲಿ ಅಂಡಲೆವ ಉತ್ತರ ಕನ್ನಡದ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಬಣ್ಣ ಬಯಲಾಗಿ ಹೋಗಿದೆ! ರಾಜ್ಯದ ಶಿಕ್ಷಣ ಆಗಿರುವ ಈ ಅಪ್ಪಟ ಚೆಡ್ಡಿ ಚತುರನ ಶಗಳು ತವರು ಜಿಲ್ಲೆಯಲ್ಲೇ ಒಂದೊಂದಾಗಿ ತ್ತಿವೆ. ಕಂಡಕಂಡಲ್ಲಿ ಬಾಯಿಹಾಕಿ ಮುಕ್ಕುತ್ತಿರುವ ಹಣದ ಹಪಾಹಪಿ ಕಂಡು ಜನ ದಂಗಾಗಿ . ಈ ಮಾಣಿ ಹಡಬೆಯಲ್ಲ ಎಂದು ವಿಪರೀತ ಡಿಸಿಕೊಂಡಿದ್ದವರೆಲ್ಲ ಈಗ ಅಸಲೀ ಆರೆಸ್ಸೆಸ್ ಗೇರಿ ಥರವೇ ಸೊಫೆಸ್ಟಿಕೇಟೆಡ್ ಕಳ್ಳರಿರಬೇಕೆಂದು ಳ್ಳುತ್ತಿದ್ದಾರೆ.

ಮಂತ್ರಿಯಾಗಲು ಹಾಕಿದ ತುಂಡುಗುಪ್ಪಳ ಲ್ಲ! ಸ್ವಪಕ್ಷದ ಶೂದ್ರ ಶಿವಾನಂದ ನಾಯ್ಕ ತನ್ನ ಆಸೆಗೆ ಅಡ್ಡಬರುತ್ತಾನೆಂದು ಆತನ ವಿರುದ್ಧ ಗರ ಬಳಗದಿಂದ 'ಮಾಟ-ಮಂತ್ರ' ಮಾಡಿಸಿ ರಂತೆ ಮಾಡಿದ್ದು ಇನ್ನೂ ಜಿಲ್ಲೆಯ ಅಬ್ರಾಹ್ಮಣರು ಕೇಶವಕೃಪದಲ್ಲಿ ಕುಳಿತು ಅತ್ತೂಕರೆದೂ ದ ಕಾಗೇರಿ ಈ ಎರಡು ವರ್ಷದಲ್ಲಿ ಜಿಲ್ಲೆಯ ಯೂರು ಬಿಲ್ಲಿ ಕೆಲಸವೂ ಮಾಡಿಲ್ಲ, ಹಾಗಂತ ೇವಾದೇವಿ-ಬೇನಾಮಿ ದಂಧೆಗಳಿಂದ ಸ್ವಂತ ಮಾತ್ರ ಇನ್ನಷ್ಟು ವೃದ್ಧಿಸಿಕೊಂಡಿದ್ದಾರೆ ಕಾಗೇರಿ .

ಲೇವಾದೇವಿ ಮಂತ್ರಿ

ಗಿರಿಯ ಮೊದಲ ಟ್ರಾನ್ಸ್‌ಫರ್ ಸುಗ್ಗಿಯಲ್ಲಿ ಡಿದ ಕುತ್ತಿಗಳಿಗೆ ಲೆಕ್ಕವೇ ಇಲ್ಲ! ತಮ್ಮನ ವಲ್ಲೊಂದು ವರ್ಗಾವರ್ಗಿ ಅಂಗಡಿ ತೆರೆದಿದ್ದ ನಾಗರಾಜ್ ನಾಯ್ಕನಂಥ ಗೋಲ್‌ಮಾಲ್ ನ್ನ ಆಯಕಟ್ಟಿನ ಜಾಗದಲ್ಲಿ ತಂದುಕೂರಿಸಿದ್ದರು. ತವರು ಕ್ಷೇತ್ರ ಸಿದ್ದಾಪುರ ಲೋಕೋಪಯೋಗಿ "ಕಾಯಂಪ್ರಭಾರ" ಎಇಇ ಆಗಿರುವ ಈ ನಾಗ ಹಗಲು ದರೋಡೆ ಮಾಡುತ್ತಿದ್ದಾನೆ. ಖದೀಮನ ಕಾಪಾಡುತ್ತಿದ್ದಾರೆ! ಈಗೀಗಂತೂ ಾಫಿಯಾದಿಂದ ಜಿಲ್ಲಾ ಉಸ್ತುವಾರಿ ಮಂತ್ರಿ ಮಂತ್ಲಿ ಕೋಟಿ ಬರುತ್ತಿರುವ ಸುದ್ದಿ ಜಿಲ್ಲೆಯಾದ್ಯಂತ ವೆ. ಹಾಗಾಗಿ ಕಾಗೇರಿ ಅದಿರು ಲಾರಿಗಳು ಸುತ್ತ ಅಮಾಯಕರ ಪ್ರಾಣ ನುಂಗುತ್ತಿದ್ದರೂ ು ಮುಚ್ಚಿಕೊಂಡು ಹಾಗೇ ಸುಮ್ಮನಿದ್ದಾರೆ!

ಪರ್ಸೆಂಟೇಜ್ ಪರಾಕ್ರಮಿ

ಶ್ರೀಮಂತನಾದ ಕಾಗೇರಿ ಹಿಂದೆ ಸತತ ಾರಿ ಶಾಸಕನಾಗಿದ್ದು "ಮಿಸ್ಟರ್ ಕ್ಲೀನ್" ಎಂಬ ಂದು ಇಮೇಜಿನಿಂದಾಗಿತ್ತು. ಯಲ್ಲಾಪುರದ ನಿಗೆ ಹಣ ಪಡೆದು ಗ್ಯಾಸ್ ಏಜೆನ್ಸಿ ಕೊಡಿಸಿದ್ದಾನೆ, ಸರಲ್ಲೊಂದು ವಾಜಪೇಯಿಯ ವಿವಾದಾಸ್ಪದ ಪೆಟ್ರೋಲ್ ಬಂಕ್ ಮಾಡಿಕೊಂಡಿದ್ದಾನೆಂಬ ತೀರಾ ಎಂಜಲು ಕಾಸಿಗೆಲ್ಲ ಕೈಯೊಡ್ಡಿದ್ದ ರಲಿಲ್ಲ. ಆದರೆ ಮಂತ್ರಿಯಾಗುತ್ತಲೇ ಕಾಗೇರಿಗೆ ಶಂಕ ಮೆತ್ತಿಕೊಳ್ಳುತ್ತಲೇ ಇದೆ....

ಯ ಕಾಸು ಮಾಡುವ ಖಯಾಲಿ ಆತನೆದೇ -ಸ್ವಜಾತಿ ಬಂಧು ಅನಂತಕುಮಾರ್ ಹೆಗಡೆಯೇ ಡಿಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಅವ್ಯವಹಾರ ಶಿಕ್ಷಾ ಅಭಿಯಾನವೆಂಬ ಸ್ಕೀಮಿನಲ್ಲಿ ಕಾಗೇರಿ ಮಾಡಿದ್ದಾರೆಂದು ಸಂಸದ ಅನಂತ್ಕಾಣಿ ಬಡಕೊಂಡು ಬೊಬ್ಬೆ ಹೊಡೆದಿದ್ದಾರೆ. ಕೇಂದ್ರದ ರೂಪಾಯಿ ಅನುದಾನದ ಈ ಸರ್ವಶಿಕ್ಷಾ ನಲ್ಲಿ ನಡೆದಿರುವ ಭ್ರಷ್ಟಾಚಾರವಿದೆಯಲ್ಲ, ಅದು ಗೆ ಕೊಡುವಂಥ ಸ್ಕ್ಯಾಂಡಲ್! ಶಾಲೆಗಳಿಗೆ ೀಕೋಪಕರಣ, ವಿಜ್ಞಾನ-ಭೂಗೋಳ ಪರಿಕರ ಯ ಶೈಲೇಶ್ ನಾಯ್ಕನೆಂಬ ದಗಾಕೋರ ಆಸಾಮಿಗೆ ಟೆಂಡರ್ ಕೊಟ್ಟಿರುವುದೇ ಕೋಟಿ-ಕೋಟಿಗಳ ಕರ್ಮಕಾಂಡ. "ಓ ಮಲ್ಲಿಗೆ" ಸಿನಿಮಾ ನಿರ್ಮಾಪಕನಾದ ಈ ಶೈಲೇಶ್ ನಾಯ್ಕ ಅಧಿಕಾರಿಗಳಿಗೆ-ಮಂತ್ರಿಗಳಿಗೆ ಪರ್ಸೆಂಟೇಜ್ ಕೊಟ್ಟು ಪಳಗಿಸುವ ವಿದ್ಯೆ ತುಂಬ ಹಿಂದಿನಿಂದ ಕರಗತ ಮಾಡಿಕೊಂಡು ದಂಧೆ ನಡೆಸುತ್ತಿದ್ದಾನೆ. ಈತನ "ವೈಭವ ಇಂಡಸ್ಟ್ರೀ" ಪೂರೈಸಿರುವ ಕಳಪೆ ಫರ್ನೀಚರ್-ಬೋಧಕ ಪರಿಕರಗಳು ಇವತ್ತಿಗೂ ಶಾಲೆಯಲ್ಲಿ ಕೆಲಸಕ್ಕೆ ಬಾರದೇ ಬಿದ್ದುಕೊಂಡಿವೆ. ಶಿಕ್ಷಣವನ್ನು ಕೇಸರೀಕರಣ ಮಾಡುವ ಹಿಡನ್ ಅಜೆಂಡಾ ಇಟ್ಟುಕೊಂಡಿರುವ ಈ ಶುದ್ಧ ವೈದಿಕವಾದಿ ಕಾಗೇರಿ ಇನ್ನೊಂದೆಡೆ ಅಪರಾತಪರಾ ವ್ಯವಹಾರವನ್ನೂ ತುಂಬ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ.

ವಿರೋಧ ಪಕ್ಷದಲ್ಲಿದ್ದಾಗ ಪಾರದರ್ಶಕತೆ-ಪ್ರಾಮಾಣಿಕತೆ ಬಗ್ಗೆ ಉದ್ದುದ್ದ ವ್ಯಾಖ್ಯಾನ ಕೊಡುತ್ತಿದ್ದ ಈ ನಾಜೂಕಯ್ಯ ಲ್ಯಾಂಡ್ ಆರ್ಮಿ ಮತ್ತು ಕಾಳಿ ನಿರ್ಮಿತಿ ಕೇಂದ್ರ ಎಂಬ ಬೋಗಸ್ ಏಜೆನ್ಸಿಗಳಿಗೆ ಬರೋಬ್ಬರಿ 100 ಕೋಟಿ ರೂ. ಕಾಮಗಾರಿ ವಹಿಸಿರುವುದು ಅನೇಕ ಅನುಮಾನ ಹುಟ್ಟುಹಾಕಿದೆ! ಲ್ಯಾಂಡ್ ಆರ್ಮಿ ಕಳಪೆ ಕಾಮಗಾರಿ-ಅವ್ಯವಹಾರಕ್ಕೆ ಫೇಮಸ್ ಆಗಿದ್ದರೆ, ಕಾಳಿ ನಿರ್ಮಿತಿ ಕೇಂದ್ರದಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್‌ಗಳೇ ಇಲ್ಲ!

ದೊಡ್ಡ ಕಾಮಗಾರಿ ಮಾಡುವ ಅರ್ಹತೆ, ಸಾಮರ್ಥ್ಯ ಈ ನಿರ್ಮಿತಿ ಕೇಂದ್ರಕ್ಕೆ ಇಲ್ಲ ಜಿಲ್ಲಾಧಿಕಾರಿ ಅರ್ಥಾತ್ ಜಿಲ್ಲಾ ಮಂತ್ರಿ ಕಾಗೇರಿಯ ನೇರ ಆಡಳಿತಕ್ಕೆ ಒಳಪಡುವ ಈ ಏಜೆನ್ಸಿಗಳಲ್ಲಿ ನಡೆವ ಅವ್ಯವಹಾರ-ಕಳಪೆ ಕಾಮಗಾರಿ ಅಷ್ಟು ಸುಲಭಕ್ಕೆ ಸಾರ್ವಜನಿಕರ ಕಣ್ಣಿಗೂ ಬೀಳದು. ಸದ್ರಿ ಲ್ಯಾಂಡ್ ಆರ್ಮಿ ಮತ್ತು ಕಾಳಿ ನಿರ್ಮಿತಿ ಕೇಂದ್ರಕ್ಕೆ ಇಲ್ಲ, ಜಿಲ್ಲಾಧಿಕಾರಿ ಅರ್ಥಾತ್ ಜಿಲ್ಲಾ ಮಂತ್ರಿ ಕಾಗೇರಿಯ ನೇರ ಆಡಳಿತಕ್ಕೆ ಒಳಪಡುವ ಈ ಏಜೆನ್ಸಿಗಳಲ್ಲಿ ನಡೆವ ಅವ್ಯವಹಾರ-ಕಳಪೆ ಕಾಮಗಾರಿ ಅಷ್ಟು ಸುಲಭಕ್ಕೆ ಸಾರ್ವಜನಿಕರ ಕಣ್ಣೀಗೂ ಬೀಳದು. ಸದ್ರಿ ಲ್ಯಾಂಡ್ ಆರ್ಮಿ ಮತ್ತು ಕಾಳಿ ನಿರ್ಮಿತಿ ಕೇಂದ್ರಕ್ಕೆ ವಹಿಸಿರುವ ಕಾಮಗಾರಿಗಳಿಂದ ಮಂತ್ರಿಗಳಿಗೆ ಶೇ. 10 ಪರ್ಸೆಂಟೇಜ್ ಸಿಕ್ಕಿದೆ ಎಂಬುದು ಟಾಕ್ ಆಫ್ ದಿ ಡಿಸ್ಟ್ರಿಕ್ಟ್ ಸಮಾಚಾರ. 100 ಕೋಟಿಗೆ ಶೇಕಡಾ. 10 ಅಂದರೆ ಎಷ್ಟು ಕೋಟಿ ಮಂತ್ರಿ ಜೋಳಿಗೆ ಬಿದ್ದಿದೆ ಎಂದು ನೀವೇ ಲೆಕ್ಕಹಾಕಿ!

ಖರೀದಿ! ಖರೀದಿ!

ಹೀಗೆ ಅನಾಯಾಸವಾಗಿ ಬಂದು ಬೀಳುತ್ತಿರುವ ಕೋಟಿ-ಕೋಟಿ ಕಾಸು ಬ್ರಾಹ್ಮಣ ಮನೆತನದ ಮಾಣಿ ಕಾಗೇರಿ ಇಡುವುದಾದರೂ ಎಲ್ಲಿ? ಹಾಗಾಗಿ ಈ ದೋ ನಂಬರ್ ದುಡ್ಡನ್ನು ಬೇನಾಮಿ ಕಾಂಪ್ಲೆಕ್ಸ್-ಭೂಮಿ ಖರೀದಿಯಲ್ಲಿ ತೊಡಗಿಸಲಾಗುತ್ತಿದೆ. ಕೆಲವು ತಿಂಗಳ ಹಿಂದೆ ಶಿರಸಿಯ ಕಳವೆ-ಬರೂರು ಎಂಬಲ್ಲಿ ಮಂತ್ರಿಗಳ ಹತ್ತಿರದವರು ಒಂದೂವರೆ ಕೋಟಿಗೆ ತೋಟ-ಫಾಲ್ಸ್ ಇರುವ ಜಮೀನು ಖರೀದಿಸಿದ್ದರು. ಇಲ್ಲೊಂದು ರೆಸಾರ್ಟ್ ಕಟ್ಟುವ ಕನಸು ಮಂತ್ರಿಜೀ ಹೆಣೆದಿದ್ದರಂತೆ. ಹಾಗೆಯೇ ಸಚಿವರ ಕಡೆಯವರಿಗೆ ಅಪಾರ ಬೆಲೆಬಾಳುವ ರೆವಿನ್ಯೂ ಲ್ಯಾಂಡೂ ಗ್ರ್ಯಾಂಟಾಗಿದೆ. ಇತ್ತೀಚೆಗಷ್ಟೇ ಸಿರ್ಸಿಯ ಹೃದಯ ಭಾಗದಲ್ಲಿ ಕೋಟಿಗಳ ಮೊತ್ತದ ಕಾಂಪ್ಲೆಕ್ಸ್‌ವೊಂದು ಖರೀದಿ ಮಾಡಲಾಗಿದೆ ಎಂಬ ಚರ್ಚೆ ಸಿರ್ಸಿಯಾದ್ಯಂತ ನಡೆಯುತ್ತಿದೆ.

ಒಂದೆಡೆ ತನ್ನ ಖಾಸಗಿ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿರುವ ಕಾಗೇರಿ ಇನ್ನೊಂದೆಡೆ ಉತ್ತರ ಕನ್ನಡ ಒಡೆದು ಸ್ವಜಾತಿ ಹೈಗರ ಸೀಮೆ ಕಟ್ಟುವ ರಹಸ್ಯ ಕಾರ್ಯಾಚರಣೆ ನಡೆಸಿದ್ದಾರೆ. ಘಟ್ಟದ ಮೇಲಿನ ತಾಲ್ಲೂಕುಗಳ ಆಡಳಿತ ನಿಧಾನಕ್ಕೆ ಕಾರವಾರದಿಂದ ತಪ್ಪಿಸಿ ಶಿರಸಿ ಕೇಂದ್ರ ಮಾಡಿಕೊಳ್ಳುವ ಸ್ಕೆಚ್ ಕಾಗೇರಿ ಹಾಕಿದ್ದಾರೆ. ಈಚೆಗಷ್ಟೇ ಶಿರಸಿಗೊಂದು ಪ್ರತ್ಯೇಕ ಡಿಡಿಪಿಐ ಕಚೇರಿ ತಂದಿರುವ ಕಾಗೇರಿ ಜಿಲ್ಲಾ ಸಣ್ಣ ನೀರಾವರಿ ಇಲಾಖೆಯ ಆಫೀಸು ಹಳಿಯಾಳದಿಂದ ಸಿರ್ಸಿಗೆ ತರಲು ತರಲೆ ಮಾಡಿ ಸುಪ್ರಸಿದ್ಧರಾಗಿದ್ದರು. ಜೋಯಿಡಾ ತಾಲ್ಲೂಕನ್ನು ಕಾರವಾರ ಜಿಪಂ ಇಂಜಿನಿಯರ್ ಕಚೇರಿಯಿಂದ ತಪ್ಪಿಸಿ ಸಿರ್ಸಿಗೆ ಸೇರಿಸಿದ್ದಾರೆ. ಸಣ್ಣ-ಸಣ್ಣ ಜಿಲ್ಲೆಗಳ ಪರಿಕಲ್ಪನೆ ತಪ್ಪೇನೂ ಅಲ್ಲ, ಆದರೆ ಹೈಗರ ಜಿಲ್ಲೆ ಮಾಡಿ ಅದರ ಅಧಿಪತಿ ತಾನಾಗುವ ಕಾಗೇರಿ ಕಿತಾಪತಿ ಅಪಾಯಕಾರಿ!!

ಪ್ರವಾಸೋದ್ಯಮಿ ಕಾಗೇರಿ ಮಾಣಿ

ಮಂತ್ರಿಗಿರಿ ಬಲ, ಸರ್ಕಾರಿ ಸಂಪತ್ತು-ಸೌಲಭ್ಯ ಬಳಸಿಕೊಂಡು ಏನೇನು ಉದ್ಯಮ ಮಾಡಲು ಸಾಧ್ಯವೋ ಅದೆಲ್ಲ ಮಾಡಿ ಹಣ ಮಾಡುವ ತರಾತುರಿಯಲ್ಲಿ ಮಿನಿಸ್ಟರ್ ಕಾಗೇರಿ ಸಾಹೇಬರಿದ್ದಾರೆ! ಉತ್ತರ ಕನ್ನಡ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದ ಪ್ರಕೃತಿ ಸೊಬಗಿನ ತಾಣ. ಕಾಗೇರಿಯ ಶಿರಸಿಯ ಸುತ್ತಲೇ ಅನೇಕ ಜಲಪಾತ, ಪಕ್ಷಿಧಾಮ, ಐತಿಹಾಸಿಕ ಬನವಾಸಿ, ಸಹಸ್ರಲಿಂಗ, ಸುಪ್ರಸಿದ್ಧ ಮಾರಿಕಾಂಬಾ ದೇವಾಲಯ, ಅನತಿ ದೂರದಲ್ಲೇ ಜಗದ್ವಿಖ್ಯಾತ ಜೋಗ್ ಫಾಲ್ಸ್‌ಗಳೆಲ್ಲ ಇದೆ. ಇದೆಲ್ಲ ಬಳಸಿಕೊಂಡು ತಾನ್ಯಾಕೆ ಬೇನಾಮಿ ಪ್ರವಾಸೋದ್ಯಮಿ ಆಗಬಾರದೆಂಬ ತೆವಲು ಕಾಗೇರಿಗೆ ಕಾಡುತ್ತಿದೆ....

ಕಳವೆ ಎಂಬಲ್ಲಿ ಕೊಂಡಿದ್ದ ಜಮೀನಿನ ಸುತ್ತ ನದಿ-ಕೊಳ್ಳ-ಜಲಪಾತ-ತೋಟ- ದಟ್ಟ ಕಾಡು ಇವೆ. ಇಲ್ಲಿ ರೆಸಾರ್ಟ್ ಕಟ್ಟುವ ಕನಸು ಕಾಗೇರಿಗಿತ್ತು, ಆದರೆ ರೆಸಾರ್ಟ್‌ಗಿಂತ ಹೋಮ್ ಸ್ಟೇ ಕಾಟೇಜ್‌ಗಳು ಲಾಭದಾಯಕವೆಂದು ಆತನ ಪರಿಸರ-ಪ್ರವಾಸೋದ್ಯಮ ಸಲಹೆಗಾರ ಶಿವಾನಂದ ಕಳವೆ ಮತ್ತಿತರರು ಮಂತ್ರಿಜೀಗೆ ನೀಡಿದರು. ಸಚಿವರು ರೈಟ್ ಎಂದರು. ಸರ್ಕಾರದ ಹಣ ಹೊಡೆಯಲು ಸ್ವಯಂ ಸೇವಾ ಸಂಸ್ಥೆಯೊಂದು ಕಟ್ಟುವ ನಿರ್ಧಾರವೂ ರಾತ್ರಿ ಬೆಳಗಾಗುವುದರಲ್ಲಾಯ್ತು, ಕಾಗೇರಿಗೆ ಸಂಬಂಧದಿಂದ ಅಳಿಯನಾಗುವ ಸುಹಾಸ ಹೆಗಡೆ ಎಂಬಾತನ ಅಧ್ವರ್ಯದ "ಹೋರಾ" ಎಂಬ ಸ್ವಾಹಾ ಎನ್‌ಜಿಓ ಹುಟ್ಟಿಕೊಂಡಿತು.

ಪ್ರವಾಸೋದ್ಯಮ ಇಲಾಖೆಯ ಹಣ ಹೊಡೆಯಲು ಈ ಸರ್ಕಾರೇತರ ಸಂಸ್ಥೆಯ ಹೆಗಡೆ-ಕಳವೆಗಳು "ಸಂಸ್ಕೃತಿ ಸಂಚಯ" ಎಂಬ ಪ್ರಾಜೆಕ್ಟ್‌ವೊಂದನ್ನು ತಯಾರು ಮಾಡಿದರು. ಮಂತ್ರಿ ಕಾಗೇರಿ ಈ ಪ್ರಾಜೆಕ್ಟ್ ಹಿಡಿದುಕೊಂಡು ಬೆಂಗಳೂರಲ್ಲಿ ಕರಾಮತ್ತು ಮಾಡಿದರು. ಮಂತ್ರಿಗಳ ಇನ್‌ಫ್ಲೂಯೆನ್ಸ್ ಎಂದರೆ ಕೇಳಬೇಕೆ? ತಕ್ಷಣವೇ ಪ್ರವಾಸೋದ್ಯಮದ ಬಗ್ಗೆ ಅರಿವು ಜಾಗೃತಿ ಮೂಡಿಸುವ, ಉಪನ್ಯಾಸ, ಸಭೆ ಪ್ರವಾಸಿತಾಣಗಳ ಪರಿಚಯದಂಥ ಕಾರ್ಯಕ್ರಮಕ್ಕೆಂದು ಹೋರಾ ಫೌಂಡೇಷನ್‌ಗೆ 20 ಲಕ್ಷ ಜಿಲ್ಲಾಧಿಕಾರಿ ಸ್ಯಾಂಕ್ಷನ್ ಮಾಡಿದರು. ಜತೆಜತೆಗೇ ಒಂದ್ಹತ್ತು ಲಕ್ಷ ಹೆಗಡೆ-ಕಳವೆ ಕೈಗೂ ಕೊಟ್ಟುಬಿಟ್ಟರು!

ಇದೊಂದು ಪಕ್ಕಾ ಬೋಗಸ್ ಪ್ರಾಜೆಕ್ಟ್; ಸರ್ಕಾರಕ್ಕೆ ವಂಚಿಸಿ ಹಣ ಲಪಟಾಯಿಸಲೆಂದೇ ಮಾಡಿರುವ ಯೋಜನೆ. ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರವಾಸಿತಾಣಗಳ ಪರಿಚಯಿಸುವ, ಪ್ರವಾಸಿ ತಾಣಗಳಲ್ಲಿ ಹೇಗೆ ವರ್ತಿಸಬೇಕೆಂದು ಉಪದೇಶ ಮಾಡುವ ಒಣ ಭಾಷಣ ಕಾರ್ಯಕ್ರಮಗಳಿಗೆಂದೇ 20 ಲಕ್ಷವನ್ನೂ ಮಂಜೂರಿ ಪ್ರವಾಸೋದ್ಯಮ ಇಲಾಖೆ ಕಾಗೇರಿಯ ಬೇನಾಮಿ ಸಂಸ್ಥೆ "ಹೋರಾ"ಕ್ಕೆ ಮಂಜೂರಿ ಮಾಡಿದೆ. ಉತ್ತರ ಕನ್ನಡದ ಟೂರಿಸಮ್ ಅವೇರ್‌ನೆಸ್‌ಗೆಂದು ಪ್ರವಾಸೋದ್ಯಮ ಇಲಾಖೆಯಿಂದ ಕಾಗೇರಿ ಬರೋಬ್ಬರಿ 50 ಲಕ್ಷ ಸ್ಯಾಂಕ್ಷನ್ ಮಾಡಿಸಿದ್ದಾರೆ. ಇದೆಲ್ಲಾ 'ಹೋರಾ' ಒಂದೇ ಗುಳುಂ ಮಾಡುವುದು ಗ್ಯಾರಂಟಿ.

ಅದಿರಲಿ, ವಿದ್ಯಾರ್ಥಿಗಳಿಗೆ ಪ್ರವಾಸೋದ್ಯಮದ ಬಗ್ಗೆ ಕ್ಲಾಸ್ ಮಾಡಿದರೆ ಪ್ರವಾಸೋದ್ಯಮ ಬೆಳೆಯುತ್ತದಾ? ಜಿಲ್ಲೆಯ ಹಲವು ಪ್ರಕೃತಿ ತಾಣಗಳಿಗೆ ಹೋಗಲು ಸರಿಯಾದ ರಸ್ತೆ ಇನ್ನಿತರ ಮೂಲಭೂತ ಸೌಕರ್ಯಗಳೇ ಇಲ್ಲ. ಯಾಣದಂಥ ಕಡೆ ಹೋಗಲು ಮಾಡಿದ ಕೋಟಿ ರೂ. ರಸ್ತೆ ಒಂದೇ ಮಳೆಗಾಲಕ್ಕೆ ಚಿಂದಿ ಎದ್ದುಹೋಗಿದೆ. ಈ ಕಳಪೆ ಕಾಮಗಾರಿ ದುಷ್ಟ ಕಂಟ್ರಾಕ್ಟರ್-ಭ್ರಷ್ಟ ಇಂಜಿನಿಯರ್‌ಗಳಿಗೆ ಕಾಸು ಮಾಡಿಕೊಟ್ಟಿದೆ. ಇಂಥದರ ಕಡೆ ಗಮನ ಹರಿಸದೆ ಟೂರಿಸಂ ಅನ್ನು ವಿದ್ಯಾರ್ಥಿಗಳಿಗೆ ಗಂಟುಹಾಕಿ ಸರ್ಕಾರಿ ಹಣ ಹೊಡೆವ 'ಹೋರಾ' ಹುಟ್ಟುಹಾಕಿರುವ ಕಾಗೇರಿಯ ಅಸಲೀ ದೇಶಭಕ್ತಿಗೆ ಇನ್ನೇನು ಸಾಕ್ಷಿ ಬೇಕು? ಕಾಗೇರಿಯ ಕರೆಪ್ಷನ್‌ಗೆ ಇನ್ನೇನು ಪುರಾವೆ ಬೇಕು?

"ಹೋರಾ"ದ ವಂಚಕ ಕಾಗೇರಿ ಬಂಧುಗಳ ಮೂಲ ಉದ್ದೇಶ ಕಳವೆಯಲ್ಲಿ ಹೋಮ್ ಸ್ಟೇ ಕಾಟೇಜುಗಳನ್ನು ಕಟ್ಟಿ ದುಡ್ಡು ಮಾಡುವುದಾಗಿತ್ತು, ಅದಕ್ಕೆ ಸಂಸ್ಕೃತಿ ಸಂಚಯ, ಪ್ರವಾಸೋದ್ಯಮ ಜಾಗೃತಿ ಉಪನ್ಯಾಸ ಎಂಬ ಬೋಗಸ್ ಪ್ರಾಜೆಕ್ಟ್ ತಯಾರಿಸಿದ್ದರು. ಕಾಗೇರಿಯ ಸಂಬಂಧಿ ಸುಹಾಸ್ ಹೆಗಡೆ ಎಂಬ "ಹೋರಾ"ದ ಹೀರೇಮಣಿ, ಶಿವಾನಂದ ಕಳವೆ ಎಂಬ ಪ್ರವಾಸೋದ್ಯಮ ಪ್ರವೀಣನಿಂದ ಒಂದಿಷ್ಟು ಶಾಲೆಗಳಲ್ಲಿ ಭಾಷಣ ಮಾಡಿಸಿ ಕಾರ್ಯಕ್ರಮಗಳ ಪೇಪರ್ ಕಟ್ಟಿಂಗ್ಸ್ ಫೈಲು ಸೃಷ್ಟಿ ಮಾಡಿದ್ದ! ಆ ಫೈಲು ಡಿಸಿಗೆ ತೋರಿಸಿ ಇಪ್ಪತ್ತು ಲಕ್ಷ ತರಲಾಗಿತ್ತು.

ಈ ಹಣವೇ ಕಳವೆಯ ಕಾಟೇಜುಗಳ ನಿರ್ಮಾಣಕ್ಕೆ ಬಳಸಲಾಗಿದೆ. ಸರ್ಕಾರಕ್ಕೆ ಪಂಗನಾಮಹಾಕಿ ಪುಗಸಟ್ಟೆ ಕಾಟೇಜು ಕಟ್ಟಿಕೊಂಡು ದೋಖಾ ದಂಧೆಗಿಳಿದಿರುವ ಕಾಗೇರಿ ಗ್ಯಾಂಗ್ ಇನ್ನುಳಿದ 30 ಲಕ್ಷ ಲಪಟಾಯಿಸಲು ಹವಣಿಸುತ್ತಿದ್ದಾರೆ. ಸರ್ಕಾರಿ ದುಡ್ಡು ಕಾಗೇರಿ ಸಾಹೇಬ್ರ ಜಾತ್ರೆ ಎಂದು ಜನ ಬಿದ್ದು ಬಿದ್ದು ನಗುತ್ತಿದ್ದಾರೆ!

ಕಳ್ಳ ಬೆಕ್ಕು ಕಾಗೇರಿಗೆ ಗಂಟೆ ಕಟ್ಟುವವರು ಯಾರು? ಆ ಧೈರ್ಯ ಸಿಎಂ ಯಡ್ಡಿಗೆ ಇಲ್ಲ ಬಿಡಿ. ಕೇಶವಕೃಪದ ಆರೆಸೆಸ್ "ಗುರು"ಗಳಿಗೆ ತನ್ನ ಕಬಳಿಕೆಯ ದೊಡ್ಡ ಪಾಲು ದಕ್ಷಿಣೆಯಾಗಿ ಕೊಡುವ ಕಾಗೇರಿ ಸದಾ ಸೇಫ್! ಉತ್ತರ ಕನ್ನಡ ಮಾತ್ರ ಕಾಗೇರಿ ಕಾಲದಲ್ಲಿ ಇನ್ ಡೇಂಜರ್!

● ನಹುಶ



ಗೋಹತ್ಯೆ ಮತ್ತು ಗೋಮುಖ ವ್ಯಾಘ್ರಗಳು



ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ 'ಗೋಹತ್ಯೆ ನಿಷೇಧ ಮಸೂದೆ-2010' ಕ್ಕೆ ರಾಜ್ಯಾದ್ಯಂತ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಗೋಮಾಂಸ ಹೇಗೆ ಹಿಂದಿನ ಕಾಲದಲ್ಲಿ ಬ್ರಾಹ್ಮಣರಿಗೆ ಅಗತ್ಯವಾಗಿತ್ತೋ ಹಾಗೆಯೇ ಇಂದು ಹಲವು ವರ್ಗದ ಜನರಿಗೆ ಮತ್ತು ಪ್ರಾಣಿಗಳಿಗೂ ಅಗತ್ಯವಾಗಿದೆ ಎಂದು ಬಿಂಬಿಸುವ ಲೇಖನಗಳು ಇಲ್ಲಿವೆ. ಜೊತೆಗೆ ಗೋಸಂಪತ್ತು ಮತ್ತು ಪರಿಸರ ರಕ್ಷಣೆ ಕುರಿತಂತೆ ಇನ್ನೊಂದು ಪ್ರತಿಕ್ರಿಯೆ ಇದೆ.

ಗೋಹತ್ಯೆ ನಿಷೇಧ ಮತ್ತು ಸಂಗ್ರಹಾಲಯದ ಮೃಗಗಳ ಆಹಾರ ಕ್ರಮ

ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಮಸೂದೆಯು ಜಾರಿಗೆ ಬಂದಲ್ಲಿ ಅದರ ನೇರ ಪರಿಣಾಮವು ರಾಜ್ಯದಲ್ಲಿರುವ ವಿವಿಧ ವನ್ಯಜೀವಿ ಸಂಗ್ರಹಾಲಯದ ಮೃಗಗಳ ಆಹಾರ ಕ್ರಮದ ಮೇಲೆಯೂ ಆಗಲಿದೆ ಎನ್ನುವುದು [illegible] ಆತಂಕ.

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದರೆ ರಾಜ್ಯದಲ್ಲಿನ ವಿವಿಧ ವನ್ಯಜೀವಿ ಸಂಗ್ರಹಾಲಯಗಳಲ್ಲಿನ ಮೃಗಗಳಿಗೆ ಆಹಾರ ಪೂರೈಕೆಯಲ್ಲಿ ಭಾರಿ ದೊಡ್ಡ ತೊಡಕು ಉಂಟಾಗಲಿದೆ. ಈಗ ಅನುಸರಿಸಿಕೊಂಡು ಬರುತ್ತಿರುವ ಆಹಾರ ಕ್ರಮವನ್ನು ಸಂಪೂರ್ಣವಾಗಿ ಬದಲಾಯಿಸುವುದೂ ಅನಿವಾರ್ಯವಾಗುತ್ತದೆ. ಇದರಿಂದ ವನ್ಯಜೀವಿ ಸಂಗ್ರಹಾಲಯದಲ್ಲಿನ ವನ್ಯಮೃಗಗಳಿಗೆ (ಹುಲಿ, ಸಿಂಹ, ಚಿರತೆ [illegible] ಮಾಂಸಾಹಾರಿ ಪ್ರಾಣಿಗಳು) ಅನೇಕ ರೀತಿಯ ದೈಹಿಕ ಸಮಸ್ಯೆಗಳು ಎದುರಾಗುವ ಅಪಾಯವಿದೆ. ಇದನ್ನು ವನ್ಯಜೀವಿಗಳ ಚಿಕಿತ್ಸೆಯಲ್ಲಿ [illegible] ವೈದ್ಯರೇ ಸ್ಪಷ್ಟವಾಗಿ ತಿಳಿಸಿದ್ದಾರೆ.

ಹಸು, ಕರು, ಎತ್ತು, ಎಮ್ಮೆ ಹಾಗೂ ಕೋಣ ಯಾವುದರ ಪೂರೈಕೆಗೂ ಅವಕಾಶ ಇಲ್ಲದ ಸಂದರ್ಭದಲ್ಲಿ ಬೇರೊಂದು ಆಹಾರ ಕ್ರಮವನ್ನು ಸಂಗ್ರಹಾಲಯದ ವನ್ಯಮೃಗಗಳಿಗಾಗಿ ರೂಪಿಸಬೇಕಾಗುತ್ತದೆ. ಗೋವು, ಎಮ್ಮೆ ಹಾಗೂ ಕೋಣದ ಪೂರೈಕೆ ಇಲ್ಲವಾದಾಗ ಕೋಳಿ, ಕುರಿ ಇಲ್ಲವೆ ಆಡಿನ ಮಾಂಸವನ್ನು ಪೂರೈಸಬೇಕು. ಹಂದಿಯ ಮಾಂಸವನ್ನು ನಿತ್ಯವೂ ಈ ವನ್ಯಮೃಗಗಳಿಗೆ ನೀಡಲು ಸಾಧ್ಯವಿಲ್ಲ. ಏಕೆಂದರೆ ಹಂದಿ ಮಾಂಸವು ಹೆಚ್ಚು ಕೊಬ್ಬು ಹಾಗೂ ಕ್ಯಾಲರಿಯಿಂದ ಕೂಡಿರುತ್ತದೆ. ಇದರಿಂದ ವನ್ಯಮೃಗಗಳ ಆರೋಗ್ಯದಲ್ಲಿ ಸಾಕಷ್ಟು ವ್ಯತ್ಯಾಸ ಆಗುವ ಅಪಾಯವಿದೆ.

ರಾಜ್ಯದಲ್ಲಿನ ಎಲ್ಲ ವನ್ಯಜೀವಿ ಉದ್ಯಾನಗಳು ಈಗ ದಾನಿಗಳ ಹಾಗೂ ಸರ್ಕಾರದ ನೆರವಿನಿಂದ ನಿರ್ವಹಣೆ ಮಾಡಿಕೊಂಡು ಹೋಗುತ್ತಿರುವುದು ಗೊತ್ತಿರುವ ಸಂಗತಿ. ಈಗ ಬರುತ್ತಿರುವ ಆದಾಯದಲ್ಲಿ ಎತ್ತು, ಎಮ್ಮೆ ಹಾಗೂ ಕೋಣದ ಮಾಂಸವನ್ನು ಪೂರೈಸುವುದೇ ದೊಡ್ಡ ಸವಾಲಿನ ಕೆಲಸವಾಗಿದೆ. ಜೊತೆಗೆ ಈ ವನ್ಯಜೀವಿ ಉದ್ಯಾನಗಳ ಸಿಬ್ಬಂದಿ ಹಾಗೂ ನಿರ್ವಹಣಾ ವೆಚ್ಚವೂ ಕೂಡ ದೊಡ್ಡ ಹೊರೆಯಾಗಿ ಕಾಡುತ್ತಿದೆ. ಅಂಥದರಲ್ಲಿ ಮೃಗಗಳಿಗೆ ಬೇರೆ ಮಾಂಸ ಅಂದರೆ ಆಡು, ಕುರಿ ಹಾಗೂ ಕೋಳಿ ಮಾಂಸದ [illegible] ಮಾಡುವುದು [illegible].

[illegible] ಮುಖ್ಯವಾಗಿ ಕುರಿ ಹಾಗೂ ಕೋಳಿ ಮಾಂಸವನ್ನು ನಿತ್ಯವೂ ಈ ವನ್ಯಜೀವಿಗಳಿಗೆ ನೀಡುವುದು [illegible] ಅದರ [illegible] ಮಾಂಸವನ್ನು [illegible] ಹೆಚ್ಚು [illegible] ಅದರ [illegible] ದೊಡ್ಡ ಪ್ರಮಾಣದಲ್ಲಿ [illegible] ಮಾಂಸವನ್ನು ಈ ವನ್ಯಜೀವಿ ಉದ್ಯಾನಗಳಿಗೆ ಪೂರೈಸುವುದು [illegible] ಆಗುವುದು. ಇದರಿಂದ ಈ ವನ್ಯಜೀವಿ ಉದ್ಯಾನಗಳ [illegible] ಹೆಚ್ಚುತ್ತದೆ.

[illegible] ರಾಷ್ಟ್ರೀಯ ವನಜೀವಿ ಉದ್ಯಾನದ ಉದಾಹರಣೆಯನ್ನೇ ನೀಡುವುದಾದರೆ ಈಗ ಇಲ್ಲಿ ದಿನಕ್ಕೆ ಸುಮಾರು 1,000 ಕಿಲೋ ಗ್ರಾಂ ದನದ ಮಾಂಸವನ್ನು ಪ್ರತಿದಿನ ಪೂರೈಕೆ ಮಾಡಲಾಗುತ್ತಿದೆ. ಅಂದರೆ ಸರಾಸರಿ ತಿಂಗಳಿಗೆ ಸುಮಾರು ಎರಡು ಲಕ್ಷ ರೂಪಾಯಿ ಮೊತ್ತದ ಮಾಂಸವನ್ನು ಈ ವನಜೀವಿ ಉದ್ಯಾನಕ್ಕೆ ತರಿಸಿಕೊಳ್ಳಲಾಗುತ್ತಿದೆ. "ಗೋಹತ್ಯೆ ನಿಷೇಧ ಮಸೂದೆ" ಮಂಡನೆಯಾಗಿ ಒಪ್ಪಿಗೆ ದೊರೆತ ನಂತರ ವೆಚ್ಚ ಎರಡು ಮೂರು ಪಟ್ಟು ಹೆಚ್ಚುವ ಸಾಧ್ಯತೆ ಇದೆ. ಏಕೆಂದರೆ ಕುರಿ, ಆಡು ಹಾಗೂ ಕೋಳಿ ಮಾಂಸವು ಹೆಚ್ಚು ದುಬಾರಿ.

ದುಬಾರಿ ಎನ್ನುವ ಒಂದೇ ಕಾರಣವಲ್ಲ; ವನ್ಯಜೀವಿಗಳಿಗೆ ಈ ಮಾಂಸವು ಹೆಚ್ಚು ಒಗ್ಗುವಂಥದಲ್ಲ. ಆದ್ದರಿಂದ ಈ ಬಗ್ಗೆ ರಾಜ್ಯ ಸರ್ಕಾರವು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಒಟ್ಟಿನಲ್ಲಿ "ಗೋಹತ್ಯೆ ನಿಷೇಧ ಕಾಯ್ದೆ"ಯಲ್ಲಿ ವನ್ಯಜೀವಿ ಉದ್ಯಾನಗಳಿಗೆ ಹಸು, ಕರು, ಎತ್ತು, ಎಮ್ಮೆ ಹಾಗೂ ಕೋಣದ ಮಾಂಸವನ್ನು ಪೂರೈಸುವುದಕ್ಕೆ ವಿನಾಯಿತಿ ಸಿಗುವಂತೆ ಮಾಡಲು ಸರ್ಕಾರವು ಯೋಚನೆ ಮಾಡಬೇಕು. ಇಲ್ಲದಿದ್ದರೆ ಈ ವನಜೀವಿ ಉದ್ಯಾನಗಳಲ್ಲಿರುವ ಮೃಗಗಳ ಆಹಾರ ಕ್ರಮದ ಮೇಲೆ ಭಾರಿ ವ್ಯತ್ಯಾಸವಾಗಿ ಸಾಕಷ್ಟು ತೊಂದರೆಗಳು ಎದುರಾಗುವ ಅಪಾಯವಿದೆ.

- ಶೋಭಾ ಎಂ. ಲೋಲನಾಥ್,
ಕಾರ್ಯದರ್ಶಿಗಳು, ಜೆಎನ್‌ಎಸ್ ಯಾಮಿನಿ ಫೌಂಡೇಷನ್, ಬೆಂಗಳೂರು

ಗೋಹತ್ಯೆ ನಿಷೇಧ: ಒಂದು ವೈಜ್ಞಾನಿಕ ಅವಲೋಕನ

ಇತ್ತೀಚೆಗೆ ಕರ್ನಾಟಕ ಸರ್ಕಾರವು ಗೋಹತ್ಯೆ ನಿಷೇಧ ಕಾಯ್ದೆ-2010 ಅನ್ನು ಜಾರಿಗೆ ತರಲು ತೀರ್ಮಾನಿಸಿದೆ. ಇದು ಎಷ್ಟರಮಟ್ಟಿಗೆ ಪರಿಸರ ಸಮತೋಲನಕ್ಕೆ ಹತ್ತಿರವಾಗಿದೆ ಎಂಬುದನ್ನಷ್ಟೇ ಚರ್ಚಿಸೋಣ. ವೇದ, ಪುರಾಣ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಭಾವನಾತ್ಮಕ ನೆಲೆಗಳಲ್ಲಿ ಚರ್ಚಿಸಿದರೆ ಉದ್ವೇಗ, ದ್ವೇಷ, ಅಸೂಯೆ, ಆಕ್ರೋಶಗಳೇ ಮೇಲಾಟವಾಗಿ; ವಿವೇಕ, ಸತ್ಯ ಎಲ್ಲೋ ಅಡಗಿ ಹೋಗಬಹುದು. ಆದ್ದರಿಂದ ವಿನಯ, ಸಂಯಮದ ಚೌಕಟ್ಟಿನಲ್ಲಿ ವೈಜ್ಞಾನಿಕ ಹಿನ್ನೆಲೆ ಇಟ್ಟುಕೊಂಡು, ಸಮಷ್ಟಿ ಪ್ರಜ್ಞೆಯಿಂದ, ಸತ್ಯವನ್ನರಿಯಲು ಪ್ರಯತ್ನಿಸೋಣ.

ನಮ್ಮ ದೇಶದ ಜನರ ಆಹಾರ ಪದ್ಧತಿ ಮಾಂಸಾಹಾರ ಮತ್ತು ಸಸ್ಯಾಹಾರವಾಗಿದೆ. ಅದರಲ್ಲೂ ಶೇ. 90ಕ್ಕಿಂತ ಮಿಗಿಲಾಗಿ ಮಾಂಸಾಹಾರಿಗಳೇ ಇದ್ದಾರೆ. ಇವರಲ್ಲಿ ಮೀನು, ಕೋಳಿ, ಕುರಿ, ಆಡು, ಹಂದಿ, ದನದ ಮಾಂಸ ತಿನ್ನುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇವರನ್ನು ಸಾಂಪ್ರದಾಯಿಕ ಮಾಂಸಾಹಾರಿಗಳೆನ್ನಬಹುದು. ಇವರಲ್ಲದೆ ಅತ್ಯಂತ ತಳಸಮುದಾಯಗಳು; ಮುಖ್ಯವಾಗಿ ಅಲೆಮಾರಿ ಜನಾಂಗಗಳು ತೋಡ(ಹೆಗ್ಗಣ), ಹಾವು, ಬೆಕ್ಕು, ಕೋತಿ, ಹಕ್ಕಿ-ಪಕ್ಷಿಗಳು, ಮಳೆಗಾಲದ ಚಿಟ್ಟೆಗಳು, ಆಮೆ, ಮೊಲ, ಮುಂಗುಸಿ, ಅಳಿಲು, ಒಂಟೆ-ಹೀಗೆ ವಿವಿಧ ಜಾತಿಯ ಪ್ರಾಣಿಗಳನ್ನು ಆಹಾರವಾಗಿ ಬಳಸುವ ಪದ್ಧತಿ ಇದೆ. ಈ ಆಹಾರ ಸರಪಳಿ ಒಂದಕ್ಕೊಂದು ಕೊಂಡಿಯಾಗಿ ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇದು ಪ್ರಾಥಮಿಕ ಶಿಕ್ಷಣದಿಂದಲೇ ತಿಳಿದುಬಂದಿರುವ ವಿಚಾರವಾಗಿದೆ.

ಹೀಗೊಂದು ಕ್ಷಣ ಆಹಾರ ಸರಪಳಿಯ ಒಂದು ಕೊಂಡಿ ಕಳಚಿದರೆ, ಅದರ ದೂರಗಾಮಿ ಪರಿಣಾಮ ಪರಿಸರದ ಅಸಮತೋಲನದಲ್ಲಿ ಕೊನೆಯಾಗಲಿದೆ. ಈಗ ಗೋಹತ್ಯೆ ನಿಷೇಧದಿಂದ ದನ ಮತ್ತು ಎಮ್ಮೆಗಳ ಮಾಂಸಕ್ಕೆ ತಡೆ ಬೀಳಲಿದೆ. ಈ ಮೂಲಕ ದನದ ಮಾಂಸಾಹಾರಿಗಳು ಅನಿವಾರ್ಯವಾಗಿ ಸಸ್ಯಾಹಾರಿಗಳು ಅಥವಾ ಇತರ ಮಾಂಸಾಹಾರಿಗಳಾಗಿ ಕಡ್ಡಾಯವಾಗಿ ಬದಲಾಗಬೇಕಾಗುತ್ತದೆ.

ಈಗಾಗಲೇ ಜಾಗತೀಕರಣದ ಪ್ರಭಾವದಿಂದ ನಗರೀಕರಣ, ಕೈಗಾರಿಕೀಕರಣ ಮತ್ತು ವಿಶೇಷ ಆರ್ಥಿಕ ವಲಯಗಳಿಗಾಗಿ ಭೂಸ್ವಾಧೀನದಂತಹ ಪ್ರಕ್ರಿಯೆಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಕೃಷಿಭೂಮಿ ಕಡಿಮೆಯಾಗುತ್ತಿದೆ. ಇದರ ಪರಿಣಾಮವಾಗಿ ಕೃಷಿ-ಕಾರ್ಮಿಕರು ನಗರಮುಖಿಗಳಾಗಿ ಕೃಷಿಯನ್ನು ತ್ಯಜಿಸುತ್ತಿದ್ದಾರೆ. ಹೀಗೆ ರೈತರು, ಕೃಷಿ-ಕಾರ್ಮಿಕರು ಕೃಷಿ ಚಟುವಟಿಕೆಗಳನ್ನು ಕೈಬಿಡುವುದರಿಂದ ಆಹಾರೋತ್ಪಾದನೆ ಕುಂಠಿತವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಮತ್ತೆ ಮತ್ತೆ ಸಸ್ಯಾಹಾರಿ ಉತ್ಪನ್ನಗಳ ಮೇಲೆ ಒತ್ತಡ ಜಾಸ್ತಿಯಾದರೆ ಪರಿಸರದಲ್ಲಿ ಅಸಮತೋಲನವುಂಟಾಗುತ್ತದೆ. ಭೂ ತಾಪಮಾನ ಜಾಸ್ತಿಯಾಗಲು ಭಾರತದ ಭತ್ತದ ಬೆಳೆ ಪ್ರಮುಖ ಕಾರಣ; ಈ ಮೂಲಕ ಭತ್ತದ ಗದ್ದೆಯಿಂದ ಮೀಥೇನ್ ಹೆಚ್ಚು ಬಿಡುಗಡೆಯಾಗಿ ಭೂಮಿಯ ಕಾವಿಗೆ ಕಾರಣವಾಗಿದೆ ಎಂಬ ವಾದವನ್ನು ಪ್ರಮುಖವಾಗಿ ವಿಶ್ವಸಂಸ್ಥೆ ಭಾರತದ ಮೇಲೆ ಆರೋಪ ಮಾಡುತ್ತಿದೆ. ಪರಿಸ್ಥಿತಿ ಈ ಮಟ್ಟಿಗೆ ಬಿಗಡಾಯಿಸಿರುವಾಗ ದನದ ಮಾಂಸದ ನಿಷೇಧದಿಂದಾಗಿ ಸಸ್ಯಾಹಾರಕ್ಕಾಗಿ ತೀವ್ರ ಬೇಡಿಕೆಯುಂಟಾದಾಗ ಸ್ವಾಭಾವಿಕವಾಗಿ ಭತ್ತದ ಗದ್ದೆಗಳು ಹೆಚ್ಚಾಗಲಿವೆ. ಈ ಮೂಲಕ ಭೂತಾಪಮಾನ ಹೆಚ್ಚಾಗಲಿದೆ.

ಇನ್ನು ಗೋಹತ್ಯೆ ನಿಷೇಧದಿಂದ ಜಾನುವಾರುಗಳ ಸಂಖ್ಯೆ ಹೆಚ್ಚಾಗಲಿದೆ. ಅವುಗಳ ಮೇವಿನ ಆಹಾರಕ್ಕಾಗಿ ಮತ್ತೆ ಕೃಷಿಭೂಮಿ ಮೇಲೆ ಒತ್ತಡ ಹೆಚ್ಚಾಗುತ್ತದೆ. ಕೊನೆಗೆ ಅರಣ್ಯ ನಾಶಕ್ಕೆ ಇದು ದಾರಿ ಮಾಡಿಕೊಡುವ ಸಾಧ್ಯತೆ ನಿಚ್ಚಳವಾಗಿದೆ. ಅರಣ್ಯ ನಾಶದಿಂದಲೂ ಭೂತಾಪಮಾನ ಜಾಸ್ತಿಯಾಗಲಿದೆ. ಇದೇ ಮಾದರಿಯಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚಾದಾಗ, ಅವುಗಳ ಸಗಣಿಯ ಪ್ರಮಾಣ ಜಾಸ್ತಿಯಾಗುತ್ತದೆ. ಸಗಣಿಯಿಂದಲೂ ಮೀಥೇನ್ ಬಿಡುಗಡೆಯಾಗಿ ಭೂತಾಪಮಾನ ಜಾಸ್ತಿಯಾಗಲಿದೆ ಎಂಬ ವಾದವೂ ಪ್ರಚಲಿತವಾಗಿದೆ. ಈ ಎಲ್ಲ ವಿಚಾರಗಳೂ ಊಹಾತ್ಮಕ ವಿಚಾರಗಳಾಗಿರದೆ ಇವುಗಳಿಗೆ ವೈಜ್ಞಾನಿಕ ಹಿನ್ನೆಲೆ ಇದೆ.

ಇದಿಷ್ಟು ಪರಿಸರ ಅಸಮತೋಲನಕ್ಕೆ ದಾರಿ ತೋರಿದರೆ, ವಾಸ್ತವಿಕ ನೆಲೆಗಟ್ಟಿನಲ್ಲಿ ಸತ್ಯವನ್ನು ನೋಡುವುದಾದರೆ, ಕರ್ನಾಟಕವು ರಾಷ್ಟ್ರದಲ್ಲೇ ಹಾಲು ಉತ್ಪಾದನೆಯಲ್ಲಿ ಮೊದಲೆರಡು ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದೆ. ಈ ಮೂಲಕ ವ್ಯವಸಾಯ ಜಾನುವಾರುಗಳಿಗಿಂತ ಹಾಲು ಉತ್ಪಾದಿಸುವ ರಾಸುಗಳು ಹೆಚ್ಚಾಗಿವೆ. ಅದರಲ್ಲೂ ಮಿಶ್ರತಳಿ ರಾಸುಗಳಾದ ಹೋಲೆಸ್ಟಿಯನ್ ಫ್ರಿಸಿಯನ್ ಮತ್ತು ಜರ್ಸಿ ರಾಸುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ಈ ರಾಸುಗಳಿಗೆ ಹಲವೊಮ್ಮೆ ಕಾಯಿಲೆ ಆಗಿ ಶಾಶ್ವತವಾಗಿ ಹಾಲು ಉತ್ಪಾದನೆ ನಿಂತುಹೋಗುತ್ತದೆ. ಇವುಗಳು ಕೃಷಿ ಚಟುವಟಿಕೆಗಳಿಗೂ ಪ್ರಯೋಜನಕ್ಕೆ ಬರುವುದಿಲ್ಲ. ಅಂತಹ ರಾಸುಗಳನ್ನು ಏನು ಮಾಡುವುದು? ಹಲವೊಮ್ಮೆ ಆಕಸ್ಮಿಕಗಳಿಂದ ಜಾರಿ ಬಿದ್ದಾಗ ಸರಿಪಡಿಸಲಾಗದ ಮೂಳೆ ಮುರಿತಗಳು, ಮೂಳೆ ಜರುಗುವಿಕೆಗಳಿಂದ ಎದ್ದು ನಿಲ್ಲಲಾರದ ಪರಿಸ್ಥಿತಿಗೆ ಒಳಪಡುತ್ತವೆ. ಅಂತಹ ರಾಸುಗಳನ್ನು ಏನು ಮಾಡುವುದು? ಮತ್ತೆ ಹಾಲು ಕರೆಯುವ ರಾಸುಗಳಲ್ಲಿ ಗಂಡು ಕರು ಹಾಕಿದರೆ ಏನು ಮಾಡುವುದು? ಹಲವಾರು ಕಾಯಿಲೆಗಳಿಂದ ಶಾಶ್ವತ ಬಂಜೆತನಕ್ಕೆ ಒಳಗಾಗುವ ರಾಸುಗಳನ್ನು ಏನು ಮಾಡುವುದು? ಈ ಎಲ್ಲ ಅನುಪಯುಕ್ತ ರಾಸುಗಳನ್ನು ರೈತರು ಸ್ವಾಭಾವಿಕವಾಗಿ ಆರ್ಥಿಕ ದೃಷ್ಟಿಯಿಂದ ಅವುಗಳನ್ನು ದನದ ಮಾಂಸ ಉತ್ಪಾದಕರಿಗೆ ಮಾರಾಟ ಮಾಡುತ್ತಾರೆ.

ಈಗ ಮಾಂಸದ ದನಗಳ ವಧೆಯಿಂದ ಸಿಗುತ್ತಿರುವ ಉಪ ಉತ್ಪನ್ನಗಳಾದ ಕೊಬ್ಬು, ಮೂಳೆ, ರಕ್ತ, ಕೊಂಬು, ಚರ್ಮಗಳು ದೇಶದ ಬಹುದೊಡ್ಡ ಉದ್ಯಮವಾಗಿರುವ ಔಷಧೋತ್ಪನ್ನಗಳಿಗೆ ಮತ್ತು ಚರ್ಮೋದ್ಯಮಕ್ಕೆ ಮೂಲ ಸರಕಾಗಿವೆ. ಇಂತಹ ಸನ್ನಿವೇಶದಲ್ಲಿ ನಮ್ಮ ಔಷಧ ಉತ್ಪಾದನೆಯ ಪರಿಸ್ಥಿತಿ ಏನಾಗಬಹುದು? ಚರ್ಮೋದ್ಯಮಗಳ ಸ್ಥಿತಿ ಏನಾಗಬಹುದು? ದೇಶದ ಜನರ ಆರೋಗ್ಯದ ಪರಿಸ್ಥಿತಿ ಏನಾಗಬಹುದು?

ಈ ಎಲ್ಲ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿದೆಯೇ?

-ಪ್ರಗತಿನಂದ

...ಾರತೀಯ ಪರಂಪರೆಯಲ್ಲಿ ಗೋಮಾಂಸದೂಟ

ಕರ್ನಾಟಕ ಸರ್ಕಾರ ಊಟಕ್ಕಾಗಿ ಹಸುವನ್ನು ಕೊಲ್ಲು ...ನ್ನು ನಿಷೇಧಿಸಲು ಶಾಸನ ತರುವ ಸನ್ನಾಹ ಮಾಡುತ್ತಿದೆ. ... ಈ ರೀತಿ ಏಕಮುಖವಾಗಿ ಗೋಮಾಂಸದ ಮೇಲೆ ...ಧ ಹೇರುವುದು ಬಹಳ ದೊಡ್ಡ ತಪ್ಪಾಗುತ್ತದೆ. ಇದು ...ಪ್ರ ಸಮುದಾಯದ ಜನಗಳಿಗೆ ನೋವನ್ನುಂಟು ...ಡುತ್ತಲ್ಲದೆ ಗೋಮಾಂಸ ತಿನ್ನುವುದೇ ಪಾಪ ಎಂಬ ...ಕೆ ಮೂಡಿಸಿ ಮೇಲುಕೀಳು ಎನ್ನುವ ಭಾವನೆಗಳನ್ನು ...ಹಾಕುತ್ತದೆ. ಇದು ಚಾರಿತ್ರಿಕವಾಗಿ ಹಿಂದೂ ...ಪರೆಯ ಸರಿಯಾದ ಚಿತ್ರಣವಲ್ಲ. ಅಲ್ಲದೆ ಗೋಮಾಂಸ ...ವುದೇ ಪಾಪ ಎನ್ನುವುದಕ್ಕೆ ಆಧಾರವಿಲ್ಲ. ಇತ್ತೀಚಿನ ...ಯದಲ್ಲಿ ಬಹಳ ಜನ ಬ್ರಾಹ್ಮಣರು ಗೋಮಾಂಸ ...ವುದನ್ನು ಬಿಟ್ಟರು (ಇದು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ) ...ವುದಕ್ಕೆ ಆಧಾರಗಳಿವೆ. ಆದರೆ ಅದು ಶೇಕಡ 5ರಷ್ಟು ...ಮಾತ್ರ ಎನ್ನುವುದನ್ನು ಗಮನಿಸಿ.

...ಹಿಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ದ್ವಿಜೇಂದ್ರ ...ರಾಯಣ ಝಾ ಅವರು ತಮ್ಮ 'ಮಿತ್ ಆಫ್ ದಿ ...ಲಿ ಕೌ' ಎನ್ನುವ ಪುಸ್ತಕದಲ್ಲಿ "ಹಸುವನ್ನು ಕೊಲ್ಲುವುದು ... ಪಾಪ ಎಂದು ಹೇಳುವುದಕ್ಕೆ ನಮ್ಮ ಯಾವ ...ಗ್ರಂಥಗಳಲ್ಲೂ ಯಾವುದೇ ಆಧಾರ ಸಿಗುವುದಿಲ್ಲ" ...ವುದನ್ನು ಸಕಲ ಪುರಾವೆಗಳೊಂದಿಗೆ ವಿವರಿಸಿದ್ದಾರೆ. ...ದುವರೆದು: "19ನೇ ಶತಮಾನದಲ್ಲಿ ಗೋಹತ್ಯೆ ...ತುವುದು ಮತ್ತು ಅದರ ಮಾಂಸ ತಿನ್ನುವುದರ ಬಗ್ಗೆ ...ಧ ಹೇರಬೇಕೆನ್ನುವ ಬೇಡಿಕೆಯನ್ನು ಬಲಪಂಥೀಯ ...ಚಾರಣಿಗಳು ಒಂದು ರಾಜಕೀಯ ಆಯುಧವಾಗಿ ...ರ್ತಿಸಿ ಜಾತಿವಾದದ ಮೇಲೆ ಪಕ್ಷವನ್ನು ಬೆಳೆಸಲು ...ಡಿದ ಹುನ್ನಾರ" ಎಂದು ಹೇಳುತ್ತಾರೆ. 21ನೇ ...ಮಾನದಲ್ಲೂ ಇದು ರಾಜಕೀಯ ಆಯುಧವಾಗಿರುವುದು ... ಪ್ರಜಾಪ್ರಭುತ್ವಕ್ಕೆ ಒಂದು ಸವಾಲು ಎಂದೇ ಹೇಳಬೇಕು.

...ಹಾಗಾದರೆ ಈ ಮಾಂಸಾಹಾರದ ಇತಿಹಾಸವೇನು? ...ನ್ನ ಈಗ ಹೇಗೆ ವಿವರಿಸಬೇಕು? ಈ ಪರಂಪರೆಯನ್ನು ...ದಲ್ಲಿ ಹೇಗೆ ಕೈ ಬಿಡಲಾಯಿತು? ಈ ಚಾರಿತ್ರಿಕ ...ಳಿಗೆ ಸಮರ್ಪಕವಾದ ಉತ್ತರ ಹುಡುಕುವುದು ಅಷ್ಟು ...ಭವಲ್ಲ. ಅಷ್ಟು ಕಷ್ಟವೂ ಅಲ್ಲ. ಹಿಂದೂ ...ಗ್ರಂಥಗಳಾದ ವೇದಗಳು, ಉಪನಿಷತ್ತುಗಳು ಮತ್ತು ...ಗಳಲ್ಲಿ ಸಮೃದ್ಧವಾಗಿ ಪುರಾವೆಗಳು ಸಿಗುತ್ತವೆ. ...ಕಾಲದ ಆರ್ಯರು ಗೋವು ಮುಂತಾದ ಪ್ರಾಣಿಗಳನ್ನು ...ಮುಖವಾದ ಆಸ್ತಿಯ ರೂಪದಲ್ಲಿ ನೋಡುತ್ತಿದ್ದರು. ...ವುಗಳನ್ನು ಪುರೋಹಿತರಿಗೆ ಅವರು ಮಾಡಿದ ...ರೋಹಿತ್ಯಕ್ಕೆ ಕಾಣಿಕೆಯಾಗಿ ಕೊಡಲಾಗುತ್ತಿತ್ತು. ಈ ...ಶಗಳಲ್ಲಿ ಹಸುವನ್ನು "ಆಹಾರ" ಎಂದೇ ...ಪಾದಿಸಲಾಗಿದೆ. ಅಂದರೆ ಹಸುವಿನ ಮಾಂಸಭಕ್ಷಣೆ ...ಯೂ ಆಹಾರ ಪದ್ಧತಿಯ ಅವಿಭಾಜ್ಯ ಅಂಗವಾಗಿತ್ತು ...ವುದು ಸ್ಪಷ್ಟವಾಗುತ್ತದೆ ಎನ್ನುತ್ತಾರೆ ಝಾ ಅವರು.

...ಹಸುವಿನ ಮಾಂಸ ಈಗ ಕೆಲ ಹಿಂದೂಗಳು ...ನ್ನುವುದಿಲ್ಲ. ಅದರಲ್ಲಿ ನಾನೂ ಒಬ್ಬ. ಆದರೆ ಯಾರೂ ...ರಾಕರಿಸಲಾಗದ ಪುರಾವೆಗಳಿದ್ದಾಗಲೂ 5000 ವರ್ಷಗಳ ...ಹಿಂದಿನ...ದಲ್ಲಿ ಹಿಂದೂಗಳು, ಅದರಲ್ಲೂ ಬ್ರಾಹ್ಮಣರು ಎಂದೂ ಗೋಮಾಂಸವನ್ನು ತಿಂದೇ ಇಲ್ಲ ಎಂದು ಖಡಾಖಂಡಿತ ... ಹೇಳುವುದು ನಮ್ಮ ಪರಂಪರೆಯ ಸರಿಯಾದ ...ಚಿತ್ರಣವಲ್ಲ. ಸರಿಯಾದ ಚಿತ್ರಣವೆಂದರೆ ಋಗ್ವೇದದಲ್ಲಿ ... ದೇವತೆಗಳಲ್ಲಿ ಅತಿಮುಖ್ಯವಾದ ಇಂದ್ರನಿಗೆ ಹಸು ...ಎಮ್ಮೆಯ ಮಾಂಸ ಬಹಳ ಪ್ರಿಯವಾದದ್ದು ಎಂದು ...ರ ವೇಳೆಯಲ್ಲಿ ಅವುಗಳನ್ನು ಬಲಿಕೊಡುತ್ತಿದ್ದರು. "... ಹಸು, ಕರು, ಕುದುರೆ ಮತ್ತು ಎಮ್ಮೆಯ ...ಸವನ್ನು ತಿನ್ನುತ್ತಿದ್ದ" (ಋಗ್ವೇದ: 6/17/1). ಹಾಗೆ ...ಬೆಳೆಸಿಟ್ಟ ಹಸುಗಳನ್ನು ಕತ್ತರಿಸಿ ಅಡುಗೆ ಮಾಡಿಕೊಂಡು ... ಮಾಡುತ್ತಿದ್ದವರು ಬ್ರಾಹ್ಮಣರು; ದಲಿತರಲ್ಲ, ...ನಿದವರಲ್ಲ, ದಲಿತರು ಅಥವಾ ಹರಿಜನ ಎನ್ನುವುದಕ್ಕೆ ...ಬಳಕೆಯಲ್ಲಿದ್ದ ಹೊಲೆಯ, ಮಾದಿಗ ಎನ್ನುವ ...ಪದಗಳು ಆಗ ಇರಲಿಲ್ಲ. ಋಗ್ವೇದದಲ್ಲಿ ಬರುವವರು ...ರು, ದಸ್ಯುಗಳು ಮತ್ತು ದಾಸರು. ಈ ಹಸುವಿನ ಮಾಂಸವನ್ನು ತಿನ್ನುವ ಪರಂಪರೆ ಆರಂಭವಾದುದ್ದೇ ಬ್ರಾಹ್ಮಣರಿಂದ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಕಾಶ್ಮೀರದ ಪಂಡಿತರು, ಅಸ್ಸಾಮ್, ಬಂಗಾಳ, ಒರಿಸ್ಸಾದ ಬ್ರಾಹ್ಮಣರುಗಳು ಇವತ್ತಿಗೂ ಮೀನು, ಆಡು, ಕುರಿ ಮಾಂಸಗಳನ್ನು ಮನೆಯಲ್ಲಿ ಅಡುಗೆ ಮಾಡಿಕೊಂಡು ತಿನ್ನುತ್ತಾರೆ. ಮದುವೆ ಮುಂಜಿಗಳಲ್ಲಿ ಮಾಂಸದೂಟ ಬಡಿಸುತ್ತಾರೆ. ಅವರೂ ಬ್ರಾಹ್ಮಣರೆ. ನಾನು ಈ ಎಲ್ಲ ರಾಜ್ಯಗಳಲ್ಲಿ ಇಂಥ ಬ್ರಾಹ್ಮಣರ ಮನೆಗಳಲ್ಲಿ ಊಟಮಾಡಿದ್ದೇನೆ. ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಕತೆ ಕೇಳಿದ ಮೇಲೆ ಅಸ್ಸಾಮಿನ ನನ್ನ ಮಾವನವರಾದ ಮುಕ್ತಿನಾಥ ಶರ್ಮ ಅವರು "ನಾರಣಪ್ಪನೆ ನಿಜವಾದ ಬ್ರಾಹ್ಮಣ. ಸೋಮರಸ ಕುಡಿಯುವುದು, ಮಾಂಸಾಹಾರ ಮಾಡುವುದು ಬ್ರಾಹ್ಮಣ ಪರಂಪರೆಯಲ್ಲಿರುವ ಅಭ್ಯಾಸ" ಎಂದರು. ಅವರ ತಮ್ಮ ಜ್ಞಾನಪೀಠ ಪುರಸ್ಕೃತ ಕಾದಂಬರಿಕಾರ ಡಾ. ಬರೇನ್ ಕುಮಾರ್ ಭಟ್ಟಾಚಾರ್ಯ ಅವರು, "ಅದು ನಮ್ಮ ಹಿಂದೂ ಸಂಸ್ಕೃತಿಯ ಪ್ರಮುಖವಾದ ಅಭ್ಯಾಸ" ಎಂದು ಧ್ವನಿ ಸೇರಿಸಿದರು. ಮನು ಮತ್ತು ಹಿಂದುತ್ವವನ್ನು ಪ್ರತಿಪಾದಿಸುವವರಲ್ಲಿ ಅತ್ಯಂತ ಮುಖ್ಯರಾದ, ಗೌರವಾನ್ವಿತ ಸ್ವಾಮಿ ವಿವೇಕಾನಂದರೂ ಇದಕ್ಕೆ ಪುರಾವೆ ಒದಗಿಸುತ್ತಾರೆ:

"ತಿಳಿವಳಿಕೆ ಇಲ್ಲದ ಜನ ಸ್ಥಳೀಯ ಸಂಪ್ರದಾಯಗಳನ್ನು ನಮ್ಮ ಧರ್ಮದ ಮೂಲತತ್ವ ಎಂದು ತಿಳಿಯುವುದು ನಾವು ಮಾಡುತ್ತಿರುವ ಬಹಳ ದೊಡ್ಡ ತಪ್ಪು"

(ರಾಮಕೃಷ್ಣ ಆಶ್ರಮದವರು ಪ್ರಕಟಿಸಿರುವ ಸಮಗ್ರ ಲೇಖನಗಳು, ಸ್ವಾಮಿ ವಿವೇಕಾನಂದ, ಸಂಪುಟ 3, ಪು. 173)

"ಭಾರತದಲ್ಲಿ ಒಂದು ಕಾಲದಲ್ಲಿ ಗೋಮಾಂಸ ತಿನ್ನದೆ ಯಾವ ಬ್ರಾಹ್ಮಣನೂ ಬ್ರಾಹ್ಮಣನಾಗಿ ಉಳಿಯುತ್ತಿರಲಿಲ್ಲ, ಇದನ್ನು ವೇದಗಳಲ್ಲಿ ನೀವು ಓದಬಹುದು," ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. (ಅದೇ ಗ್ರಂಥ, ಪು 1 74)

"ಒಬ್ಬ ವ್ಯಕ್ತಿ ಸರಿಯಾದ ಕರ್ಮ ಪದ್ಧತಿಯನ್ನು ಅನುಸರಿಸುತ್ತಿರುವಾಗ ಮಾಂಸ ತಿನ್ನದಿದ್ದರೆ, ಅವನು ಸತ್ತಮೇಲೆ ಮುಂದೆ 21 ಜನ್ಮಗಳಲ್ಲಿ ಅವನೇ ಬಲಿ ಪಶುವಾಗಿ ಹುಟ್ಟುತ್ತಾನೆ."

(ಮನುಸ್ಮೃತಿ, ಅಧ್ಯಾಯ 5, ಶ್ಲೋಕ 30)

"ಶ್ರಾದ್ಧ ಅಥವಾ ಪೂಜಾ ಸಮಯದಲ್ಲಿ ಕೊಟ್ಟ ಮಾಂಸವನ್ನು ಬ್ರಾಹ್ಮಣ ತಿನ್ನದಿದ್ದರೆ ಅವನು ನರಕಕ್ಕೆ ಹೋಗುತ್ತಾನೆ."

(ವಷ್ಠ ಧರ್ಮಶಾಸ್ತ್ರ: 11/34)

ಪುರಾತನ ಭಾರತದಲ್ಲಿ ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕೋಣ, ಹಂದಿ ಇತ್ಯಾದಿಗಳನ್ನು ಮನೆತನದ ಆಸ್ತಿಯಾಗಿ ಪರಿಗಣಿಸಲಾಗುತ್ತಿತ್ತು. ಆಧುನಿಕ ಭಾರತದಲ್ಲಿ ಹಸುವನ್ನು ಪವಿತ್ರವಾದ ಪ್ರಾಣಿ ಎಂದು ಪರಿಗಣಿಸಲಾಗುತ್ತಿದೆ. ಅದು ಏಕೆ ಮತ್ತು ಹೇಗೆ ಪವಿತ್ರವಾಯಿತು ಎನ್ನುವುದಕ್ಕೆ ರಾಜಕೀಯ ಕಾರಣಗಳಿರಬಹುದು. ಆದರೆ ಹಸು ಪವಿತ್ರವಾದ ಪ್ರಾಣಿ ಎನ್ನುವುದಕ್ಕೆ ಭಾರತದ ಯಾವುದೇ (ಪವಿತ್ರ) ಗ್ರಂಥದಲ್ಲಿ ಆಧಾರ ಸಿಕ್ಕುವುದಿಲ್ಲ ಎನ್ನುವುದನ್ನು ಭಾರತ ರತ್ನ ಪುರಸ್ಕೃತ ಪಾಂಡುರಂಗ ವಾಮನ ಕಾಣೆಯವರು, ಪ್ರೊ. ಝಾ ಇತ್ಯಾದಿ ಪ್ರಮುಖ ವಿದ್ವಾಂಸರು ಪುರಾವೆಗಳ ಸಮೇತ ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ಹಸುವಿನ ಮಾಂಸ ಭಾರತೀಯರ, ಅದರಲ್ಲೂ ಬ್ರಾಹ್ಮಣರು ಊಟಮಾಡುವ ವಿವಿಧ ಭಕ್ಷ್ಯಗಳ ಅವಿಭಾಜ್ಯ ಅಂಗವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಅದರ ಸಮರ್ಥನೆಗಾಗಿ ಕೆಲವು ಹೇಳಿಕೆಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ:

"ಹುಡುಗಿಯ ಮದುವೆಯ ಸಂದರ್ಭದಲ್ಲಿ ಎತ್ತುಗಳನ್ನು ಮತ್ತು ಹಸುಗಳನ್ನು ಕೊಲ್ಲಲಾಗುತ್ತಿತ್ತು"

(ಋಗ್ವೇದ: 10/85/13)

"ಅತಿಥಿಗಳು ಆಗಮಿಸಿದಾಗ, ಪೂರ್ವಿಕರ ಶ್ರಾದ್ಧದ ಸಮಯದಲ್ಲಿ ಮತ್ತು ಮದುವೆಯ ಸಂದರ್ಭದಲ್ಲಿ ಹಸುವನ್ನು ಕೊಲ್ಲಬೇಕು."

(ಅಪಸ್ಥಂಬ ಗೃಹಸೂತ್ರ 1/3/10)

"ವೇದಗಳಲ್ಲಿ ನಾವು ಓದುವುದೇನೆಂದರೆ ಒಬ್ಬ ಸನ್ಯಾಸಿ, ರಾಜ ಅಥವಾ ಮಹಾಪುರುಷ ಮನೆಗೆ ಬಂದರೆ ಅತ್ಯುತ್ತಮವಾದ ಎತ್ತನ್ನು ಕೊಲ್ಲುತ್ತಿದ್ದರು." (ಅದೇ ಪುಸ್ತಕ; ಪು.174)

ಅತ್ಯಂತ ಹೆಸರುವಾಸಿಯಾದ ಚರಿತ್ರೆಕಾರರಾದ ಆರ್.ಸಿ.ಮಜೂಮ್ದಾರ್ ಅವರು ಸಂಪಾದಿಸಿರುವ 'ಭಾರತಿಯ ಜನಾಂಗದ ಚರಿತ್ರೆ ಮತ್ತು ಸಂಸ್ಕೃತಿ' (ಪ್ರಕಟಣೆ, ಭಾರತೀಯ ವಿದ್ಯಾಭವನ್) ಎನ್ನುವ ಗ್ರಂಥದಲ್ಲಿ ಬರುವ ಒಂದು ಹೇಳಿಕೆ:

"ಮಹಾಭಾರತದ ಕಾಲದಲ್ಲಿ ರಂತಿದೇವ್ ಎನ್ನುವ ರಾಜನ ಅಡುಗೆಯ ಮನೆಯಲ್ಲಿ ಪ್ರತಿ ದಿನ ಹಸುವಿನ ಜೊತೆಗೆ ಎಲ್ಲ ರೀತಿಯ 2000 ಪ್ರಾಣಿಗಳನ್ನು ಕೊಂದು ದಾನ ಧರ್ಮದ ರೂಪದಲ್ಲಿ ಪ್ರಜೆಗಳಿಗೆ ಉಣಬಡಿಸುತ್ತಿದ್ದ." (ಸಂಪುಟ 2, ಪು.578)

ಇದೇ ವಿಚಾರದಲ್ಲಿ ಸ್ವಾಮಿ ವಿವೇಕಾನಂದರು ಹೇಳುವ ಮಾತು ಇಲ್ಲಿ ಉಲ್ಲೇಖನಾರ್ಹ:

"ಪುರಾತನ ಭಾರತದ ಧಾರ್ಮಿಕ ವಿಧಿವಿಧಾನಗಳ ಮತ್ತು ಸಾಂಪ್ರದಾಯಿಕ ಧರ್ಮಾಚರಣೆಯ ಪ್ರಕಾರ ಹಸುವಿನ ಮಾಂಸ ತಿನ್ನದ ಹಿಂದೂ ಉತ್ತಮ ಹಿಂದೂವಾಗಿ ಉಳಿಯುತ್ತಿರಲಿಲ್ಲ." (ಸಂಪುಟ 3, ಪು. 536)

ಋಷಿಗಳಲ್ಲಿ ಮಹಾ ಮಹಾಋಷಿ ಎಂದೇ ಹೆಸರುಪಡೆದಿರುವ ಯಾಜ್ಞವಲ್ಕ್ಯ ಹೇಳುವುದನ್ನು ನೋಡಿ:

"ನಾನು ಹಸುವಿನ ಮಾಂಸವನ್ನು ತಿನ್ನುತ್ತೇನೆ ಕಾರಣ ಅದು ತುಂಬ ಮೃದುವಾಗಿರುತ್ತದೆ ಮತ್ತು ರುಚಿಯಾಗಿರುತ್ತದೆ." (ಶತಪಥ ಬ್ರಾಹ್ಮಣ, 3/1/2/21)

ನಮ್ಮ ಸಂಸ್ಕೃತಿಯಲ್ಲಿ ಗೋಮಾಂಸದ ಸೇವನೆಯ ಬಗ್ಗೆ ಇಷ್ಟು ಬಲವಾದ ಮಾಹಿತಿ ಇರುವಾಗ ಹಸುವಿನ ಮಾಂಸ ತಿನ್ನುವುದು ಪಾಪ ಎಂದು ಅದಕ್ಕೆ ಹೊಸ ಧಾರ್ಮಿಕ ಬಣ್ಣ ಹಚ್ಚುವುದು ಚರಿತ್ರೆಯನ್ನು ತಿರುಚುವ ಪ್ರಯತ್ನವಾಗುತ್ತದೆ; ಪರಂಪರೆಯನ್ನು ಮರೆಮಾಚಿ ಸುಳ್ಳು ಹೇಳುವ ಪ್ರಯತ್ನವಾಗುತ್ತದೆ. ಇದನ್ನು ನಿಷೇಧಿಸುವುದಕ್ಕೆ ಯಾವ ಆಧಾರವೂ ಇಲ್ಲ. ಹಿಂದೂ ಧರ್ಮದ ದೃಷ್ಟಿಯಿಂದ ನೋಡಿದರೆ ಖಂಡಿತ ಆಧಾರವಿಲ್ಲ. ಋಷಿಗಳು, ಬ್ರಾಹ್ಮಣ ವಿದ್ವಾಂಸರು ಆರಂಭಿಸಿದ ಈ ಪರಂಪರೆಯನ್ನು ಹಿಂದೂಗಳು ಮುಂದುವರೆಸಿಕೊಂಡು ಹೋಗುತ್ತಿದ್ದರೆ ಅದರಿಂದ ಯಾವ ಧರ್ಮದ ಉಲ್ಲಂಘನೆಯೂ ಆಗುವುದಿಲ್ಲ. ಇದಕ್ಕೆ ಪೂರಕವಾಗಿ ನಾನು ಇಲ್ಲಿ ಸಾಕಷ್ಟು ಉನ್ನತ ಗ್ರಂಥಗಳನ್ನು ಉಲ್ಲೇಖಿಸಿದ್ದೇನೆ. ಇದಕ್ಕಿಂತ ಹೆಚ್ಚು ಮಾಹಿತಿ ಸಿಗುತ್ತದೆ. ಆದರೆ ಒಂದು ಪತ್ರಿಕೆಯ ಲೇಖನದಲ್ಲಿ ಇದಕ್ಕಿಂತ ಉದ್ದವಾದ ಲೇಖನ ಪ್ರಕಟಣೆಗೆ ಸಮಸ್ಯೆಯಾಗಬಹುದು ಎಂದು ಅಷ್ಟಕ್ಕೆ ನಿಲ್ಲಿಸಿದ್ದೇನೆ.

ಊಟದ ವಿಚಾರದಲ್ಲಿ ಯಾವ ಸರ್ಕಾರಕ್ಕೂ ಮಾಂಸಾಹಾರ ನಿಷಿದ್ಧ ಎಂದು ಹೇಳುವ ಅಧಿಕಾರ ಇರುವುದಿಲ್ಲ. ಅಲ್ಲದೆ ನಮ್ಮ ಪರಂಪರೆಯಲ್ಲಿ ಬ್ರಾಹ್ಮಣರೇ ಪ್ರಮುಖವಾಗಿ ಭಕ್ಷಿಸುತ್ತಿದ್ದ ಗೋಮಾಂಸಕ್ಕೆ ಪಾಪಪುಣ್ಯದ ಮೌಲ್ಯಗಳನ್ನು ಅಂಟಿಸಿ ಈಗ ಅದನ್ನು ತಿನ್ನುವುದು ನಿಷಿದ್ಧ ಎನ್ನುವುದಕ್ಕೆ ಯಾವ ಸಮರ್ಥನೆಯನ್ನೂ ಕೊಡಲು ಸಾಧ್ಯವಿಲ್ಲ. ಇದು ಆಳುವ ಸರ್ಕಾರದ ಸದಸ್ಯರ ಮತ್ತು ಮಂತ್ರಿ ಮಂಡಲದ ಕಾಲ್ಪನಿಕ ಪಾಪಪ್ರಜ್ಞೆ, ಚರಿತ್ರೆಯನ್ನು ತಿರುಚುವುದೇ ಬಿಜೆಪಿ ಪಕ್ಷದ ಕೆಲಸವಾಗಿದೆ.

ಮನುಷ್ಯ ಭವಿಷ್ಯವನ್ನು ಸೃಷ್ಟಿಸಬಹುದೋ ಏನೋ ಗೊತ್ತಿಲ್ಲ, ಆದರೆ ಭೂತವನ್ನು ಸೃಷ್ಟಿಸುವ ಬಿಜೆಪಿಯ ಸಾಹಸ ಭಯ ಹುಟ್ಟಿಸುವಂತಹದ್ದು.

–ಪ್ರೊ ಎನ್.ಎಸ್.ರಘುನಾಥ್,
ಮೈಸೂರು



ಗೋವಿನ ಹಾಡು–ಪಾಡು

33 ಕೋಟಿ ದೇವ–ದೇವತೆಗಳೇ
ದಯವಿಟ್ಟು ಹೇಳಿ, ನಾವು ಕುಡಿವ ಹಾಲು
ನಮ್ಮ ಹಸುವಿನದ್ದೋ ಇಲ್ಲ ನಿಮ್ಮದೋ
ನಿಮ್ಮದಾದಲ್ಲಿ ದೇವತೆಗಳದ್ದೋ
ದೇವಗಳದ್ದೋ
ಬೇಗ ಹೇಳಿ, ಎರಡನೇಯ ಉತ್ತರ
ಹೌದಾದಲ್ಲಿ
ಛೇ ನಮಗೀ ಹಸುವೇ ಬೇಡ...
ನಿಮ್ಮಿಬ್ಬರದೂ ಅಲ್ಲವಾದಲ್ಲಿ
ದಯವಿಟ್ಟು ತೊಲಗಿರಾಚೆ
ನಮ್ಮ ಹಸುವೇನೂ
ಅನಾಥಶ್ರಮವಲ್ಲವಲ್ಲ!...


ಚಿಕ್ಕಂದಿನಿಂದ ದನಗಳ
ನೋಡುತ್ತ ಬಂದ ನಮ್ಮವ್ವನಿಗೆ
ಕಾಣದ 33 ಕೋಟಿ ದೇವರು
ದನವನ್ನೇ ನೋಡಿರದ ಸಿಟಿಯ
ಭಟ್ಟಂಗೆ ಕಂಡವಂತೆ!

ನಮ್ಮೂರ ಸಾಬರು
ದನ ತಿನ್ನುವುದಿಲ್ಲ;
ಲಿಂಗಾಯತರು ತಿನ್ನುತ್ತಾರೆ
ಕುರಿ, ಕೋಳಿ ಮಾಂಸವನ್ನು
ನಗುನಗುತ್ತ ಸಾಬರ ಮನೆಯಲ್ಲಿ!

ಮೊನ್ನೆ ಈಯಿತು
ನಮ್ಮ ಹಸು..
ಕರು ಯಾರನ್ನು ಹೋಲುತ್ತೆ?
33 ಕೋಟಿ ಮಂದಿಯ ಸಾವಿರಾರು
ಕೋಟಿ ಕ್ರೊಮೊಸೋಮ್‌ಗಳಲ್ಲಿ ಯಾವ
ಕ್ರೊಮೊಸೋಮ್ ಯಾವುದಕ್ಕೆ
ಸೇರಿತೋ? ಎಂದುಕೊಳ್ಳುವಾಗ
ಗಫೂರನ ಕೋಣ ಏದುಸಿರು ಬಿಡುತ್ತಿತ್ತು


ಪಿ.ಕೆ. ಮಲ್ಲನಗೌಡರ್

ರಾಷ್ಟ್ರಕವಿಯ ವಿವೇಕವಾಣಿ




...ಜನಸಂಖ್ಯೆಯನ್ನು ಬಿಟ್ಟರೆ ನಮ್ಮಲ್ಲಿ ಗೋಸಂಖ್ಯೆಯೇ ಅಧಿಕ. ಆದರೆ ಫಲ? ಜನಗಳಂತೆಯೇ ದನಗಳೂ ಬಡಕಲು. ಸಾಕಲಾರದ ಬೀದಿಗಟ್ಟುತ್ತೇವೆ. ಬಡಕಲು ದನ ನರಳಿ ಸಾಯುತ್ತಿದ್ದರೂ [illegible] ...ಕಾಗಿ ಉಳಿಗತಿಯಿಲ್ಲದ ಸಂಕಟ ಪಡುತ್ತಿರುವ [illegible] ...? ಹಾಲು ಕರೆದು ಬರಡಾಗಿ ಮುದಿಯಾದ ಮೇಲೆ ಹಣೆಗೆ ಕುಂಕುಮ ಹಚ್ಚಿಸಿಕೊಂಡು ಹೊಟ್ಟೆಗಿಲ್ಲದ ಹೊಲದಲ್ಲಿ ಕಾಲುಗಟ್ಟು ಕಂಗಾಲಾಗಿ ಬಿದ್ದು ಜೀವವಿರುವಾಗಲೇ ಕಾಗೆ... ...ಗಳಿಂದ ಕುಕ್ಕಿಸಿಕೊಳ್ಳುತ್ತಿರುವ ಗೋಮಾತೆಯರನ್ನು ಕೇಳಿ!

...ಗೋವಧೆಯನ್ನು ಉಗ್ರವಾಗಿ ಮತೀಯವಾಗಿ ವಿರೋಧಿಸುತ್ತಿರುವವರು ತಿಳಿಯರು. ವೇದಕಾಲದಲ್ಲಿ ಗೋಹತ್ಯೆ ಮಂತ್ರವತ್ತಾಗಿಯೇ ನಡೆದಿತ್ತು ಎಂಬುದನ್ನು. ಅತಿಥಿಗೆ ಸಂಸ್ಕೃತದಲ್ಲಿ 'ಗೋಘ್ನ' ...ಎನ್ನುತ್ತಿದ್ದರು. ಅಂದರೆ ಅತಿಥಿಗೆ ಗೋವನ್ನು ಬಡಿಸುವುದು ಇತ್ತೆಂದಾಯಿತು. ವಸಿಷ್ಠರಂಥ ಋಷಿಗಳೂ ಗೋಮಾಂಸ ತಿನ್ನುತ್ತಿದ್ದರೆಂಬುದನ್ನು ಒಂದು ಸಂಸ್ಕೃತ ನಾಟಕದಲ್ಲಿ (ಉತ್ತರ ರಾಮಚರಿತ) ... – ರಾಷ್ಟ್ರಕವಿ ಕುವೆಂಪು ಡಿಸೆಂಬರ್ 10, 1966ರಂದು ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದಲ್ಲಿ ನಡೆದ ಕವಿಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುತ್ತಾ...



ಸಮ್ಮೇಳನ ಜರುಗಿತು ಸಾಹಿತ್ಯ ಸೊರಗಿತು


ಗದಗಿನ ಸಾಹಿತ್ಯ ಸಮ್ಮೇಳನ ಮುಗಿದಾಗ ಬಹುತೇಕ ಸಾಹಿತ್ಯಪ್ರಿಯರ ಅನಿಸಿಕೆಯೇನಾಗಿತ್ತು ಗೊತ್ತೆ? 'ಸಮ್ಮೇಳನ ಸಕ್ಸಸ್, ಸಾಹಿತ್ಯ ಡೆಡ್...' ಎಂಬುದಾಗಿತ್ತು.



ತೋಂಟದಾರ್ಯ ಮಠದ ಜಾತ್ರೆಯಲ್ಲಿ ಸಂಭ್ರಮಿಸುವಂತೆ ಇಲ್ಲೂ ಸಂಭ್ರಮಿಸಿದ ಜನ ಜಾತ್ರೆಗೆ ಬಂದು ಫಳಾರ ತಿಂದು, ಚಾ ಕುಡಿದು ಖುಷಿಪಟ್ಟರಷ್ಟೇ. ಗದಗಿನಲ್ಲಿ ಸಾಹಿತ್ಯ ಸಮ್ಮೇಳನ ನಿಗದಿಯಾದಾಗ ತಯ್ಯಾರಿಗೆ ಸಮಯ ಕಡಿಮೆಯಿತ್ತು. ಜಿಲ್ಲಾ ಕಸಾಪದವರು ಶ್ರೀರಾಮುಲು ಮತ್ತು ಸ್ಥಳೀಯ ಶಾಸಕರಿಗೆ ಸಂಪೂರ್ಣವಾಗಿ ಶರಣು ಹೊಡೆದರು. ಅಲ್ಲಿಂದಲೇ ಸಮ್ಮೇಳನ ಬಿಜೆಪಿ ಪಕ್ಷದ ಕಾರ್ಯಕ್ರಮದ ರೂಪ ಪಡೆಯತೊಡಗಿತು. ಗೀತಾನಾಗಭೂಷಣರು ಸಮ್ಮೇಳನಾಧ್ಯಕ್ಷರಾಗಿದ್ದೇ ತಡ ಆ ಖುಷಿ, ಹೆಮ್ಮೆಗಳಲ್ಲಿ ಎಲ್ಲ ಅಧ್ವಾನಗಳು ಬೆಳಕಿಗೆ ಬರಲೇ ಇಲ್ಲ. ಸಮ್ಮೇಳನದ ಆಯೋಜಕರು ಮೂಲಭೂತ ಸೌಲಭ್ಯಗಳ ಹೊರತಾಗಿ ಬೇರಾವ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಈ ಕಾರಣಕ್ಕಾಗಿ ಸಮ್ಮೇಳನ ಎಂದಿನಂತೆ ಜನಮುಖಿಯಾಗಿರಲೇ ಇಲ್ಲ. ಕಸಾಪದಿಂದ ಇಂತಹ ಸೂಕ್ಷ್ಮತೆ ನಿರೀಕ್ಷಿಸುವುದೇ ದಡ್ಡತನವೇನೋ? ಒಟ್ಟನಲ್ಲಿ ಕಸಾಪ ಬಯಸುವಂತೆ ಸಮ್ಮೇಳನ ಅದ್ದೂರಿ ಜಾತ್ರೆಯಾಗಿ ಮಾರ್ಪಟ್ಟಿದ್ದು ಮಾತ್ರ ಸತ್ಯ.

ಒಂದೆರಡು ಗೋಷ್ಠಿಗಳನ್ನು ಬಿಟ್ಟರೆ ಬಹುತೇಕ ಗೋಷ್ಠಿಗಳು ಅಕಾಡೆಮಿಕ್ ಸ್ವರೂಪ ಪಡೆದುಕೊಂಡಿದ್ದವು. ರೆಡಿಮೇಡ್ ಭಾಷಣ, ರೆಡಿಮೇಡ್ ಪ್ರಬಂಧಗಳನ್ನು ರಣಬಿಸಿಲಿನಲ್ಲಿ ಬೆಂಕಿಯಂತೆ ಉಗುಳಿದರೆ ವಿನಃ ಅಲ್ಲಿ ಜನಪರ ಕಾಳಜಿಯ ಚರ್ಚೆಗಳಿಗೆ ಆಸ್ಪದವನ್ನೇ ನೀಡಲಿಲ್ಲ. ಕನ್ನಡ ಚಿನ್ನದಂತಹ ಭಾಷೆ, ಕರುನಾಡು ಗಂಧದ ಬೀಡು ಎಂಬ ತಥಾಗಥಿತ ಒಣಹೆಮ್ಮೆಗಳೇ ವಿಜೃಂಭಿಸಿದವೇ ಹೊರತು ಜನಸಮುದಾಯದ ಬದುಕಿನ ಸದ್ಯದ ತುರ್ತುಗಳ ಬಗ್ಗೆ ಚರ್ಚೆಗಳೇ ನಡೆಯಲಿಲ್ಲ. ಗೀತಾ ನಾಗಭೂಷಣರು ಆಗಾಗ ವೇದಿಕೆಯಲ್ಲಿ ಕಾಣಿಸಿಕೊಂಡು ಪ್ರಭುತ್ವ ವಿರೋಧ ಚಾಟಿ ಏಟುಗಳನ್ನು ಕೊಡುತ್ತಿದ್ದುದು ಮಾತ್ರ ಸಮಾಧಾನಕರವಾಗಿತ್ತು. ಕರ್ನಾಟಕ ಮತ್ತು ಪರಿಸರ ಎಂಬ ಗೋಷ್ಠಿಯಲ್ಲಿ ರಹಮತ್ ತರೀಕೆರೆ ನೆರೆಸಂತ್ರಸ್ತರ ಸಮಸ್ಯೆಗಳನ್ನು ದಾಖಲಿಸಿದ್ದು ಸರ್ಕಾರದ ಕಿವಿಗೆ ಬಿತ್ತೋ ಇಲ್ಲವೋ ಗೊತ್ತಿಲ್ಲ. ಕವಿಗೋಷ್ಠಿಯಲ್ಲಿ ಸುಬ್ಬು ಹೊಲೆಯಾರ್, ಬಿ.ಎಂ. ಹನೀಫ್, ಕೆ. ಶರೀಫಾರಂತಹ ಕೆಲವೇ ಕೆಲವರ ಕವಿತೆಗಳನ್ನು ಬಿಟ್ಟರೆ ಉಳಿದುವೆಲ್ಲ 'ಹಾಡು'ಗಳಂತಿದ್ದವು.

ಮನಸ್ಸು ಮಾಡಿದ್ದರೆ ರಾಜ್ಯ ಕಸಾಪ ಅಧ್ಯಕ್ಷ ನಲ್ಲೂರು ಪ್ರಸಾದ್, ಜಿಲ್ಲಾ ಕಸಾಪ ಅಧ್ಯಕ್ಷ ಎ.ಬಿ. ಹಿರೇಮಠ ಗೋಷ್ಠಿಗಳನ್ನು



ಸಂವಾದಸ್ವರೂಪದ ಚರ್ಚೆಗಳನ್ನಾಗಿ ರೂಪಿಸಬಹುದಿತ್ತು. ಆದರೆ ಇವರಿಬ್ಬರೂ ಊಟ, ವೇದಿಕೆಗಳ ಅಲಂಕಾರದ ಬಗ್ಗೆ ತಲೆ ಕೆಡಿಸಿಕೊಂಡು ಇವೆಂಟ್ ಮ್ಯಾನೇಜರ್‌ಗಳ ಪಾತ್ರ ವಹಿಸಿಬಿಟ್ಟರು. ಬಿಜೆಪಿ ಶಾಸಕರು ಮತ್ತು ಅವರ ಹಿಂಬಾಲಕರು ಮಿಂಚಲು ಅನುವು ಮಾಡಿಕೊಟ್ಟರು.

ದನದ ಕೊಟ್ಟಿಗೆಗಳಂತೆ ಬುಕ್‌ಸ್ಟಾಲ್‌ಗಳನ್ನು ಹಾಕಲಾಗಿತ್ತು. ನಾನೂರಕ್ಕೂ ಹೆಚ್ಚು ಸ್ಟಾಲ್‌ಗಳಿಗೆ ಅನುಮತಿ ನೀಡಿದ್ದೇ ಅಧ್ವಾನಕ್ಕೆ ಕಾರಣವಾಗಿತ್ತು. ರಾತ್ರಿ ಹೊತ್ತಿನಲ್ಲಿ ಪುಸ್ತಕಗಳನ್ನು ಕಾಯಬೇಕಾದ ಎಕ್ಸ್‌ಟ್ರಾ ಕೆಲಸವೂ ಪ್ರಕಾಶಕರ ಮೇಲಿತ್ತು! ಪ್ರಕಾಶನದ ಸ್ಟಾಲ್ ನಂಬರ್‌ಗಳ ಮಾಹಿತಿ ಫಲಕವೇ ಇರಲಿಲ್ಲ. ನಾನೂರು ಸ್ಟಾಲ್‌ಗಳಲ್ಲಿ ತಮಗೆ ಬೇಕಾದ ಪ್ರಕಾಶನದ ಸ್ಟಾಲ್‌ಗಳನ್ನು ಹುಡುಕಲು ಸಾಹಿತ್ಯಪ್ರಿಯರು ಹರಸಾಹಸ ಮಾಡಬೇಕಾಯಿತು.

ಸಮ್ಮೇಳನದ ಅಂಗವಾಗಿ 76 ಪುಸ್ತಕಗಳನ್ನು ಪ್ರಕಟಿಸಬೇಕಿದ್ದ ಕಸಾಪ ಇನ್ನೂ ಪ್ರಿಂಟ್ ಮಾಡುವುದರಲ್ಲೇ ಇದೆ. ಆದರೆ ಸಮ್ಮೇಳನದ ಮುಖ್ಯ ವೇದಿಕೆಯಲ್ಲಿ ಪುಸ್ತಕಗಳ ಮುಖಪುಟಗಳನ್ನು ಬಿಡುಗಡೆಗೊಳಿಸಿ, ಪುಸ್ತಕಗಳು ಬಿಡುಗಡೆಗೊಂಡಿವೆ ಎಂಬಂತೆ ಸಾರಿದ್ದು ಮಾತ್ರ ಸಾಹಿತ್ಯಪ್ರಿಯರಿಗೆ ಮಾಡಿದ ಮೋಸವೇ ಸರಿ.

ಗೀತಾನಾಗಭೂಷಣರ ದಿಟ್ಟ ನುಡಿಗಳಿಲ್ಲದಿದ್ದರೆ ಈ ಸಮ್ಮೇಳನದ ಬಣ್ಣ ಬಯಲಾಗಿಬಿಡುತ್ತಿತ್ತು. ಸದ್ಯಕ್ಕೆ ಅಕ್ಷರಮಟ್ಟಿಗೆ ಸಮ್ಮೇಳನ ಸಕ್ಸಸ್‌ಬಿಡಿ.

-ವಿನಯ್ ಹುರಳಿಕೊಪ್ಪಿ

ನೀರಲ್ಲೂ ರಾಮುಲು

ಸಮ್ಮೇಳನವನ್ನು ಚುನಾವಣಾ ಪ್ರಚಾರ, ಸಾಮೂಹಿಕ ಮದುವೆಗಳ [illegible] ಅವಿವೇಕ ನೀರಿನ ಬಾಟಲುಗಳ ಮೇಲೆ ತನ್ನ ಚಿತ್ರ ಹಾಕಿಕೊಂಡು [illegible] ನೀರಿನ ಬಾಟಲಿಗಳ ಮೇಲೆ ತನ್ನ ಫೋಟೋ [illegible]

'ಕಾವ್ಯ-ಕುಂಚ-ಗಾಯನ' ಕಾರ್ಯಕ್ರಮದಲ್ಲಿ [illegible] ಮಾಡಿಬಿಟ್ಟಿದ್ದ!



ಒಂಚೂರು ದೂರದಿಂದ ಒಂಚೂರು ಹತ್ತಿರದಿಂದ!



ಹೆಂಗದಿರಿ ಗೌರಿ ಮೇಡಮ್ಮವ್ರ? ಆರಾಮ್ ಅದಿರಲ್ಲರಿ?

ನಮ್ಮೂರಲ್ಲಿ ಅಂತೂ ಇಂತೂ ಸಾಹಿತ್ಯ ಸಮ್ಮೇಳನ ಆರಾಮಾಗಿ ಮುಗೀತು ಅನ್ನಾದ ಮೊದ್ಲಿಗೆ ಖುಷಿಯ ವಿಚಾರ ನೋಡ್ರಿ. ಭಾಳ ಅಸ್ತವ್ಯಸ್ತ ಆಗತೈತೇನೋ ಅಂತಾ ಹೆದರಿಬಿಟ್ಟದ್ವಿ. ಅಬ್ಬಾ ಎಲ್ಲಾ ಚೊಲೊತ್ಯನಗ ಆತು ಬಿಡ್ರಿ. ಆದರೂ...

ಸಂಗರ ಇದು ಫಸ್ಟ್ ಸಮ್ಮೇಳನ್ರಿ. ಟೋಟಲಿ ಹೇಳೋದಾದ್ರ ಸಮ್ಮೇಳನ ಸಕ್ಸಸ್! ಆದ್ರ ಸಾಹಿತ್ಯ ಮಾತ್ರ ಜಸ್ಟ್ ಪಾಸ್! ಪ್ರತಿದಿನಾನೂ ಒಂದಲ್ಲ, ಎರಡಲ್ಲ, ಮೂರ್‍ನಾಕು ಬಂಡಾಯದ ದನಿ ಇದ್ದ ಇದ್ವು. ಸರ್ಕಾರಕ್ಕೂ ಸರಿಯಾಗೆ ಇಕ್ಕಿದ್ರು.. ಬಟ್ ಏನಪಾ ಅಂದ್ರ ಸಾಹಿತ್ಯ ಮಾತ್ರ ಗದಗಿನ ಬಿಸಿಲ್ ಹೊಡೆತಕ್ಕ ಸೊರಗಿದಂಗ ಕಾಣತಿತ್ತು ನೋಡ್ರಿ ಅಕ್ಕಾರ.

ಪರ್ಸನಲಿ ನಂಗ ಅನಿಸಿದ ಪ್ರಕಾರ, ಎರಡು ಇಂಪಾರ್ಟೆಂಟ್ ಕಂಡ್ವು ನೋಡ್ರಿ. ಗೀತಕ್ಕ ಯುಡಿಯೂರಪ್ಪನ ಮುಖಕ್ಕ ಹೊಡೆದಂಗ ಮಾತಾಡಿದ್ರು. ಮತ್ತ ನೊಂದೋರು, ಮಹಿಳೆಯರ ಪರ ಸಾಹಿತ್ಯ ಬರೀರಿ ಅಂತಾ ಹೇಳಿದ್ದು ಸೈತ ಖರೇನ ಐತ್ರಿ.

ಇನ್ನೊಂದು ಅಂದ್ರ, ರಹಮತ್ ಸರ್ ನೆರೆ ಸಂತ್ರಸ್ತರ ಪರಿಸ್ಥಿತೀನ ಕಣ್ಣಿಗೆ ಕಟ್ಟಂಗ ಹೇಳಿ, ಪರಿಹಾರದ ಹೆಸರೊಳಗ ಮಠದೋರು ಮಾಡ್ತೀರೊ ಮೋಸಾನೂ ಬಿಚ್ಚಿಟ್ರು ಭಾಳ ಒಳ್ಳೇ ಕೆಲಸ ಮಾಡಿದ್ರು ನೋಡ್ರಿ ಮೇಡಮ್ಮಾರ..

ಆಮ್ಯಾಲ ಒಂದೆರಡು ಹತ್ತಿರದಿಂದ ಕಂಡಿದ್ದ ಘಟನೆ ಹೇಳಲ್ರಿ? ಒಂದು ಗೋಷ್ಠಿ ಮುಗಿದ ಮ್ಯಾಲ ರಹಮತ್ತು ಅವ್ರ ಬೀಬಿ, ಮತ್ತೊಂದಿಷ್ಟು ಸಾಹಿತ್ಯಪ್ರೀತಿಯ ಪೋಕರಾ-ಪೋಕರಿಗಳು ಮಾತಾಡ್ತ ಇದ್ರುರಿ. ನಿಮ್ಮ ಬೆಂಗಳೂರ್ ಕಡೆಯಿಂದ ಬಂದೋರು ನಮ್ಮೂರ್ ಬಿಸಿಲಿಗೆ ನಿತ್ರಾಣಾಗಿ ಉಸ್ಸ್ ಅಂತಿದ್ರ, ಆ ಬಳ್ಳಾರಿ ಪೀರಬಾಷಾ ಮಾತ್ರ 'ಅಲ್ರೊ ಮಾರಾಯ, ಇಲ್ಲಿ ಬಿಸಿಲ್ ಎಲ್ಲೈತ್ರೋ ಮಾರಾಯ' ಅಂತಾ ಆರಾಮ್ನೇ ನಿಂತಿದ್ರು! ಅದ ಹೊತ್ತಿನೊಳಗ ಒಬ್ಬಾಕಿ ಹೆಣ್ಮಗಳು ಬಗಲಾಗೊಂದು ಕೂಸು ಎತ್ತಿಕೊಂಡು ಹೊಂಟಿದ್ಲು. ಆ ಕೂಸಿಗರ ರಹಮತ್ ಸರ್ ಎದೆ ಮೇಲಿನ ಬಣ್ಣ ಬಣ್ಣದ ಬ್ಯಾಡ್ಜ್ ಮ್ಯಾಲ ಆಸೇರಿ. ಆದ್ರ ಅದರವ್ವ ಬರಬರ ಹೋಗಿಬಿಟ್ಲು. ರಹಮತ್ ಹೇಂತಿ ಈ ವಿಷಯಾನ ರಹಮತ್ ಗಮನಕ್ಕ ತಂದಿದ್ದ ತಡ, ರಹಮತ್ತು ಸರು ಚಿಕ್ಕಮಕ್ಕಳಂಗ ಓಡೋಡಿ ಹೋಗಿ ಆ ಮಗೂನ್ನ ಎತ್ತಿಕೊಂಡು ತಮ್ಮ ಬ್ಯಾಡ್ಜ್ ತೆಗೆದು ಅದರ ಎದಿಗಿ ಸಿಗಿಸಿ, ಗಲ್ಲಕ್ಕೆರಡು ಉಪ್ಪಾ ಕೊಟ್ರು, ತಿನ್ನಾಕ ತಿನಿಸು ಕೊಡಿಸಿ ಮಕ್ಕಳಂಗ ಖುಷಿ ಆಗಿದ್ದು ಇನ್ನೂ ಕಣ್ಣಿಗೆ ಕಟ್ಟಿದಂಗ ಐತ್ರಿ ಮೇಡಮ್. ಎಷ್ಟೊಂದು ದೂರ ಆದ್ರೂ ಎಷ್ಟೊಂದು ಹತ್ತಿರ!

ಸಾಹಿತ್ಯ ಜಾತ್ರೆ

ಕವನಸಂಕಲನವೊಂದನ್ನು ಹತ್ತಿಪ್ಪತ್ತು ಸ್ಟಾಲ್‌ಗಳಲ್ಲಿ ಹುಡುಕ್ಯಾಡಿ ಬಂದ ಕಾಲೇಜು ಯುವಕನೊಬ್ಬ ಸೂಳಿಭಾವಿಯವರ ಲಡಾಯಿ ಪ್ರಕಾಶನದ ಸ್ಟಾಲ್‌ಗೆ ಬಂದು ಸೂಳಿಭಾವಿಯವರನ್ನು ಮಾತಾಡಿಸಿದ. ಅವಂಗ ಬೇಕಾಗಿದ್ದು ವಿಭಾರವರ 'ಜೀವ ಮಿಡಿತದ ಸದ್ದು'!

ಸೂಳಿಭಾವಿಯವರ ಬಳಿಯೂ ಅದರ ಕಾಪಿ ಇರ್ಲಿಲ್ಲ. ಆ ಹುಡುಗನಿಗೆ ಮರುದಿನ ಬರಾಕ ಹೇಳಿದ್ರು. ಮರುದಿನ ಆ ಹುಡುಗನ ಕೈಗೆ ವಿಭಾಳ 'ಜೀವ ಮಿಡಿತದ ಸದ್ದು' ಸಂಕಲನ ನೀಡಿದಾಗ ಸೂಳಿಭಾವಿ ಸೇರಿದಂತೆ ಅಲ್ಲಿದ್ದ ಯುವ ಕವಿಗಳ ಕಣ್ಣಂಚಲ್ಲಿ ನೀರು. ಪುಸ್ತಕ ಪಡೆದ ಹುಡುಗನಿಗೆ ವಿಭಾ ಸೂಳಿಭಾವಿಯವರ ಪತ್ನಿ ಅನ್ನೋದಾಗಲೀ, ಅವರೀಗ ನಮ್ಮ ನಡುವೆ ಇಲ್ಲ ಎಂಬುದಾಗಲೀ ಅಲ್ಲಿವರೆಗೆ ಗೊತ್ತೆ ಇರಲಿಲ್ಲ. ಗೊತ್ತಾದಾಗ ಅವ್ನ ಕಣ್ಣಾಗೂ ನೀರು. ವೈದ್ಯರ ನಿರ್ಲಕ್ಷ್ಯದಿಂದಾಗಿ ನಮ್ಮನ್ನಗಲಿದ ಪ್ರತಿಭಾನ್ವಿತ ಯುವ ಕವಯಿತ್ರಿ ವಿಭಾ ತಮ್ಮ ಕವನಗಳ ಮೂಲಕ ಹೊಸಬರಿಗೆ ಸ್ಫೂರ್ತಿಯಾಗಿರ್‍ತಾರ, ಅಲ್ಲನು? 'ಮತ್ತೆ ಅರಳಲಿ ನೂರು ವಿಭಾಗಳು..'

ಒಂದೀಟು ಕಹಿ ವಿಷಯಾನೂ ಅದಾವ್ರಿ. ಹಾವೇರಿಯ ಬಂಡಾಯ ಕವಿಯೊಬ್ಬರು 'ಗೋ ಹತ್ಯಾ ನಿಷೇಧ'ದ ಪರವಾಗಿ ಮಾತಾಡಿಬಿಡಾದನ್ರೀ? ಸದ್ಯಕ್ಕ ಅವ್ರು 'ಕಡಿಯುತ್ತೇವ ನಾವು ಕಡಿಯುತ್ತೇವ ನಾವು, ಗೋವು ತಿಂದೋರ ಕೈಯ ಕಡಿದೇ ಕಡಿಯುತೇವ' ಅಂತಾ ಹಾಡ್ಲಿಲ್ಲ, ಅಷ್ಟ ಸಾಕು ಬಿಡವಾ.

ಎಲ್ಲ ಬರೋಬ್ಬರಿ ಮಾತಾಡಿದ ಗೀತಕ್ಕ ಹೋಗಿ ಹೋಗಿ ಆ ಅಡವಿದೊಂಗ ರಾಮುಲುಗ ತಮ್ಮ ಅಂದಿದ್ವು, ಅದೂ ಅಲ್ದ ಸಾಹಿತಿಗಳಿಗೆ ಒಂದು ಪ್ರೈಜು ಕೊಡಪಾ ಮಾರಾಯ ಅಂದಿದ್ದು ರೀಕ್ ಅನಿಸ್ಲಿಲ್ಲ ನೋಡ್ರಿ. ಲಾಸ್ಟಿಗೆ 11 ಲಕ್ಷ ರೊಕ್ಕ ಕೊಟ್ರಲ್ಲ? ಅದ್ನೆಲ್ಲ ಅಲ್ಲೇ ಸ್ಪಾಟಿನ್ಯಾಗ ನೆರೆ ಸಂತ್ರಸ್ತರಿಗೆ ಕೊಟ್ಟಿದ್ದರ ನಮ್ಮ ಗೀತಕ್ಕ ಇನ್ನೂ ದೊಡ್ಡಾಕಿ ಆಗ್ತಿದ್ರು. ನಾ ಹೇಳಾದು ಖರೆ ಐತಿಲ್ರಿ?

ಇನ್ನು ಕವಿಗೋಷ್ಠಿದೂ ಒಂದೀಟು ಹೇಳಾದೈತಿ ತಡ್ರಿ. ಎಂದಿನಂಗ ಒಂದ್ ಸ್ವಲ್ಪ ಡಲ್ಲು, ಒಂದಿಷ್ಟು ಸಾಧಾರಣ, ಕೆಲವ ಕೆಲವು ಚೊಲೊ ಇದ್ದವ್ರಿ. ಭ್ರಷ್ಟಾಚಾರದ ವಿರುದ್ಧ, ನೆರೆ ಪರಿಹಾರದ ಅನ್ಯಾಯದ ವಿರುದ್ಧ ಅರ್ಥಪೂರ್ಣ ಕವಿತಾ ಇದ್ದವ್ರಿ. ಎರಡು ಲಕ್ಷ ಜನರ ಜೀವ ತೆಗೆದುಕೊಂಡ ಹೈಟಿ ದುರಂತದ ಮ್ಯಾಲೂ ವಿಷಾದದ ಕವನಾ ಇತ್ತು. ಆದ್ರ ಯಾವ ಕವಿ ಕಣ್ಣಿಗೂ, ಮನಸ್ಸಿಗೂ ಬಸ್ತಾರ್ ಪ್ರದೇಶದ ಆದಿವಾಸಿಗಳ ಜೀವನ್ಮರಣದ ಪ್ರಶ್ನೆ ತಟ್ಟಿದಂಗ ಕಾಣಲಿಲ್ಲರಿ.

ಕಾವ್ಯಕೆ ನೂರು ಕಣ್ಣು
ಗದಗಲಿ ಕಾವ್ಯ ಓದಿದ
ವರ ಒಳಗಣ್ಣು ಮುಚ್ಚಿತ್ತೆ?
ಒಂದೇ ಕಣ್ಣ ತೆರೆದು ಇನ್ನೊಂದ
ಮುಚ್ಚಿ ಓದಿದ ಕವಿಗಳು
ಕಣ್ಣು ಹೊಡೆದರೆ ಪ್ರಭುತ್ವಕೆ?

ಮತ್ತೇನು ಹೇಳ್ಲಿ ಗೌರಕ್ಕ? ಮಾರ್ಚ್ ಆರಕ್ಕ ಸಿಗೋಣಲ್ಲರಿ?

ನಮಸ್ಕಾರ್ರಿ.

● ಶಶಿ, ಗದಗ

ಏನಾ ಆಗ್ಲಿ, ಕೃಟ್ಟ ಸರ್ಕಾರ ಇದ್ದಾಗ ಕಷ್ಟ ಬರಬಾರದ್ರೀ

ಜುಮ್ಮಿ ಮನೆಗೆ ಅಪರೂಪದ ಅತಿಥಿ ಬಂದಂತಹ ಸಂಭ್ರಮದಲ್ಲಿದ್ದಳು. ಅವಳ ಉತ್ಸಾಹಕ್ಕೆ ಕಾರಣ ವರ್ಗವಾಗಿ ಹೋಗಿದ್ದ ಕಲಕಪ್ಪ ಮಾಸ್ತರು ಗೆಳೆಯರ ಮದುವೆಗೆಂದು ಬಂದಿದ್ದರು. ಹಾಗೇ ಜುಮ್ಮಿ ಮನೆಗೆ ಹೋಗಿ, ಹೋಟೆಲಿಗೂ ಬಂದಿದ್ದರು. ಆಗ ಕಾಳಮಾವ,

"ಕಲಕಪ್ಪಾರೆ, ಯಂಗದೆ ನಿಮ್ಮ ಕಡೆ ದೇಸ" ಎಂದ. ...ಪ್ಪ ಕೇಳಿದ್ದೇ ತಡ,

...ಯ ಲು ಸೀ ಮೆ ಕಷ್ಟೆಪುರಾಣಿ

▶ಬಿ. ಚಂದ್ರೇಗೌಡ

"ನಮ್ಮ ದೇಶ ಹೋತು ಬಿಡ್ರಿ ಕಾಳಪ್ಪನವರ. ಅಲ್ರೀ ...ಹಿ ಬಂದ ಊರಾಗಿನ ಮನಿ ಮಠ ಜಾನುವಾರು ...ದವೊ ಯಪ್ಪಾ, ಏನಾರ ಮಾಡ್ರೊ ಅಂದ್ರ ಈ ...ಟ್ಟ ಸೂಳಿ ಮಕ್ಕಳಿಗೆ ಒಂದೀಟು ನೆದರೆ ಇಲ್ಲನೋಡ್ರಿ. ...ಯೂರವ ಪೊಲೀಸ್ ಪ್ಯಾದಿ ಮಗ ಹೇಳಿದಂಗ ಈ ...ರಪ್ಪ ಕುಣಿಯಾಕತ್ಯನ್ರಿ. ಅಲ್ರೀ ಕಾಳೇಗೌಡ್ರ, ನೀವಾ ... ಐದುನೂರು ವರ್ಷದ ಹಿಂದೆ ಕೃಷ್ಣದೇವರಾಯ ...ಭಿಷೇಕ ಮಾಡಿಕೊಂಡನಂತ. ಅವನಿಗೂ ಈ ...ಲೀಸ್ ಪ್ಯಾದೆ ಮಗನಿಗೂ ಏನ್ರಿ ಸಮಂದೈತೀ?"

"ಇಲ್ಲ ಬುಡು. ಇವುನೇನು ಅರುಸು ಮನೆತನದೋನೇ?"

"ಖರೆ ಹೇಳಿದ್ರಿ ನೋಡ್ರಿ ಮತ್ತ. ಆ ಕೃಷ್ಣದೇವರಾಯನ ...ಭಿಷೇಕಕ್ಕೆ ಬರೋಬ್ಬರಿ ನೂರು ಕೋಟಿ ರೂಪಾಯಿ ...ರ್ಚ ಮಾಡ್ತನಲ್ರಿ. ಅದೂ ಒಂದೇ ವಾರದಾಗ. ಅದೇ ...ವಾಗ ನಮ್ಮ ಹೊಳಿದಡದ ಮಂದಿಗಿ ಮನಿ ...ದ್ದವಲ್ರೀ. ನನಗನಕರ ಭಾಳ ಬ್ಯಾಸರಾಗೇತಿ ಬಿಡ್ರಿ. ... ಬೇಷ್ ಇದ್ನಿ. ನಾ ಯದಕ ಬರಕೋಗಿದ್ನೊ ... ಅನ್ನಂಗಾಗೇತಿ."

"...ಈಗ್ಲು ಬನ್ರಿ ಅತ್ತಗೆ" ಎಂದಳು ಜುಮ್ಮಿ.

"ಅಕ್ಕಾವರ, ಮುಂದ ಹೋದಮ್ಯಾಲೆ ಹಿಂದ ...ಗುದಿಲ್ರಿ. ಆಗಾಗ್ಗೆ ಬಂದು ಹೋಗಬವುದಷ್ಟೆರಿ."

"...ಹ್ವಳೆ ಬಂದಾಗ ನೀವೆಲ್ಲಿದ್ರಿ?"

"...ನಾ ಮನಿಯಾಗೆ ಇದ್ದನ್ರಿ. ನಮ್ಮ ಕಡಿಗಪ್ಪು ...ಗಲಿಲ್ಲಾ, ಆದ್ರೆ ಮೇಯಕ್ಕ ಹೋಗಿದ್ದ ನಮ್ಮ ಕುರಿ ...ವವುರಿ. ಏನಾ ಆಗ್ಲಿ ಕೃಟ್ಟ ಸರಕಾರ ಇದ್ದಾಗ ಕಷ್ಟ ...ಬಾರದ್ರಿ."

"ಅಂಗರೆ ಸರಕಾರ ಏನು ಮಾಡಿಲವೆ ಕಲಕಪ್ಪಾರೆ?" ... ಕಾಳಮಾವ.

"ಅವುರಿಗೆ ಮಾಡಾಕ ಟೈಂ ಸಿಗಲಿಲ್ರಿ ಆಗ. ಆ ...ಎಮ್ಮೆಲ್ಲೆ ಹೊತಗಂಡೋಗಿ ಹೈದರಾಬಾದಿನಾಗ ...ರಿ. ಈ ಕಡಿ ಅಧಿಕಾರಿಗಳು ತೆಲಿ ಮರಿಸಿಕೊಂಡು ಹೋದರ್ರಿ. ಗಂಜಿ ಕೇಂದ್ರ ಮುಚಿದವುರಿ. ನಮ್ಮ ಮಂದಿ ಉಳದು ಬದುಕಿದ್ದೇ ಹೆಚ್ಚುರಿ. ಮಂದಿ ಅವುರವುರಿಗೇ ಸಹಾಯ ಮಾಡಿಕೋಂತ ಯಂಗೊ ಉಳದಾರಿ. ಇಷ್ಟು ಕೃಟ್ಟ ಸರಕಾರನ ನನ್ನ ಜೀವನದಾಗ ನೋಢಲಿಲ್ರೀ."

"ಅಂಗಂತೀರ?"

"ಹೌದ್ರಿ. ಆ ಗುಂಡೂರಾಯ ನೂರುಪಾಲಿಗೆ ಬೇಷ್ ಇದ್ದನ್ರಿ. ಆವ ಆದ್ರ ಒಬ್ಬವುನೇ ಇದ್ದ. ಆದ್ರ ಈ ಸರಕಾರದಾಗ ಗುಂಡೂರಾಯನ ತರ ನೂರಾರು ಮಂದಿ ಆದಾರ್ರಿ. ಅಲ್ರೀ ನಮ್ಮ ಮಂದಿ ಸಾಯಕತ್ತಿದ್ರ ಸನುಮಾನ, ಸಮಾರಂಭ, ಉತ್ಸವ ಮಾಡಿಕೊಂತ ಕುಂತವುರಲ್ರೀ. ಈ ಹಲಕಟ್ ಸೂಳಿ ಮಕ್ಕಳಿಗೆ ಯದರಾಗೊಡಿಬೇಕು ನೀವಾ ಹೇಳ್ರೀ."

"ತಪ್ಪ ತಪ್ಪು. ಇಂತ ಟೇಮಲ್ಲಿ ಸನುಮಾನ ಸಮಾರಂಭ ಯಾವುದ್ನು ಮಾಡಬಾರ್ದು."

"ಅಲ್ರೀ ಕಾಳೇಗೌಡ್ರೆ, ಈ ಎಡೂರಪ್ಪ ಜನಗಳು ಕೂಡಿ ಇದ್ದನಪ್ಪ ಅಂದ್ರ ಆ ರೆಡ್ಡಿಗಳ ರಟ್ಟಿ ಹಿಡಿದು ಹೋಗ್ರೊ ನಿಮ್ಮವುರ ಅಂತೇಳಿ ಪಾರ್ಟಿಯಿಂದ್ಲೇ ಹೊರಗಾಕಬವುದಿತ್ತಲ್ರೀ. ಈಗ ನೋಡ್ರಿ ಅವುರು ಹೇಳಿದಂಗಾ ಕೇಳಿಕೊಂಡು ಕುಂತಾನ. ಮತ್ತ ಫಲವತ್ತಾದ ನೆಲ, ಅಡವಿ ಇರೊ ಜಾಗದಾಗ ಗಣಿಗಾರಿಕೆ ಮಾಡ್ರಪ್ಪ ನಾ ನೋಡಿಕೊಂಡ ಕುಂದರತನಿ ಅಂತ ಆರ್‌ಡರ್ ಪಾಸ್ ಮಾಡ್ಯಾನ್ರಿ. ಇವ ಇರಬೇಕೊ ಮನಿಗೋಗಬೇಕೋ ಹೇಳ್ರೀ."

"ನೋಡ್ರಿ ಕಲಕಪ್ಪಾರೆ, ರಾಜಿ ಅಂತ ಆದಮ್ಯಾಲೆ ಇಂತಿಷ್ಟು ಪರಸೆಂಟು ಅನ್ನಕ್ಕೆ ಬರದಿಲ್ಲ, ರಾಜಿ ಅಂದಮ್ಯಾಲೆ ಮುಗಿತು. ಪಾಪ ಎಡೂರಪ್ಪನ್ನ ಆ ರೆಡ್ಡಿಗಳು ತರಡಿಲ್ಲದ ನರಿಮಾಡಿ ಮಡಗ್ಯವುರೆ. ಅದ್ಕೆ ಅವುನ್ನ ನೋಡಿದ್ರೆ ನಗು ಬತ್ತದೆ. ಏನು ಮಾಡ್ತಿರೇಳಿ, ಓಟು ಕೊಟ್ಟು ಸರಕಾರ ತಂದಿದ್ದಿವಿ. ಅವುರು ಇರೋ ಗಂಟ ಸಯಿಸಿಕೊಬೇಕು" ಎಂದ ಉಗ್ರಿ.

"ಉಗ್ರಿಯುವರೇ, ಕಾಂಗ್ರೆಸಿನವರ ಗತಿ ಮಾತಾಡಬೇಡ್ರಿ. ಅವುರು ನಿಮ್ಮಂಗೇ ಹೇಳಿಕೊಂತ ಕುಂತಾರ್ರಿ. ಇದ್ದಿದ್ರಾಗ ದ್ಯಾವೇಗೌಡ್ರೆ ಪರವಾಗಿಲ್ಲರಿ. ಪಾಪ ಈ ಸಾಯೋ ವಯಸಿನಾಗ ಹೋರಾಟ ಮಾಡ್ತಿಕತ್ತಾರ."

"ಅವುರ ಮಾಡಿದ ಪಾಪ ಅವುರೇ ತೊಳಿಬೇಕಲವೇನ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಓಹ್ ನಮಸ್ಕಾರ್ರೀ ವಾಟಿಸ್ಸೆ, ಆರಾಮದೀರೇನು ನೀವು? ಇರತಿರಿ ಬಿಡ್ರಿ."

"ಏನ್ರಿ ಕಲಕಪ್ಪಾರೆ ಇಲ್ಲೀ?"

"ನನ್ನ ಕ್ವಲೀಗ್ ಲಗ್ನಿತ್ರಿ, ಅದಕಾ ಬಂದೀನಿ."

"ಕ್ವಲೀಗ್ ಅಂದ್ರೆ ಪುಡಸಾಮಿಗೌಡನ ಮಗನೆ?"

"ಉನ್ರಿ, ಅವ ಲಗ್ನಪತ್ರಿಕಿ ಕಳಿಸಿದ್ದ ಅದಕಾ ಬಂದೀನಿ."

"ನೋಡಪ್ಪ, ಇಲ್ಲಿರೊ ನಮಗೇ ಇನ್‌ವಿಟೇಶನ್ ಇಲ್ಲ, ನಿಮಿಗೆ ಕಳಿಸ್ಯವುನೆ."

"ಅದೇನಾ ಏನೊ ನನಗ ಗೊತ್ತಿಲ್ರೀ. ಅವ ನನಗ ಕ್ವಲೀಗ್. ನಿಮಗ ಅಲ್ಲಾದಿಲೊ."

"ಇರ್ಲಿ, ನಿಮ್ಮ ಕಡೆ ಯಂಗಿದ್ದೀರಿ?"

"ನಿಮ್ಮ ಕಡೀಗ ಹೋಲಕಿ ಮಾಡಾಕ ಆಗುದಿಲ್ರೀ ವಾಟಿಸ್ಸೆ. ನಮ್ಮ ಕಡೆಗೆ ನಿಮ್ಮ ಕಡೆ ಜೀವನ ಹೋಲಿಸಿದ್ರೆ ನಿಮದೆ ಸ್ವರ್ಗರಿ. ಇಲ್ಲಿನ ರಸ್ತಿ ಮರಗಿಡ ಗದ್ದಿ ತೋಟ, ಅವುನವುನ ನಮ್ಮ ಕಡೆಗೆ ಹ್ಯಂಗ ಬರಬೇಕ್ರೀ?"

"ನಿಜ ಕಂಡ್ರಿ ಕಲಕಪ್ಪಾರೆ. ನಾವ್ರ ಬಾಳ ಒಳ್ಳೆ ರಾಜರಕೈಲಿ ಆಳಿಸಿಕೊಂಡಿದ್ದಿವಿ. ಅದರಲ್ಲೂ ವಿಶ್ವೇಶ್ವರಯ್ಯ, ಅದರಲ್ಲೂ ನಮ್ಮ ಕೃಷ್ಣರಾಜೇಂದ್ರ ಒಡೆಯರ್ ಕಾಲದಲ್ಲಂತೂ ಎಷ್ಟು ಕ್ಯಲಸಾಗ್ಯವೇ ಅಂದ್ರೇ. ಅದ್ಕೆ ನಮ್ಮ ಏರಿಯಾ ನೋಡಿ ನೀವು ಸ್ವರ್ಗ ಅಂತ ಹೇಳ್ತೀರಿ."

"ಹೌದ್ರಿ, ಅಂತ ರಾಜನ ಪಟ್ಟಾಭಿಷೇಕ ಮಾಡೂದ ಬಿಟ್ಟು ಆ ಕೃಷ್ಣದೇವರಾಯನ ಪಟ್ಟಕ್ಕ ನೂರುಕೋಟಿ ಖರ್ಚು ಮಾಡಿದರಲ್ರೀ?"



"ಮಾಡ್ಯಾಯ್ತಲ್ಲ ಬುಡಿ ಆ ಸುದ್ಯಾಕೆ" ಎಂದ ಸೀರ.

"ಖರೇ ಹೇಳಿದ್ರಿ ಸೀರಪ್ಪಾರೆ. ಕಬರಗೇಡಿ ಸರಕಾರ ಕಂಡದ್ದನ್ನೆಲ್ಲಾ ಮಾಡಿಕೋತಾ ಹೋಕ್ಯತಿ. ಅದಕ ಬುದ್ಧಿ ಹೇಳೂರು ಯಾರದಾರ್ರೀ?"

"ದ್ಯಾವೇಗೌಡ್ನೆ ಇಲ್ದೆಯಿದ್ರೆ ಇನ್ನೂ ಅದ್ವಾನಾಗದು" ಎಂದ ಕಾಳಮಾವ.

"ಕಾಳೇಗೌಡ್ರೆ, ಅದ್ವಾನ ಮಾಡಿದೋರು ಅವುರಾರೀ. ಪಾಪ ನಮ್ಮ ಧರಮಸಿಂಗ ಇವುರಿಗೆ ಏನು ಮಾಡಿದ್ನ್ರಿ, ಇವುರ ಹೇಳಿದ ಮಾತ ತಗಿತಿರಲಿಲ್ಲ, ಇವರು ಹಾಕಿದ ಗೆರಿ ದಾಟತಿರಲಿಲ್ಲರಿ. ಅಂಥವುನ್ನ ತಗದು ಈ ಎಡೂರಪ್ಪನ್ನ ಮುಖ್ಯಮಂತ್ರಿ ಮಾಡಿದೋರು ಯಾರು ಅಂತ ಮಾಡೀರೀ?"

"ಬೇಷ್ ಕಲಕಪ್ಪಾರೆ. ನಾನು ನಮ್ಮ ದೊಡ್ಡಪ್ಪನಿಗೆ ನೂರಾರು ಸಾರಿ ಹೇಳಿರೊ ಮಾತ್ನ ನೀವೂ ಹೇಳಿದ್ರಿ. ಅದಿರ್ಲಿ ಗದಗಕ್ಕೆ ಹೋಗಿರಲಿಲ್ವ?" ಎಂದ ವಾಟಿಸ್ಸೆ.

"ಹೋಗಿದ್ದಿನ್ರಿ, ಆದ್ರ ಯಾಕೊ ಏನೊ ಸಾಹಿತ್ಯ ಸಮ್ಮೇಳನ ಮದಿಲಿನಂಗಿಲ್ರೀ."

"ಒಂಥರಾ ಪಿಂಜರಾಪೋಲು ಸಾಯಿತಿಗಳ ಸಭೆ ಆಯ್ತಾ ಅದಲ್ವಾ."

"ಅಂಗೇನುಯಿಲ್ರೀ. ಯಾವದಾ ಸಬಿ ನೋಡಿದ್ರೂ ಇದು ಹಿಂಗಿರಬಾರದಿತ್ತು, ಹಿಂಗೆ ನೆಡಿಬಾರದಿತ್ತು ಅನಸಬಾರದ್ರೀ. ಅದರಾಗೂ ಈ ಬಿಜೆಪಿ ಮಂದಿಗೂ ಸಾಹಿತ್ಯ ಸಬಿಗೂ ಸಮಂದಿಲ್ರೀ. ಅವರ ಸಬೀನೆ ಬ್ಯಾರೆ ಇರತವು."

"ಅಂಗಂತೀರಾ?"

"ಹೌದ್ರಿ. ಈ ಸಾಯಿತ್ಯ ಸಬೀ ಏನದಾ ವಲ್ಲಾ, ಅವು ಜಾತ್ಯಾತೀತವು. ಅಲ್ಲಿ ಬರೋ ಮಂದೀನೆ ಬ್ಯಾರೆ. ಈ ಜಾತೀವಾದಿ ಮತೀಯ ವಾದಿಗಳ ಸಬೀನೆ ಬ್ಯಾರೆ, ಈ ಸಾಹಿತ್ಯ ಸಮ್ಮೇಳನವೇ ಬ್ಯಾರೆ."

"ಸರಿಯಾಗೇಳಿದ್ರಿ. ನಾನು ಮೊದಲಿಂದ ಹೇಳ್ತ ಬಂದಿರದೇ ಅದು."

"ಅಂತವುರು ಮಾಡಿದ ವೇದಿಕೆ ಮೇಲೆ ಇದ್ದ ಸಬಿ ಏನದಾವು, ಅವು ಏನೆಲ್ಲಾ ಮಾಡಿದ್ರೂ ಹಿಂಗಿರಬಾರದಿತ್ತು ಅನಸತೈತಿ."

"ಓ.ಕೆ., ನಮ್ಮ ಗೀತಕ್ಕ ಏನಂತರೆ?"

"ಯಾವ ಗೀತಕ್ಕನ್ರೀ?"

"ಅದೇ ಸಮ್ಮೇಳನಾಧ್ಯಕ್ಷೆ ಆಗಿದ್ರಲ್ಲಾ ಆ ಗೀತಕ್ಕ."


"ಏ, ಆಕಿ ಭಾಳ ಗಟ್ಟಿ ಹೆಣ್ಣಮಗಳದಾಳೆ. ಒಂದಿಷ್ಟು ಸೂಕ್ಷ್ಮ ಕಡಿಮೆ. ಅದಕೆ ಆಕಿ ಏನ ಬರದ್ರು ಯರ್‍ರಾಬಿರ್‍ರಿ ಬರೀತಾಳೆ. ಅದಕ ಅವುಳನ್ನ ಬಂಡಾಯದಾಕಿ ಬಂಡಾಯದಾಕಿ ಅಂತಾರ. ಒಮ್ಮೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‍ರನ್ನ ಉಂಡಮನಿ ಜಂತಿ ಏಣಿಸೋ ಮಂದಿ ಇವ್ವ ಅಂದಿದ್ದಳರೀ!"


"ಅದು ನನಿಗೂ ಗೊತ್ತು, ಆದ್ರು ಹನ್ನೊಂದು ಲಕ್ಷ ಲಾಟರಿ ಹದದಂಗೆ ಸಿಗತಲ್ಲ ಹೇಳು. ನ್ಯನಿಸಿಗಂಡ್ರೆ ಪಟ್ಟೆ ಉರಿತದೆ" ಎಂದ ವಾಟಿಸ್ಸೆ.

"ಆಕಿ ಆ ರೊಕ್ಕನ ಬಡಬಗ್ಗರಿಗೆ ಕರ್ಚಮಾಡ್ತಳೆ ಬಿಡ್ರಿ. ಅದಾಕಡಿಗಿರ್ಲಿ, ನೀ ನನಗೆ ಕೊಡೊ ರೊಕ್ಕ ಮರತಾಬಿಟ್ಟೇನು."

"ಇದ್ರೆ ಕೊಡ್ತಿದ್ದೆ. ಇನ್ನೊಂದು ಸತಿ ಬನ್ನಿ ಗ್ಯಾರಂಟಿ ಕೊಡ್ತೀನಿ!" ●

ಕನ್ನಡ ಕತೆಗಳ ಸಂಗ್ರಹ





ಮೊನ್ನೆ ಒಂದು ಕತೆಗಳ ಸಂಗ್ರಹ ಬಂತು. ಅದರ ಹೆಸರು **Selected Kannada Short Stories.** ಇಪ್ಪತ್ತೆರಡು ಕನ್ನಡ ಸಣ್ಣ ಕತೆಗಳನ್ನು ಆರಿಸಿ ತಾವು ಮತ್ತು ಬೇರೆ ಬೇರೆ ಲೇಖಕರ ನೆರವಿನಿಂದ ಇಂಗ್ಲಿಷ್‌ಗೆ ಅನುವಾದಿಸಿ ಪ್ರೊ. ಜಿ.ಎಸ್. ಆಮೂರ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಈ ಪುಸ್ತಕ ಹೊರ ತಂದಿದ್ದಾರೆ. ಮೇಲುನೋಟಕ್ಕೆ ಎಲ್ಲ ಕತೆಗಳನ್ನೂ ಒಳಗೊಂಡಂತೆ ಕಾಣುವ ಈ ಪುಸ್ತಕವನ್ನು ಇನ್ನಷ್ಟು ಆಳವಾಗಿ ನೋಡುತ್ತಾ ಹೋದರೆ ಇದನ್ನು ಟೀಕಿಸುವುದು ಅನಿವಾರ್ಯವಾಗುತ್ತದೆ. ಇಲ್ಲಿ ಮಾಸ್ತಿಯವರ ಕತೆಗಳಿಂದ ಹಿಡಿದು ಬೋಳುವಾರು ಮಹಮದ್ ಕುಂಞ್ಞವರೆಗ ಕತೆಗಳಿವೆ; ವೈವಿಧ್ಯವೂ ಇದೆಯೆನ್ನಿಸುತ್ತದೆ. ಆದರೆ ಬರೀ ಆವೃತ್ತವಾಗುವುದು, ವೈವಿಧ್ಯಮಯವಾಗಿರುವುದು, ಮುತ್ಸದ್ಧಿತನದಿಂದ ಕತೆಗಳನ್ನು ಆರಿಸಿಕೊಳ್ಳುವುದು-ಒಟ್ಟಿನಲ್ಲಿ ಎಂಥ ಮೋಸದ ಪುಸ್ತಕವಾಗಿ ರೂಪುಗೊಳ್ಳಬಹುದು ಎಂದು ನೋಡಬೇಕು.

ಯಾವುದೇ ಸಾಹಿತ್ಯ ಪ್ರಕಾರ ಬೆಳೆಯುವ, ಅರ್ಥಪೂರ್ಣವಾಗಿರುವ, ಜೀವಂತ ಪ್ರಕಾರ; ಅಲ್ಲಿಯ ಕೃತಿಗಳನ್ನು ಆರಿಸುವುದು ಮತ್ತು ತಿರಸ್ಕರಿಸುವುದೇ ಒಂದು ವಿಧದ ನಿಷ್ಠುರ ವಿಮರ್ಶೆ; ಬರೆಯುವ ವಿಮರ್ಶೆಗಿಂತ ಈ 'ಆರಿಸುವ ವಿಮರ್ಶೆ' ಬಹುಮುಖ್ಯವಾದದ್ದು. ಕನ್ನಡ ಸಣ್ಣ ಕತೆಗಳನ್ನು ನೋಡಿದವರಿಗೆ ಅಲ್ಲಿಯ ಕೆಲವು ವೈಚಿತ್ರ್ಯಗಳು, ಆ ವೈಚಿತ್ರ್ಯಗಳಿಂದಾಗಿಯೇ ಕನ್ನಡಕ್ಕೆ ದಕ್ಕಿದ ಅಪರೂಪದ ಕಾಣಿಕೆ ತಿಳಿದುಬರುತ್ತದೆ. ಬಿ.ಸಿ. ದೇಸಾಯಿಯವರ 'ಸಾವು' ಎಂಬ ಸಣ್ಣ ಕತೆಗಳ ಪುಸ್ತಕ ಪ್ರಕಟವಾದೊಡನೆ ಈಗಾಗಲೇ ಇದ್ದ ಕತೆಗಳ ಅರ್ಥ ಮತ್ತು ಯೋಗ್ಯತೆ ಬದಲಾಗುತ್ತದೆ; ಈತ ನಮ್ಮ ಶ್ರೇಷ್ಠ ಕತೆಗಾರ. ಅಲ್ಲಿ ಗ್ರಹಿಕೆಯ, ನಿರೂಪಣೆಯ ಹೊಸತನ ಕಾಣದ ಸಂಗ್ರಹಕಾರ ...ಹಿತ್ಯ ಪ್ರಕಾರಕ್ಕೇ ಅನ್ಯಾಯ ಮಾಡುತ್ತಾನೆ. ಹಾಗೆಯೇ ರಾಜಲಕ್ಷ್ಮಿ ಎನ್. ರಾವ್ ಅವರ 'ಅಮರಿಯಾ' ಮತ್ತು 'ವೈಶಾಖ ಶುದ್ಧ ಪೂರ್ಣಿಮೆ.' ಇವರಿಬ್ಬರನ್ನೂ ಬೇಕೆಂತಲೇ ...ಸುತ್ತಿದ್ದೇನೆ. ಒಂದು ಸಂಗ್ರಹಕ್ಕೆ ಈ ಇಬ್ಬರು ಸೇರಿದೊಡನೆ ಬೇರೆಯವರ ಕತೆಗಳ ಮೌಲ್ಯ ಬದಲಾಗುತ್ತದೆ; ಸಂಗ್ರಹಕ್ಕೆ ಜೀವಂತಿಕೆ ಬರತೊಡಗುತ್ತದೆ. ಆಮೂರರು ಇಲ್ಲಿ ಸೇರಿಸಿರುವವರಲ್ಲಿ ...ನ್ನು ಬಿಟ್ಟುಬಿಡಬೇಕಿತ್ತು ಎಂಬುದನ್ನು ಹೇಳಿ ಲೇಖಕರ ಎದೆಯಲ್ಲಿ ಬೆಂಕಿಹಚ್ಚಿದೆ (ನನ್ನ ಕತೆಯನ್ನೂ ಹಾಕಿದ್ದಾರೆ, ಆ ಬಗ್ಗೆ ನನಗೇನೂ ಸಂತೋಷವೂ ಇಲ್ಲ, ದುಃಖವೂ ಇಲ್ಲ) ...ಪ್ರದೇ ಸಂಗ್ರಹ ಬರೀ ಮುತ್ಸದ್ಧಿತನದ, ರಾಜಕೀಯ ಪ್ರಕ್ಕಲುತನದ ಸಂಗ್ರಹವಾಗದೆ ವಿಮರ್ಶಾತ್ಮಕ ಭಾಷ್ಯ ಮತ್ತು ಜೀವಂತಿಕೆಯ ಸಂಕೇತ ಆಗಬೇಕಾದರೆ ಮೇಲೆ ಹೇಳಿದ ಬಿ.ಸಿ. ...ಯ, ರಾಜಲಕ್ಷ್ಮಿ, ಬಾಗಲೋಡಿ ದೇವರಾಯ, ರಾಘವೇಂದ್ರ ಖಾಸನೀಸ-ಇವರನ್ನು ಬಿಡಕೂಡದು. ಮತ್ತು ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಲ್ಲೆ: ಟಿ.ಜಿ. ರಾಘವ, ಎ.ಕೆ. ...ಮಾನುಜನ್, ಚದುರಂಗ, ವೈದೇಹಿ, ಬಾನು ಮುಷ್ತಾಕ್, ಭಾರತೀಪ್ರಿಯ ಮುಂತಾದವರಾದರೂ ಸಂಕಲನದಲ್ಲಿ ಸೇರಿದೊಡನೆ ಈಗ ಸೇರಿರುವ ಕೆಲವರು ತಾವೇ ಜಾಗ ಖಾಲಿ ...ಡುತ್ತಾರೆ. ಅವರ ಕತೆಗಳನ್ನೆಲ್ಲ ನಿಜವಾದ ರಸಿಕರಾಗಿ, ಅಭಿರುಚಿವಂತರಾಗಿ, ವಿಮರ್ಶಕರಾಗಿ ಆಮೂರರು ಓದಿದರೆ ನನ್ನ ಆಕ್ಷೇಪಣೆ ಅವರಿಗೆ ಅರ್ಥವಾಗುತ್ತದೆ. ...ಗಿರುವಂತೆ ಈ ಸಂಕಲನ ಕರುಣಾಜನಕವಾಗಿದೆ.


-ಜುಲೈ 14, 1993

ಗೌರ್ಮೆಂಟ್ ಬೊಕ್ಕಸ ಎಲ್ಲಿದೆ?

ಸರ್ಕಾರದ ಬೊಕ್ಕಸ ಬರಿದೋ ಬರಿದು. ಖಾಲಿಯೋ ಖಾಲಿ. ಅದರಲ್ಲಿ ಒಂದು ಬಿಡಿಗಾಸೂ ಇಲ್ಲ. ಅಂತ ಸಿದ್ಧರಾಮಯ್ಯನವರು ಮೈಕಿನೆದುರು ಕಿರುಚ್ತಿದ್ದರಲ್ಲ... ಅದ ಯಾರೋ ಇಬ್ಬರು ಕಳ್ಳರು ಕೇಳಿಸಿಕೊಂಡರಂತೆ. ರಾಜರ ಕಾಲ್ದಲ್ಲಿ ಬೊಕ್ಕಸ ಅನ್ನೋದು ಅರಮನೆ ಒಳಗೆ ಇರ್ತಿತ್ತು, ಅದರಲ್ಲಿ ದೇಶದ ಹಣಾನೆಲ್ಲ ತುಂಬ್ತಿದ್ರು. ಇನ್ನೇನು ಜೀವನವೇ ತುಟ್‌ಕಟ್ಟಿಗೆ ಬಂತು, ಹರ್‌ಗೀಜ ಜೀವನ ನಡೆಸಕಾಗಕಿಲ್ಲ ಅಂದಾಗ ಬೊಕ್ಕಸಕಾಯ್ತಿದ್ದೋರ

ಅಣಕ

ಎಚ್.ಎಲ್. ಕೇಶವಮೂರ್ತಿ



ಹೆಂಗೆಂಗೋ ವೈನ ಮಾಡಿ ಯಾಮಾರ್ಸಿ ಅದನ್ನ ಕೊಳ್ಳೆ ಹೊಡೀತಿದ್ರಂತೆ. ನಮ್ಮ ಹಿರೀಕರು ಅನ್ನೋದ ಕೇಳಿದ್ದೊ. ಈಗ ಗೌರ್ಮೆಂಟ್ ಬೊಕ್ಕಸ ಎಲ್ಲದೆ ಅಂತ ತಿಳಿಕೊಳ್ಳಬೇಕಲ್ಲ ಲಗುಬಗು ನೋಡಿ ಕನ್ನ ಹಾಕಬಹುದಲ್ಲ ಅಂತ ಏನೇನೋ ಮನಸ್ಸಿನಲ್ಲೇ ಮಂಡಿಗೆ ತಿನ್ತಿದ್ರು. ಆ ಮಾತು ಹಂಗಿರಲಿ. ಸಿದ್ಧರಾಮಯ್ಯ ಆಡಿದ ಮಾತಿಗೆ ಮುಖ್ಯಮಂತ್ರಿ ಯಡ್ಯೂರಪ್ಪನವರು ಕೆಂಡಮಂಡಲ ಆದ್ರು. ಹಿಂಗಿಂಗೆ ಇಷ್ಟಿಷ್ಟು ಹಣ ಬೊಕ್ಕಸದಲ್ಲಿ ಹರೀತಾ ಬದ್ದದೆ, ಅಜ್ಞಾನಿಗಳು ವಿಷಯ ತಿಳಿದುಕೊಳ್ಳದೆ ಹೀಗೆ ಆಡ್ತಾ ಕುಂತವ್ರೆ ಅಂತಾವ ಮಾಧ್ಯಮದ ಎದುರು ತಮ್ಮ ಪಂಚಾಂಗ ಒದರಿದರಂತೆ.

ಅಂದರೇನಾಯ್ತು, ಬೊಕ್ಕಸದಲ್ಲಿ ಹಣ ಅನ್ನೋದು ಯದ್ವಾತದ್ವಾ ತುಂಬಿ ತುಳುಕ್ತಾ ಬಿದ್ದಿದೆ ಅಂದ ಹಾಗಾಯ್ತು. ಹಂಗಿದ್ರೂವೆ ಸಾವಿರಾರು ಹೈಸ್ಕೂಲು ಮೇಷ್ಟ್ರುಗಳಿಗೆ ಆರು ತಿಂಗಳಿನಿಂದ ಸಂಬಳಾನೆ ಕೊಟ್ಟಿಲ್ಲವಂತೆ. ಏನಿದರ ಮರ್ಮ ಅಂದರೆ ಕೆಲವರು ದುಡ್ಡಿದ್ರೂ ಖಾಲಿ ಜೇಬು ಇರೋ ಹಂಗೆ ಆಡ್ತಾರಲ್ಲ ಹಂಗೆ ಎಲ್ಲೋ ಈ ಸರ್ಕಾರಾನೂ ಇರಬೇಕು. ಜಿಪುಣತನ ಮಾಡ್ತಾ ಸಂಬಳ ಕೊಡದೆ ಕುಂತಿರಬೇಕು! ಮೇಷ್ಟ್ರುಗಳ ಹತ್ತಿರ ಏನೋ ಹಿಂಗೆ ಜಿಪುಣತನ ತೋರುಸ್ಲಿ, ನೆರೆ ಹಾವಳಿ ಬಂದು ಅಯ್ಯೋ ಶಿವನೆ ಅಂತ ಗೋಳಾಡ್ತಿದ್ದ ಉತ್ತರ ಕರ್ನಾಟಕದ ಜನಕ್ಕೂ ಹಿಂಗೇ ಮಾಡಿದ್ದರಂತಲ್ಲ ಈ ಹಾಳು ಬಸ್ತಿ ಸರ್ಕಾರ. ಪರಿಹಾರ ಅಂತ ಐದು ಸಾವಿರ ರೂಪಾಯಿ ಚೆಕ್ಕು ಕೊಡ್ತಲ್ಲಾ ಸರ್ಕಾರ ಅನ್ನೋದು ಅದು ಕ್ಯಾಸ ಮಾಡ್ಕಾನ ಅಂತ ಬ್ಯಾಂಕಿಗೆ ಹೋದ್ರೆ 'ದುಡ್ಡಿಲ್ಲ' ಅಂತ ರೊಯ್ಯನೆ ಚೆಕ್ಕ ಮೊಕದ ಮೇಲೆ ಎಸದರಂತಲ್ಲಾ...

ಇದನ್ನೆಲ್ಲ ನೋಡ್ತಿದ್ದ ಕೇಳ್ತಿದ್ದ ಆ ಇಬ್ಬರು ಕಳ್ಳರಿದ್ದಾರಲ್ಲ ಅವರು ಯಡ್ಯೂರಪ್ಪನ್ನ ನೋಡಿದ್ರೆ ದುಡ್ಡಿಗೆ ಬರ ಇಲ್ಲ ಅಂತವ್ನೆ, ಬ್ಯಾಂಕ್ನೋರು ನೋಡಿದ್ರೆ ಬಿಡಿಗಾಸೂ ಇಲ್ಲ ಅಂತ ತಾರಮ್ಮಯ್ಯ ಆಡ್ತಾ ಅವ್ರೆ. ಹಂಗಾರೆ ಸರ್ಕಾರ ಬೊಕ್ಕಸ ಅನ್ನೋದು ಬ್ಯಾರೆ ಎಲ್ಲೋ ಅದೆ ಅನ್ನೋದ ಅರಿತುಕೊಂಡರಂತೆ. ಅದೆಲ್ಲದೆ ಅಂತಾವ ತಲೆ ಓಡಿಸ್ತಿರಬೇಕಾದರೆ....

ಪರಿಶುದ್ಧ ಚಾರಿತ್ಯ ಉಳ್ಳವರಂಥಾ ಡಿ.ವಿ. ಸದಾನಂದಗೌಡ ಉರುಫ್ ಹಲ್ಮುಖಿ ಗೌಡರ ಮನೆಯಲ್ಲಿ ಯಾರೋ ನಮ್ಮ ಅಣ್ಣ ತಮ್ಮದಿರೇ ಇರಬೇಕು.... ಕಳ್ಳತನ ಮಾಡಿದ್ರಂತೆ. ಐದು ಲಕ್ಷ ರೂಪಾಯಿ ಹಣ ಅಲ್ಲದೆ ಒಂದು ಕೆಜಿಗೂ ಅಧಿಕವಾದ ಚಿನ್ನದ ಒಡವೆಗಳನ್ನು ಸೂಟ್‌ಕೇಸುಗಳಲ್ಲಿ ತುರುಕಿದ್ರಂತೆ. ನಮ್ಮ ಕುಲಬಾಂಧವರೇನು ಮಾಡಿದರಪ್ಪ ಅಂದರೆ ಸೂಟ್‌ಕೇಸುಗಳನ್ನು ಹೊತ್ಕಂಡು ನಡುದ್ರಂತೆ... ಹಂಗಾರೆ ಸರ್ಕಾರದ ಬೊಕ್ಕಸ ರಾಜಕಾರಣಿಗಳ ಮನೇಲಿದೆ ಎಂದು ತರ್ಕಿಸುತ್ತಿದ್ದರಂತೆ.... ರಾಮರಾಮಾ!

ಮಾತೂಂದ್ರೆ ಮಾತು

ಅದೇನ್ ನಾಲಿಗೆಯೋ ಎಕ್ಕಡವ್ರೋ ಪದೇಪದೇ ಬದಲಾಯಿಸಕ್ಕೆ ಉಹುಂ. ಯಾವುದೇ ಕಾರಣಕ್ಕೂ ಬದಲಾಯಿಸುತ್ತಿರಲಿಲ್ಲ. ಎಲುಬಿಲ್ಲದ ನಾಲಿಗೆ ಅಂತಾವ ಎತ್ತೆತ್ತಾಗೋ ತಿರುಗೋಕೆ ಬಿಡ್ತಿರಲಿಲ್ಲ. ಯಾರು ಅಂತೀರಾ ತಾಯಿ ನಮ್ ಯಡ್ಯೂರಪ್ಪನವರು... ಅರೆ ಯಾವ್ಯಡೂರಪ್ಪನೂ ಅವ್ನ ಅಂತೀರಲ್ಲ ತಾಯಿ..... ಅದೇ ನಮ್ಮ ಮುಖ್ಯಮಂತ್ರಿಗೋಳು.

'ಅದೇನ್ ಮಾತೂಂತ ಆಡಿ ತಗೀಮುಗ. ನಾವ್ಯಾಣ್ವ ಯಡ್ಯೂರಿಯ' ಅಂತ ಸಿಡುಕು ಮಾಡಬ್ಯಾಡಿ, ಮೂಗು ಮುರಿಬ್ಯಾಡಿ ಕಣವ್ವ... ಅವರಂಗೇಯ. ಬಲೇ ಕಟ್ಟುನಿಟ್ಟು. ಇವತ್ತೇಳಿದ ಮಾತ ನಾಳೀಕೂ ಆಡ್ತಾರೆ... ನಾಡಿದ್ದೂ ಆಡ್ತಾರೆ..... ಕಾಲಕಾಲಕ್ಕೂ ಅದೇ ಮಾತ ಆಡ್ತಾರೆ.

ನಗಾಡಬ್ಯಾಡಿ. ನಕ್ಸಾಟಕ್ಕೇಳ್ತಿಲ್ಲ ಈ ಮಾತ. ನೋಡ್ರವ್ವ ಕಿರಿಸ್ತಾನರ ದೇವರವನಲ್ಲ ಅದೇ ಚರ್ಚು ಆದರ ಮೇಲೆ ಅವರ ಕಾಲ್ದಲ್ಲಿ ದಾಳಿ ನಡೀತಾನೆ ಅದೆ. ಒಂದೊಂದು ಸಲ ಹಿಂಗೆ ಆದಾಗ್ಲೂ ಅವರೇನಂತಾರೆ... 'ತಪ್ಪಿತಸ್ತರಿಗೆ ಸಿಕ್ಷೆ ಕೊಡುಸ್ತೀನಿ' ಅಂತಾರೆ. 'ದುಸ್ಕರ್ಮಿಗಳನ್ನ ಸದೆ ಬಡೀತೀನಿ' ಅಂತಾರೆ ಅಲ್ವಾ. ಮೊದಲೂ ಹಂಗೇ ಹೇಳಿದ್ರು, ಈಗಲೂ ಹಂಗೇ ಹೇಳ್ತವ್ರೆ..... ಮುಂದ್ಕೂ ಅದೇ ಮಾತಂತಾರೆ. 'ಯಾರಿಗೆ ಸಿಕ್ಷೆ ಆಗಿದ್ದಾತು' ಅನ್ಬ್ಯಾಡಿ ಕಣ್ರಮ್ಮ. ಸಿಕ್ಷೆ ಆಗೋದು ಅಲಾಯಿದ. ಮಾತು ಅದಲ್ಲ ಆ ಮಾತ ಬದಲಾಯಿಸಲಿಲ್ವೋ....

ಕರೆಂಟ್ ಇಲ್ಲ ಅಂತೀರವ್ವ. ಕರಂಟೇನು ಅವರ ಮನೇಲಿ ಬಿದ್ದಿದ್ದಾತಾ ತಗೊಂಡೋಗ್ರವ್ವ ಅತ್ಲಾಗಿ ಅನ್ನಾಕೆ. ಹೋಗ್ಲಿ ಮಂತ್ರ ದಂಡ ಐತಾ 'ಛೂ ಮಂತ್ರಗಾಳಿ' ಅಂತ ಕೋಲ ಮೂರು ಸುತ್ತು ಸುತ್ತಿ ಕರೆಂಟ್ ಬರ್ಸಾಕೆ. ಎಲ್ಲಿ ಕರೆಂಟ್ ಅದೆ ಅಂತಾವ ಅಲ್ಲಿ ಇಲ್ಲಿ ತಡುಕ್ತಾ ಅವ್ರೆ. ಈಸ್ವರಪ್ಪನವರು ಕರೆಂಟ್ ಮಂತ್ರಿ ಆಗಿದ್ರಲ್ಲಾ... ಅವರು ಆಗ ಹೇಳಿದ್ದ ಮಾತ ಹಂಗೇನೇನ್ನಳಿ..... ಇಸ್ಕೂಲುಡ್ರುಗೆಲ್ಲ ಅನುಕೂಲ ಆಗ್ಲಿ ಅಂತ ಪರೀಕ್ಷೆ ಕಾಲ್ದಲಿ ರಾತ್ರಿ ಹೊತ್ತು ಕರೆಂಟ್ ತಗಿಯಾಕಿಲ್ಲ ಅಂತಿದ್ರಲ್ವಾ.... ಯಾಕೆ ಹಂಗಂತಿದ್ರು... ಉಡ್ರು ಮುಂದು ಬರ್ಲಿ ಅಂತಾವ ಅವರು ಹಂಗೇಳ್ತಾನೆ ಇದ್ರು. ಆದ್ರೆ ಆನ್ಮಾಡೀರಿ ತಾಯಿ ಕರೆಂಟ್ ಕೊಡ್ಬೇಕು



ಅನ್ನೋ ಅಷ್ಟರಲ್ಲಿ ಅವರು ಪಾರ್ಟಿ ಅಧ್ಯಕ್ಷರಾಗೋದ್ರು. ಮಂತ್ರಿಗಿರಿ ಕೈಬಿಟ್ಹೋಯ್ತು. ಮುಖ್ಯಮಂತ್ರೀನೆ ಕರೆಂಟ್ ಮಂತ್ರೀನೂ ಆದ್ರು. ಯಡ್ಯೂರಪ್ಪನೋರು ಶ್ಯಾನೆ ದೊಡ್ಡ ಮನುಸ್ರು ನೋಡಿ. ಆಹಾ ಈಸ್ವರಪ್ಪ ಹಿಂಗಿಂಗೇಳವ್ರೆ ಅವರಿಗೆ ಮೋಸ ಮಾಡಬಾರದು, ಅವರ ಮಾತ ಕಿತ್ತಾಕಿದ್ರೆ ನಾನು ಮನುಸ್ನಾದೇನ ಅಂತಾವ... 'ಸ್ಕೂಲುಡ್ರುಗೆ ಅನುಕೂಲ ಆಗಲಿ ಅಂತ ಪರೀಕ್ಷೆ ಕಾಲ್ದಲಿ ರಾತ್ರಿ ಹೊತ್ತು ಕರೆಂಟ್ ತಗಿಯಾಕಿಲ್ಲ' ಅಂತ ಅವರಂಗೇ ಹೇಳ್ತಾ ಇಲ್ವುವ್ರಾ.... 'ಹಂಗೆ ಹೇಳ್ತಾನೆ ಕುಂತಿರ್ಲಿ, ಪರೀಕ್ಷೆ ಬಂದೂ ಆಯ್ತದೆ, ಹೋಗೂ ಆಯ್ತದೆ' ಅಂತಾವ ಕೊಸರು ಬ್ಯಾಡಿಕನ್ರವ್ವಾ.... ಈಸ್ವರಪ್ಪ ಹೇಳಿದ್ನೇ ಯಡ್ಯೂರಪ್ಪನೂ ಹೇಳ್ತಾ ಇಲ್ವಾ.... ಮ್ಯಾಕೇಳಯ್ಯ ಕಂಡಿದ್ದೀವಿ ಸಗಣಿ ನೀರು ಹಾಕ್ಬೇಕು ಅಂತಿದ್ದೀರಾ.....

ಆ ದಿನಗಳೆಲ್ಲಿ ಹೋದವು?

ಇದೇನಯ್ಯ ಇದು.... ಮುಂಬಯಿ ಮರಾಠಿಗರಿಗೆ ಮಾತ್ರ. ಉಳಿದವರು ತಟ್ಟೆ ಚೆಂಬು ಹಿಡ್ಕಂಡು ನಡೀತಿರಬೇಕು ಎಂದು ಠಾಕ್ರೆ ಸಾಹೇಬರು ಆಡ್ರು ಮಾಡಿ ಸುವೆ; ಇವರಪ್ಪನ್ದ ಮುಂಬಯಿ ಅನ್ನೊ ವರಸೇಲೀ ಉಬಾಯಿಸಿ ಮಾತನಾಡಿದ 'ಇಟಲಿಯ ಮಮ್ಮಿ' ಮುಂಬಯಿಗೆ ಕಾಲಿಡಕೂಡದು ಎಂದು ಆಡ್ರು ಮಾಡಿ ದ್ರೂವೆ; ಮುಂಬಯಿಗೆ ಬಂದೇಬಿಟ್ನಲ್ಲ ಲೋಕಲ್ ಟ್ರೈನಿನಲ್ಲಿ ಓಡಾಡೆಬಿಟ್ನಲ್ಲ.. ಏನು ಕಿತ್ಕೊಂಡ್ರಿ ನನ್ತಾವ ಅನ್ನೋ ಹಂಗೆ ಆಡ್ತಾ ಬಿದ್ದವನಲ್ಲ ಆ ಬಚ್ಚ ಅವ್ನನ್ಗೆ 'ಸಮನಾ'ದಲ್ಲಿ ಹೆಂಗೆ ಶ್ರಾದ್ಧ ಮಾಡಬೇಕು ಅನ್ನೊ ಚಿಂತೇಲಿ ಮುಳುಗಿರುವಾಗ....

ಇನ್ನೊಂದು ಸೋಜಿಗ ನಡೆದೇ ಹೋಯ್ತು. ಐಪಿಎಲ್ ಎಂಬ ಮಹಾಯಜ್ಞದಲ್ಲಿ ಮ್ಲೇಚ್ಛರಿಗೆ ಅವಕಾಶವಿಲ್ಲವೆಂದು ಪಾಕಿಸ್ತಾನಿ ಆಟಗಾರರನ್ನು ಹೊರಗೆ ಇಟ್ಟಿದ್ದು ಸರಿಯಷ್ಟೆ. ಇದರಿಂದ ಅಸಮಾಧಾನ ಗೊಂಡಿದ್ದ ಶಾರುಖಾನ್ ಎಂಬ ಸಾಬಿ ಯೋರ್ವ ಹೀಗೆ ಸೇರಿಸಿಕೊಳ್ಳದಿರು ವುದು ಅಪರಾಧ ಎಂದು ಹೇಳಿಕೆ ನೀಡಲಾಗಿ... ಇದರಿಂದ ಕೆರಳಿದ ಮುಂಬಯಿಯ ಹುಲಿ ಆ ಕ್ಷುದ್ರ ಜಂತುವಿನ 'ಮೈ ನೇಮ್ ಈಸ್ ಖಾನ್' ಚಿತ್ರ ಪ್ರದರ್ಶನ ಮಾಡ ಲಾಗದು ಎಂದು ಫರ್ಮಾನು ಹೊರಡಿಸಿದ್ದರೂ... ಅದ್ದೂರಿಯ ಪ್ರದರ್ಶನ ಕಂಡಿತಲ್ಲಾ... ಆಹಾ ಆ ದಿನಗಳೆಲ್ಲಿ ಹೋದವು... ಸಿನಿಮಾ ಪ್ರದರ್ಶನ ಕೂಡದು ಎಂದು ಗುಟುರು ಹಾಕಿದರೆ ಸಾಕು..... ಸಂಬಂಧಿಸಿ ದವರೆಲ್ಲ ಓಡೋಡಿ ಬಂದು ಯಾವ ಅಪರಾಧ ಮಾಡದಿದ್ದರೂ 'ತಪ್ಪಾಯ್ತು' ಎಂದು ಕ್ಷಮೆ ಯಾಚಿಸಿ ದಯಾ ಭಿಕ್ಷೆ ಬೇಡಿ 'ತಪ್ಪು ಕಾಣಿಕೆ' ಒಪ್ಪಿಸು ತ್ತಿದ್ದರಲ್ಲಾ... ಈಗ ನೋಡಿದರೆ ಬಾಲಿವುಡ್‌ಗೆ ಬಾಲಿವುಡ್ಡೇ ತಿರುಗಿಬಿದ್ದಿದೆಯಲ್ಲಾ..... ಶಿವಸೇನೆಯೊತ್ತಟ್ಟಿಗಿರಲಿ ತಮ್ಮ ಮಗನ ರಾಜಕೀಯ ಭವಿಷ್ಯವೇನು ಎಂದು ಮುದಿಸಿಂಹ ಇಲ್ಲದ ಹಲ್ಲುಗಳನ್ನು ಕಟಕಟ ಅಂತ ಕಡಿಯಲೆತ್ನಿಸುತ್ತಿತ್ತಂತೆ....

ಹಂಪಿ ವಿವಿ ಭೂಮಿಗೇ ಕೈ ಹಾಕಿದ ಕೋಮುವಾದಿಗಳು

ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾನಿಲಯದ ಉಪಯೋಗಕ್ಕೆ ಹಾಗೂ ಚಟುವಟಿಕೆಗಳ ವಿಸ್ತರಣೆಗೆ ಹಿಂದೆ ಸರಕಾರವು ನೀಡಿದ್ದ 700 ಎಕರೆ ಭೂಮಿಯಿಂದ 80 ಎಕರೆಯನ್ನು ಕತ್ತರಿಸಿ ಕೃಷ್ಣದೇವರಾಯರ ಹೆಸರಿನಲ್ಲಿ ರಚಿಸಲಾದ ಯಾವುದೋ ... ಟ್ರಸ್ಟಿಗೆ ಕೊಡಲು ಸರ್ಕಾರ ಮುಂದಾಗಿರುವುದು ಖಂಡನಾರ್ಹ.

ಕೃಷ್ಣದೇವರಾಯರ ಪಟ್ಟಾಭಿಷೇಕದ 500ನೇ ವರ್ಷದ ಉತ್ಸವಕ್ಕೆಂದು ಸರ್ಕಾರದ ಬೊಕ್ಕಸದಿಂದ 13 ಕೋಟಿ ರೂ.ಗಳನ್ನು ವೆಚ್ಚ ಮಾಡುವುದಾಗಿ ಈಗಿನ ಸರಕಾರ ಘೋಷಿಸಿತ್ತು, ಅದೇ ಅನಗತ್ಯ ಎಂದು ಟೀಕೆಗಳು ಬಂದಿದ್ದರೂ ಆ ಸಮಾರಂಭಕ್ಕೆ ನಿಜವಾಗಿ 75 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಈಗ ಬಯಲಾಗಿದೆ. ಇದು ಸರ್ಕಾರಿ ಬೊಕ್ಕಸವನ್ನು ದೋಚುವ, ಯಾವುದೋ ಅನ್ಯ ಉದ್ದೇಶಕ್ಕೆ ಬಳಕೆ ಮಾಡುವ ದುರ್ವ್ಯವಹಾರವೆಂದೇ ಹೇಳಬೇಕಾಗುತ್ತದೆ. ಅದರ ನಡುವೆ ಹಂಪಿಯಲ್ಲೇ ಇರುವ ವಿಶ್ವವಿದ್ಯಾನಿಲಯದ ಆಸ್ತಿಯನ್ನು ಸಹ ಕಬಳಿಸಲು ಸರ್ಕಾರ ಹೊರಟಿರುವುದು ತೀರಾ ಆಕ್ಷೇಪಾರ್ಹವಾಗಿದೆ.

ಹೊಗಳಿಕೆ ತೆಗಳಿಕೆ

ಇತ್ತೀಚೆಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಅಲ್ಲಿ ನೆರೆದಿದ್ದ ವಿಚಾರವಂತ ಸಾಹಿತಿಗಳು ಈ ದುರ್ವ್ಯವಹಾರವನ್ನು ಖಂಡಿಸಿರುವುದು ವರದಿಯಾಗಿದೆ. ರಾಜ್ಯದ ಯಾವ ವಿ.ವಿ.ಯಾಗಲಿ, ಅನುದಾನಿತ ಭೂಮಿ ಹೊಂದಿರುವ ಸಂಸ್ಥೆಯಾಗಲಿ, ಇಂತಹ ಕಬಳಿಕೆಗೆ ಸರ್ಕಾರ ಕೈ ಹಾಕಬಾರದು ಎಂದು ಈಗಾಗಲೆ ಒತ್ತಾಯ ಬರಲು ಆರಂಭವಾಗಿದೆ. ಆದುದರಿಂದ ಈ ವ್ಯವಹಾರವನ್ನು ಈಗಿಂದೀಗಲೇ ಬಿಡಬೇಕೆಂದು ರಾಜ್ಯಸರಕಾರವನ್ನು ಒಬ್ಬ ಸ್ವಾತಂತ್ರ್ಯ ಚಳವಳಿಯ ಹೋರಾಟಗಾರ ಮತ್ತು ಪ್ರಜ್ಞಾವಂತ ನಾಗರಿಕನೆಂಬ ನೆಲೆಯಲ್ಲಿ ನಾನು ಒತ್ತಾಯಿಸುತ್ತೇನೆ.

- ಬಿ.ವಿ.ಕಕ್ಕಿಲಾಯ.

"ಕರಾವಳಿ ಅಲೆ ಸೀತಾರಾಂ ಕೆಡವಲು ದುಷ್ಟರ ಪಿತೂರಿ" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಲೇಖನವನ್ನೊಳಗೊಂಡ ಫೆಬ್ರವರಿ 10ರ 'ಲಂಕೇಶ್' ಸಂಚಿಕೆಯನ್ನು ಓದಿದ ನಂತರ ಈ ಪತ್ರ ಬರೆಯಬೇಕೆನ್ನಿಸಿತು.

"ಕರ್ನಾಟಕ ಕರಾವಳಿಯಲ್ಲಿ 'ಜನಪರ ಮತ್ತು ಜನವಿರೋಧಿ ಜರ್ನಲಿಸಂ' ಎಂದು ವಿಭಜಿಸಲ್ಪಟ್ಟಿದೆ" ಎಂದು ನಿಮ್ಮ ಲೇಖನ ಇಲ್ಲಿನ ಪರಿಸ್ಥಿತಿಯನ್ನು ಸರಿಯಾಗಿಯೇ ಗುರುತಿಸಿದೆ. ನಾನು 'ಕರಾವಳಿ ಅಲೆ' ಪತ್ರಿಕೆಯನ್ನು ಕಳೆದೆಂಟು ವರ್ಷಗಳಿಂದ ಓದುತ್ತಾ ಬರುತ್ತಿರುವ ಹಿನ್ನೆಲೆಯಲ್ಲಿ ಹೇಳುವುದಾದರೆ, ಅದು ಜನಪರ ಪತ್ರಿಕೋದ್ಯಮ ಕೆಟಗೆರಿಗೆ ಸೇರಿದ್ದು ಎಂಬುದರಲ್ಲಿ ಎರಡು ಮಾತಿಲ್ಲ. 'ಕರಾವಳಿ ಅಲೆ' ಅನೇಕ ಜನಪರ ಆಂದೋಲನಗಳನ್ನು ಸ್ವಯಂ ಮುನ್ನಡೆಸಿದೆ. ಜೀವನಾಶೀ ಎಂಆರ್‌ಪಿಎಲ್, ನಾಗಾರ್ಜುನ ಮತ್ತು ಸೆರ್ಝು ವಿರೋಧಿ ಸೆಂಟಿಮೆಂಟನ್ನು ಜೀವಂತವಾಗಿಟ್ಟಿದ್ದು 'ಕರಾವಳಿ ಅಲೆ'. ದಲಿತರು, ಮೀನುಗಾರರು, ಕುಡುಬಿ ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಿಗೆ ಧ್ವನಿಯಾಗಿ ಅದು ನೀಡಿರುವ ಕೊಡುಗೆ ಅನನ್ಯ. ಕೋಮು ಸೌಹಾರ್ದ ವೇದಿಕೆ, ಪಿಯುಸಿಎಲ್ ಮತ್ತು ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಶನಲ್‌ದಂಥ ಸಂಘಟನೆಗಳ ಜತೆ 'ಕರಾವಳಿ ಅಲೆ' ಕೆಲಸ ಮಾಡುತ್ತಿದೆ. ಕರಾವಳಿಯಲ್ಲಿ ಅಮಾಯಕರ ಮೇಲೆ ಪೊಲೀಸ್ ದೌರ್ಜನ್ಯ ಪ್ರಕರಣಗಳನ್ನು ಹೈಲೈಟ್ ಮಾಡುತ್ತಿರುವುದು 'ಕರಾವಳಿ ಅಲೆ' ಮಾತ್ರ. ಆಷಾಢಭೂತಿ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳನ್ನು ಸಾಕಷ್ಟು ಬಾರಿ ಬಟ್ಟೆ ಬಿಚ್ಚಿಸಿ ನಿಲ್ಲಿಸಿದೆ. ದ.ಕ. ಮತ್ತು ಉಡುಪಿ ಜಿಲ್ಲೆಗಳಿಂದ ಹೊರಡುವ ಬೇರ್‍ಯಾವ ಪತ್ರಿಕೆಯೂ ಈ ಕೆಲಸ ಮಾಡುತ್ತಿಲ್ಲ ಎಂಬುದನ್ನು ಗಮನಿಸಬೇಕಿದೆ.

"ಮಂಗಳೂರಿನ ಪತ್ರಿಕೋದ್ಯಮಕ್ಕೆ ರೋಚಕತೆಯ, ಮೌಲ್ಯರಹಿತ, ಸೆಕ್ಸ್-ಕ್ರೈಂ ವಿಜೃಂಭಣೆಯ ಸನ್ನಿ ಹಿಡಿಸಿದ್ದರಲ್ಲಿ 'ಕರಾವಳಿ ಅಲೆ' ಪಾತ್ರ ಕಡಿಮೆಯೇನಲ್ಲ" ಎಂಬ ಷರಾವನ್ನು ಪಾರ್ವತೀಶರು ತಮ್ಮ ಬರಹದ ಅಂತ್ಯದಲ್ಲಿ ಪಾಸು ಮಾಡಿರುವುದು 'ಕರಾವಳಿ ಅಲೆ'ಯ ಅಭಿಮಾನಿಗಳಾದ ನಮಗೆ ಸರಿ ತೋರಿಲ್ಲ. ಸೆನ್ಸೇಶನಲಿಸಂ ಯಾವ ಪತ್ರಿಕೆಯಲ್ಲಿ ಇಲ್ಲ ಹೇಳಿ. ಮಾರ್ನಿಂಗ್ ಪತ್ರಿಕೆಗಳಲ್ಲಿ ಇಲ್ಲವೇ? ಟಿವಿ ವಾಹಿನಿಗಳಲ್ಲಿ ಇಲ್ಲವೇ? ನಿಮ್ಮ ಪತ್ರಿಕೆಯಲ್ಲೂ ಇಲ್ಲವೇ? ಅದು ಬಿಡಿ. ಉಳಿದಂತೆ, ಬೇರೆ ಪತ್ರಿಕೆಗಳು 'ಕರಾವಳಿ ಅಲೆ' ಮಾಡುತ್ತಿರುವಂಥ ಜನಜಾಗೃತಿ ಮೂಡಿಸುತ್ತಿವೆಯಾ?

'ಕರಾವಳಿ ಅಲೆ'ಯ ಸೀತಾರಾಂ ತಮ್ಮ ಕನ್‌ವಿಕ್ಷನ್‌ಗಾಗಿ ಒಂದಲ್ಲ ಎರಡು ಬಾರಿ ಜೈಲಿಗೆ ಹೋದರು. (ಆ ಸಂದರ್ಭ ನಿಮ್ಮ ಪತ್ರಿಕೆ ಅವರ ಪರ ನಿಂತಿದ್ದು ಸರಿಯಾಗಿತ್ತು) ಸೀತಾರಾಂ ಬಂಧನವನ್ನು 'ಅಕ್ರಮ' ಎಂದು ಸಾರಿದ್ದೇ ಸರಕಾರದ 'ಕರಾವಳಿ ಅಲೆ' ವಿರೋಧಿ ನೀತಿಗೆ ಪುರಾವೆ. ಮಾಜಿ ಹೈಕೋರ್ಟ್ ಜಡ್ಜ್ ಎಂ.ಎಫ್.ಸಾಲ್ಡಾನಾ ಅಧ್ಯಕ್ಷರಾಗಿರುವ ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಶನಲ್ ಕೂಡ ಕರಾವಳಿ ಕರ್ನಾಟಕದಲ್ಲಿ ಕಮ್ಯೂನಲೀಕರಣ ವಿರುದ್ಧ 'ಕರಾವಳಿ ಅಲೆ' ಅಭಿಯಾನವನ್ನು ಅಧಿಕೃತವಾಗಿ ಗುರುತಿಸಿರುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ. ಸೀತಾರಾಂ ಮತ್ತು ರಾಜ್ಯದಲ್ಲಿ ಇತರ ಪತ್ರಕರ್ತರಿಗೆ ಹೋಲಿಕೆಯೆಂದರೆ ಇತರರಂತೆ ಸೀತಾರಾಂ ಇಲ್ಲ ಎಂಬುದು. ಅವರು ಸತ್ಯ ಮತ್ತು ನ್ಯಾಯ ಪಕ್ಷಪಾತಿ, ಕೋಮುವಾದಿ-ಜಾತಿವಾದಿ ಅಲ್ಲ. ಈ ಸಂಗತಿ ಗಮನಿಸಬೇಕು.

- ಅಕ್ಕೆಸಾಬು, ಕೆ ಎಸ್ ರಾವ್ ರಸ್ತೆ ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

'ಆಪ್ತರಕ್ಷಕ'ನಿಗೆ ಅದ್ದೂರಿ ಸ್ವಾಗತ

ನಿರೀಕ್ಷೆ ನಿಜವಾಗಿದೆ....!

'ಆಪ್ತರಕ್ಷಕ' ಈ ವರ್ಷದ ಹಿಟ್ ಚಿತ್ರಗಳಲ್ಲಿ ಒಂದಾಗಲಿದೆ ಎಂಬುದು ...ಧ್ಯಮದ ನಂಬುಗೆಯಾಗಿತ್ತು, ಅದರಂತೆಯೇ ಆ ಚಿತ್ರ ಬಿಡುಗಡೆಯಾದ ...ದೇ ವಾರಕ್ಕೆ ನಾಲ್ಕು ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿ ದಾಖಲೆ ...ರ್ಮಿಸಿದೆ.



ಬಿಡುಗಡೆಯಾದ ಮೂರೇ ದಿನಕ್ಕೆ ಈ ಚಿತ್ರದ ಗಳಿಕೆ ...35 ಕೋಟಿ. ಅಂದರೆ 'ರಾಜ್' ಚಿತ್ರದ ಆರಂಭಿಕ ಕಲೆಕ್ಷನ್ನೂ ...ಪ್ತರಕ್ಷಕ' ಮೀರಿಸಿದ್ದಾನೆ. ಈಗ ಒಂದು ವಾರಕ್ಕೆ ಬಿಡುಗಡೆ ...ಾದ ಎಲ್ಲ ಕೇಂದ್ರಗಳಿಂದ 4 ಕೋಟಿಗೂ ಅಧಿಕವಾದ ...ಲೆಕ್ಷನ್ ಬಂದಿದೆ. 'ರಾಜ್' ಚಿತ್ರ ಆರಂಭದ ಐದು ದಿನಗಳಲ್ಲಿ ... ಲಕ್ಷ ರೂಪಾಯಿಗಳನ್ನು ಗಳಿಸಿದ್ದರೆ ಬೆಂಗಳೂರಿನ 30 ...ಮೇಟರ್‌ಗಳೂ ಸೇರಿದಂತೆ, ರಾಜ್ಯಾದ್ಯಂತ 73 ಥಿಯೇಟರ್ ...ಲ್ಲಿ 'ಆಪ್ತರಕ್ಷಕ' ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ.

ಇದೇ ವೇಗದಲ್ಲಿ ಐವತ್ತು ದಿನ ಪೂರೈಸಿದರೂ ...ರ್ಮಾಪಕನಿಗೆ ಏನಿಲ್ಲವೆಂದರೂ ಇಪ್ಪತ್ತು ಕೋಟಿಯ ನಿವ್ವಳ ಲಾಭ ಸೇರಲಿದೆ. ...ನ್ನು ನೂರು ದಿನ ಓಡಿದರೆ ಮೂವತ್ತರಿಂದ ನಲವತ್ತು ಕೋಟಿಗಳ ದೊಡ್ಡ ...ಭ ನಿರ್ಮಾಪಕ ಕೃಷ್ಣಕುಮಾರ್ ಅಲಿಯಾಸ್ ಕೃಷ್ಣಪ್ರಜ್ವಲ್ ಅವರ ...ಡಿಲು ಸೇರುವುದು ಗ್ಯಾರೆಂಟಿ.

ಅತ್ತ 'ಆಪ್ತರಕ್ಷಕ' ನಿರ್ಮಾಪಕನಿಗೆ ಲಾಭತರುತ್ತಿರುವಾಗಲೇ ...ತ್ತ ವಿಷ್ಣು ಮನೆಯಲ್ಲಿ ಅಸಮಾಧಾನದ ಹೊಗೆ ಎದ್ದಿದೆ.



ನಿರ್ಮಾಪಕನ ವಿರುದ್ಧ ಭಾರತಿ ವಿಷ್ಣುವರ್ಧನ್ ...ವರು ಬಹಿರಂಗವಾಗಿ ಆರೋಪ ಮಾಡುತ್ತಿದ್ದಾರೆ. ...ಷ್ಣು ಹೆಸರನ್ನು ತಮ್ಮ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ...ಷ್ಣಕುಮಾರ್ ನನಗಾಗಲಿ ನನ್ನ ಮನೆಯವರಿಗಾಗಲಿ ...ಜನ್ಯಕ್ಕಾದರೂ ಒಂದು ಪ್ರದರ್ಶನ ಏರ್ಪಡಿಸಿಲ್ಲ" ...ಂದು ಭಾರತಿ ಅವರು ನೋವಿನಿಂದ ಪ್ರತಿಕ್ರಿಯಿಸಿ ...ದ್ದಾರೆ.

ಈಡೇರದ ಕೊನೇ ಬಯಕೆ!

ವಿಷ್ಣುವರ್ಧನ್ ನಾಯಕನಟನಾಗಿ ನಟಿಸಿದ ಮೊದಲ ...ತ್ರ 'ನಾಗರಹಾವು' ಕೆಜಿ ರಸ್ತೆಯ ಸಾಗರ್ ಚಿತ್ರಮಂದಿರ ...ಲ್ಲಿ ಬಿಡುಗಡೆಗೊಂಡಿತ್ತಂತೆ. ಹೀಗಾಗಿ ವಿಷ್ಣು ಅವರಿಗೆ ...ಮ್ಮ ಇನ್ನೂರನೇ ಚಿತ್ರವನ್ನೂ ಸಾಗರ್ ಥಿಯೇಟರಿನಲ್ಲೇ ...ಲೀಸ್ ಮಾಡಿಸಬೇಕು ಎಂಬ ಸೆಂಟಿಮೆಂಟ್ ಇತ್ತಂತೆ. ...ದರೆ ಸಾಗರ್‌ನಲ್ಲಿ ಬಿಡುಗಡೆ ಮಾಡಲು ಯಾವ ...ಯತ್ನವನ್ನೂ ಮಾಡದ ಕೃಷ್ಣಕುಮಾರ್ ಸರಿಯಾದ ...ಳಿ, ಬೆಳಕಿಲ್ಲದ 'ನರ್ತಕಿ' ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿರುವುದು ಕೂಡಾ ವಿಷ್ಣು ಕುಟುಂಬಕ್ಕೆ ಬೇಸರ ಉಂಟುಮಾಡಿದೆ.

ಎರಡು ನಿಮಿಷದ ಕ್ಲೈಮ್ಯಾಕ್ಸ್ ಸೇರ್ಪಡೆ!

ಹಲವಾರು ಅಸಮಾಧಾನಗಳ ನಡುವೆಯೂ 'ಆಪ್ತರಕ್ಷಕ' ನಿರೀಕ್ಷೆಗೂ ಮೀರಿ ಯಶಸ್ಸು ಕಾಣುತ್ತಿರುವ ಮಧ್ಯೆ ಚಿತ್ರಕ್ಕೆ ಇನ್ನೆರಡು ನಿಮಿಷದ ಕ್ಲೈಮ್ಯಾಕ್ಸ್ ದೃಶ್ಯಗಳನ್ನು ಸೇರ್ಪಡೆ ಮಾಡಿದ್ದಾರೆ. ಚಿತ್ರದ ಕೊನೆಯಲ್ಲಿ ನೂರ ಇಪ್ಪತ್ತಮೂರು ವರ್ಷದ ವಿಜಯರಾಜ ಬಹದ್ದೂರ್ ಪಾತ್ರದಲ್ಲಿ ವಿಷ್ಣು ರುದ್ರತಾಂಡವ ಮಾಡಿ ಮಳೆ ಬರಿಸುವ ದೃಶ್ಯವೊಂದಿದೆ. ಕ್ಲೈಮ್ಯಾಕ್ಸ್ ತುಂಬ ಉದ್ದ ಆಯ್ತು ಎಂದು ಮೊದಲು ಆ ದೃಶ್ಯವನ್ನು ಸಣ್ಣದಾಗಿ ಕತ್ತರಿಸಿಬಿಟ್ಟಿದ್ದರು. ಆದರೆ ಪ್ರೇಕ್ಷಕರು ಅದೇ ದೃಶ್ಯವನ್ನು ಹೆಚ್ಚು ಎಂಜಾಯ್ ಮಾಡುತ್ತಿರುವುದರಿಂದ ಮತ್ತೆ ಆ ಸೀನ್‌ಗಳನ್ನು ಸೇರಿಸಿದ್ದಾರೆ.

ದಾಖಲೆಗಳ ಮರೀಚಿಕೆ

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ರೆಕಾರ್ಡು ನಿರ್ಮಿಸಲೇಬೇಕಿದ್ದ ಹಲವು ಪ್ರಯತ್ನಗಳು ವಿಫಲವಾಗಿವೆ.

ಡಾ. ರಾಜ್‌ಕುಮಾರ್ ಅಭಿನಯಿಸಿದ್ದ 200ನೇ ಚಿತ್ರದ ಬಗ್ಗೆ ಚಿತ್ರಾಸಕ್ತರಲ್ಲಿ ಅಪಾರವಾದ ನಿರೀಕ್ಷೆಗಳಿದ್ದವು. ಆದರೆ ಆ ನಿರೀಕ್ಷೆಗಳೆಲ್ಲಾ ಹುಸಿಯಾಗಿ 'ದೇವತಾ ಮನುಷ್ಯ' ಅಂತಹ ಯಶಸ್ಸನ್ನು ಕಂಡಿರಲಿಲ್ಲ. "ನಾನು ಮುದುಕನ ಪಾತ್ರದಲ್ಲಿ ನಟಿಸಿದ್ದರಿಂದಲೋ ಏನೋ ಜನ ಈ ಚಿತ್ರವನ್ನು ಸ್ವೀಕರಿಸಲಿಲ್ಲ. ಆದರೆ ಈ ಚಿತ್ರ ಗೆದ್ದಿದ್ದರೆ ನನ್ನಂಥ ಪುಣ್ಯವಂತ ಬೇರೆ ಯಾರೂ ಇರುತ್ತಿರಲಿಲ್ಲ" ಎಂದು ಸ್ವತಃ ಅಣ್ಣಾವ್ರೇ ಬೇಸರದಿಂದ ಹೇಳಿದ್ದರು.

ರೆಬೆಲ್ ಸ್ಟಾರ್ ಅಂಬರೀಶ್ ನಟಿಸಿದ್ದ ನೂರನೇ ಚಿತ್ರ 'ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್' ಚಿತ್ರ ಕೂಡ ಸೂಪರ್ ಹಿಟ್ ಆಗುತ್ತೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ, ಅಂಬರೀಶ್ ವಿಚಾರದಲ್ಲೂ ಅದೃಷ್ಟ ಕೈಕೊಟ್ಟಿದ್ದರಿಂದ ಸಿನಿಮಾ ಫ್ಲಾಪ್ ಆಗಿತ್ತು. ಆದರೆ ವಿಷ್ಣು ವಿಷಯದಲ್ಲಿ 200 ದಾಖಲೆ ಚಿತ್ರ ದಿಗ್ವಿಜಯವಾಗಿದೆ. ವಿಪರ್ಯಾಸವೆಂದರೆ ಈ ಸಂಭ್ರಮ ದಲ್ಲಿ ಪಾಲ್ಗೊಳ್ಳಲು ಅವರೇ ಇಲ್ಲ...

● ಅರುಣ್

ರಕ್ತಚರಿತ

ದಂಡಂ ದಶಗುಣಂ



ಜಸ್ಟ್ ಈಗ ತಾನೇ ಮಾತು ಮುಗಿಸಿರುವ ಕಿಚ್ಚ ಸುದೀಪ್ ಮತ್ತೊಮ್ಮೆ ದೊಡ್ಡ ಸದ್ದು ಮಾಡಲು ರೆಡಿಯಾಗಿದ್ದಾರೆ.

"ಸುದೀಪ್ ನಿರ್ದೇಶನದ ಹೊಸ ಚಿತ್ರ ಇದೇ ತಿಂಗಳು ಮಲ್ಲೇಶ್ವರಂನ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಆರಂಭಗೊಳ್ಳಲಿದೆ" ಎಂಬ ಸುದ್ದಿ ಈಗ ಮಾಧ್ಯಮದ ಎಲ್ಲರಿಗೂ ಗೊತ್ತಾಗಿದೆ. ಆದರೆ ಅಷ್ಟು ಬಿಟ್ಟು ಹೊಸ ಚಿತ್ರದ ಬಗ್ಗೆ ಯಾವ ಮಾಹಿತಿಯೂ ಸುದೀಪ್ ಹೊರಬರಲು ಬಿಟ್ಟಿಲ್ಲ.

ಆದರೆ ಸುದೀಪ್ ಅವರ ಈ ಹೊಸ ಚಿತ್ರದ ಬಗ್ಗೆ ಪತ್ರಿಕೆಗೆ ದೊರೆತ ಖಚಿತ ಮಾಹಿತಿ ಇಲ್ಲಿದೆ:

ಆಂಧ್ರದ ರಕ್ತ ರಾಜಕಾರಣ ಮತ್ತು ಅದರ ಸುತ್ತ ನಡೆದ ಕೊಲೆಗಳನ್ನೇ ಕಥಾವಸ್ತುವಾಗಿಸಿಕೊಂಡು ಹಿಂದಿಯಲ್ಲಿ ರಾಮ್‌ಗೋಪಾಲ್ ವರ್ಮಾ 'ರಕ್ತಚರಿತ' ಎಂಬ ಸಿನೆಮಾವೊಂದನ್ನು ನಿರ್ದೇಶಿಸುತ್ತಿದ್ದಾರೆ. ವಿವೇಕ್ ಒಬೆರಾಯ್, ಸೂರ್ಯ ಮುಂತಾದವರು ನಟಿಸುತ್ತಿರುವ ಈ ಚಿತ್ರದಲ್ಲಿ ಸುದೀಪ್ ಕೂಡಾ ನಟಿಸುತ್ತಿದ್ದಾರೆ. ಈ 'ರಕ್ತಚರಿತ'ದಲ್ಲಿ ಕಿಚ್ಚನದ್ದು ಡಿಸಿಪಿ ಪಾತ್ರ. ಆ ಚಿತ್ರ ಇನ್ನೇನು ತೆರೆಗೆ ಬರಲಿದೆ.

ಈಗ ಸುದೀಪ್ ನಿರ್ದೇಶಿಸುತ್ತಿರುವ ಚಿತ್ರಕ್ಕೂ, 'ರಕ್ತಚರಿತ'ಕ್ಕೂ ಏನು ಸಂಬಂಧ ಎಂದು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ.

ಯಾಕೆಂದರೆ ಅದೇ 'ರಕ್ತಚರಿತ'ದ ಕನ್ನಡ ಅವತರಣಿಕೆಯೇ ಸುದೀಪರ 'ದಂಡಂ ದಶಗುಣಂ' ಆಗಿ ಮೂಡಿಬರಲಿದೆ. ಆದರೆ ಸುದೀಪ್ ಈ ಚಿತ್ರವನ್ನು ಯಥಾವತ್ತು ಕಾಪಿ ಹೊಡೆಯುವ ಬದಲು, 'ರಕ್ತಚರಿತ'ದ ಸ್ಕ್ರಿಪ್ಟ್ ರೈಟರ್ ಆರ್‌ಜಿವಿ ಅವರನ್ನೇ ಕೂರಿಸಿಕೊಂಡು ಇಲ್ಲಿನ ನೇಟಿವಿಟಿಗೆ ತಕ್ಕಂತೆ ಬಹಳಷ್ಟು ಬದಲಾವಣೆಗಳನ್ನು ಮಾಡುತ್ತಿದ್ದಾರೆ.

ಆಂಧ್ರದ ರಕ್ತರಾಜಕಾರಣಕ್ಕೆ ಹೆಸರಾಗಿ ಕಡೆಗೆ ರಾಜಕೀಯ ವೈಷಮ್ಯಕ್ಕೆ ಬಲಿಯಾದ ಪೆರಿಟಾಲ ರವಿಯ ಬದುಕೇ ಈ ಚಿತ್ರದ ಸರಕು. ಹೀಗಾಗಿ ಹಿಂದಿಯಲ್ಲಿ ವಿವೇಕ್ ಒಬೆರಾಯ್ ಮಾಡುತ್ತಿರುವ ಪಾತ್ರವನ್ನು ಇಲ್ಲಿ ಸ್ವತಃ ಸುದೀಪ್ ಅವರೇ ನಿಭಾಯಿಸುತ್ತಿದ್ದಾರೆ. ಲೇಡಿ ಡಿವೈಎಸ್ಪಿ ಪಾತ್ರದಲ್ಲಿ ನಟಿ ನೀತೂ ನಟಿಸಿದರೆ, ಸುದೀಪ್ ತಂದೆಯಾಗಿ ಮಾಜಿ ಹೀರೋ, ಹಾಲಿ ಭರತನಾಟ್ಯ ಪಟು ಶ್ರೀಧರ್ ನಟಿಸುತ್ತಿದ್ದಾರೆ.

ಜಸ್ಟ್ ಅನುಕಂಪದಲ್ಲಿ....

'ಜಸ್ಟ್ ಮಾತ್ ಮಾತಲ್ಲಿ' ಚಿತ್ರದ ಬಗ್ಗೆ ವಿಮರ್ಶಕರು ಮತ್ತು ಕ್ಲಾಸ್ ಪ್ರೇಕ್ಷಕರಿಂದ ಒಳ್ಳೆಯ ಮಾತುಗಳು ಕೇಳಿಬಂದರೂ, ಕಮರ್ಷಿಯಲ್ ಗೆಲುವು ಆ ಚಿತ್ರಕ್ಕೆ ದಕ್ಕಿಲ್ಲ, ಹೀಗಾಗಿ ಆ ಚಿತ್ರದ ನಿರ್ಮಾಪಕ ಶಂಕರೇಗೌಡರಿಗೆ ಏನಿಲ್ಲವೆಂದರೂ ಒಂದು ಕೋಟಿ ರೂಪಾಯಿಗಳ ನಷ್ಟವಾಗುವ ಸಾಧ್ಯತೆಯಿದೆ.

ಇನ್ನು ತೆಲುಗಿನ ಸೂಪರ್ ಹಿಟ್ ಸಿನಿಮಾ 'ಕಿಕ್'ನ ರಿಮೇಕ್‌ನಲ್ಲಿ ಸುದೀಪ್ ನಟಿಸಬೇಕಿತ್ತು, ಆದರೆ ಪಿ.ಎನ್. ಸತ್ಯಾ ನಿರ್ದೇಶನದ ಆ ಚಿತ್ರದ ಬಜೆಟ್ ಜಾಸ್ತಿ ಆಯ್ತು ಎಂದು ನಿರ್ಮಾಪಕ ಎನ್. ಕುಮಾರ್ ಆರಂಭಕ್ಕೆ ಮುನ್ನವೇ ಆ ಯೋಜನೆಯನ್ನು ಡ್ರಾಪ್ ಮಾಡಿದ್ದಾರೆ. ಇದೇ ಸಮಯದಲ್ಲಿ ವರ್ಮಾ ಕೂಡಾ ತಮ್ಮ ಚಿತ್ರದ ರಿಮೇಕ್ ಹಕ್ಕನ್ನು ಸುದೀಪ್‌ಗೆ ನೀಡಿರುವುದರಿಂದ, 'ಕಿಕ್' ಕ್ಯಾನ್ಸಲ್ ಆಗಿ ಸುಮ್ಮನೇ ಕೂರುವುದಕ್ಕಿಂತ ತನ್ನ ಚಿತ್ರದಿಂದ ನಷ್ಟಕ್ಕೀಡಾಗಿರುವ ಶಂಕರೇಗೌಡರಿಂದ ಕಮ್ಮಿ ಸಂಭಾವನೆ ಪಡೆದು, ಅನುಕಂಪದ ಆಧಾರದ ಮೇಲೆ ಈ ಚಿತ್ರದಲ್ಲಿ ನಟಿಸಿ ಸ್ವತಃ ತಾವೇ ನಿರ್ದೇಶಿಸುವುದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಸುದೀಪ್.


'ಎಲ್ಲ ನಿರ್ಮಾಪಕರಿಗೂ ಸುದೀಪ್‌ರಂಥ ನಟ, ನಿರ್ದೇಶಕ ಸಿಕ್ಕುಬಿಟ್ಟರೆ ಯಾರೂ 'ದಂಡಂ ದಶಗುಣಂ' ಅನ್ನುವ ಮಾತೇ ಇರುವುದಿಲ್ಲ...! ●

ಶಿವಣ್ಣನ ದಶಾವತಾರ!

ಕನ್ನಡ ಚಿತ್ರರಂಗದಲ್ಲಿ ಮೊಟ್ಟ ಮೊದಲ ಬಾರಿಗೆ ಅತಿ ಹೆಚ್ಚು ...ಜೆಟ್ಟಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ...ಭಿನಯದ 'ಚೆಲುವೆಯೇ ನಿನ್ನೆ ನೋಡಲು' ಚಿತ್ರ ಆರಂಭಗೊಂಡು ...ರ್ಷ ಕಳೆದರೂ ಇನ್ನೂ 'ದಾಖಲೆ'ಯ ಚಿತ್ರೀಕರಣ ನಡೆಸುತ್ತಲೇ ಇದೆ. ... ಈಗಾಗಲೇ ಪ್ರಪಂಚದ ಆರು ಅದ್ಭುತಗಳಲ್ಲಿ ಚಿತ್ರೀಕರಣಗೊಂಡು ...ನೇ ಅದ್ಭುತವನ್ನು ಸೆರೆ ಹಿಡಿಯಲು ಅಣಿಯಾಗಿರುವ 'ಚೆಲುವೆ' ...ಡ ಅದಕ್ಕೂ ಮುಂಚೆ ಶಿವಣ್ಣನಿಗೆ ಹತ್ತು ವಿಭಿನ್ನ ಗೆಟಪ್‌ಗಳನ್ನು ...ಕಿಸಿ ಒಂದು ಬಿಟ್ ಸಾಂಗ್‌ಅನ್ನು ಚಿತ್ರೀಕರಿಸಿದ್ದಾರೆ.


... ಡಾ. ರಾಜ್ ಅಭಿನಯಿಸಿದ್ದ ಐದು ಸಾಮಾಜಿಕ ಮತ್ತು ಐದು ...ರಾಣಿಕ ಚಿತ್ರದ ಪಾತ್ರಗಳಾದ ವೀರಕೇಸರಿ, ಶ್ರೀನಿವಾಸ ಕಲ್ಯಾಣ, ಭಕ್ತ ...ಹ್ಲಾದ, ಭಕ್ತ ಕುಂಬಾರ, ಚಲಿಸುವ ಮೋಡಗಳು, ಬಂಗಾರದ ...ನುಷ್ಯ, ಹೊಸ ಬೆಳಕು, ಒಂದು ಮುತ್ತಿನ ಕಥೆ ಮತ್ತು ...ರೇಷನ್ ಡೈಮಂಡ್ ರಾಕೆಟ್ ಚಿತ್ರಗಳ ಒಂದೊಂದು ...ಲುಕುಗಳಲ್ಲಿ ಶಿವಣ್ಣ ನಟಿಸಿದ್ದಾರೆ.

... ಹೆಬ್ಬಾಳ ಬಳಿಯಿರುವ ಶಿವಣ್ಣನ ಹೊಸ ಮನೆಯಲ್ಲೇ ...ೀಕರಣ ...ಯು ...ವುದು ...ಲ್ಲೊಂದು ವಿಶೇಷ.



ಮಲೆಯಾಳಂನಲ್ಲೂ 'ಪೃಥ್ವಿ' ಪ್ರದರ್ಶನ!

ಮೊದಲಿನಿಂದಲೂ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟಿಸಿದ ಕನ್ನಡ ಚಿತ್ರಗಳ ಡಬ್ಬಿಂಗ್ ರೈಟ್ಸ್‌ಗೆ ಭಾರೀ ಬೇಡಿಕೆ ಇದ್ದೇ ಇದೆ. ಆದ್ದರಿಂದ ಅವರ ಚಿತ್ರಗಳನ್ನು ಪರಭಾಷೆಗಳಿಗೆ ಡಬ್ ಮಾಡಲು ಅಲ್ಲಿನ ನಿರ್ಮಾಪಕರು ಮತ್ತು ವಿತರಕರು ದುಂಬಾಲು ಬೀಳುತ್ತಾರೆ.



ಈ ಹಿಂದೆ ಪುನೀತ್ ಅಭಿನಯಿಸಿದ್ದ 'ಬಿಂದಾಸ್', 'ಮಿಲನ' ಮುಂತಾದ ಚಿತ್ರಗಳು ಮಲೆಯಾಳಂ ಭಾಷೆಗೆ ಡಬ್ ಆಗಿದ್ದವು. ಆದರೆ ಆ ಚಿತ್ರಗಳು ಕನ್ನಡದ ಮೂಲ ಚಿತ್ರ ಬಿಡುಗಡೆಗೊಂಡು ಹಿಟ್ ಆದ ನಂತರವಷ್ಟೇ ಡಬ್ ಆಗಿದ್ದವು.

ಈ ಬಾರಿ 'ಪೃಥ್ವಿ' ಚಿತ್ರ ಕನ್ನಡದಲ್ಲಿ ಬಿಡುಗಡೆಯಾಗುವ ದಿನವೇ ಅದರ ಮಲೆಯಾಳಂ ವರ್ಷನ್ ಕೂಡಾ ಬಿಡುಗಡೆಗೊಳ್ಳುತ್ತಿದೆ. ತೆಲುಗು, ತಮಿಳು ಚಿತ್ರಗಳ ಸೂಪರ್‌ಸ್ಟಾರ್‌ಗಳು ನಟಿಸಿದ ಚಿತ್ರಗಳು ಮಾತ್ರ ಹೀಗೆ ಪರಭಾಷೆಗಳಿಗೆ ಡಬ್ ಆಗುವುದು ಮಾಮೂಲು. ಆದರೆ ಪುನೀತ್‌ರಂಥ ಕನ್ನಡದ ಯಂಗ್ ಹೀರೋ ಚಿತ್ರ ಹೀಗೆ ಬೇರೆ ರಾಜ್ಯಗಳಲ್ಲೂ ಬೇಡಿಕೆ ಪಡೆದಿರುವುದು ಕನ್ನಡಿಗರಿಗೆ ಹೆಮ್ಮೆ ತರುವಂಥದ್ದಾಗಿದೆ. ●


Regd.No.KA/RNP/BGS/2036/2008-10 Posted at : G.P.O. Bangalore-1. R B P LANKESH, Kannada Weekly Price Rs. 12/- 10 -03-2010 RNI No. KARKAN2003/14048

ಮಾರ್ಚ್ 6-7, 2010 'ಲಂಕೇಶ್ 75' ಕಾರ್ಯಕ್ರಮದಲ್ಲಿ ಬಿಡುಗಡೆ ಆಗಲಿರುವ ಪುಸ್ತಕಗಳು


ನಮ್ಮ ಪ್ರಕಾಶನದ ಎಲ್ಲಾ ಪುಸ್ತಕಗಳು 30% ರಿಯಾಯತಿ ದರದಲ್ಲಿ ಲಭ್ಯವಿರುತ್ತವೆ




ನೀಲು ಕಾವ್ಯ (ಸಂಗ್ರಹ-3)
ಪಿ.ಲಂಕೇಶ್



ಜಿಮ್ ಕಾರ್ಬೆಟ್‌ನ ಶಿಕಾರಿ ಕತೆಗಳು
ಅನುವಾದ: ಟಿ.ಎಸ್.ವಿವೇಕಾನಂದ




ಮನಕೆ ಕಾರಂಜಿಯ ಸ್ಪರ್ಶ
ಪಿ.ಲಂಕೇಶ್




ಆಟ...ಜೂಜು...ಮೋಜು...
ಪಿ.ಲಂಕೇಶ್



ಚಿತ್ರ ಸಮೂಹ
45 ವರ್ಷ ಬರೆದ ಪದ್ಯಗಳು
ಪಿ.ಲಂಕೇಶ್




ಮರೆಯುವ ಮುನ್ನ (ಸಂಗ್ರಹ-2)
ಪಿ.ಲಂಕೇಶ್




ಬಿರುಕು-ನಾಟಕ
ಪಿ.ಲಂಕೇಶ್




ಡಾ.ರಾಮಮನೋಹರ ಲೋಹಿಯಾ ಅವರ
ಜಾತಿ ಪದ್ಧತಿ
ಅನುವಾದ :ಹಸನ್ ನಯೀಂ ಸುರಕೋಡ




ರಾಮಾಯಣ ವಿಷವೃಕ್ಷ
ಅನುವಾದ: ಡಾ.ಬಂಜಗೆರೆ ಜಯಪ್ರಕಾಶ್



ಅರೇಬಿಯನ್ ನೈಟ್ಸ್ ಕತೆಗಳು
ಅನುವಾದ: ಪಂಜು ಗಂಗೊಳ್ಳಿ



ಅರುಂಧತಿ ರಾಯ್ ಅವರ
ಮಿಡತೆ ಗಾನಕ್ಕೆ ಕಿವಿ ಕೊಡುತ್ತಾ
ಅನುವಾದ: ಸುಕನ್ಯಾ ಕನಾರಳ್ಳಿ



ಕಪ್ಪು ಮಲ್ಲಿಗೆ
ಮತ್ತು ಇತರೆ ಅನುವಾದಿತ ಕತೆಗಳು
ಗೌರಿ ಲಂಕೇಶ್



ಸ್ಪರ್ಧಾ ಗೈಡ್ ಇದೀಗ ಮಾರುಕಟ್ಟೆಯಲ್ಲಿ..

KAS ಪೂರ್ವಭಾವಿ ಪರೀಕ್ಷೆಗಾಗಿ....

- 2008ರ ಪ್ರಶ್ನಪತ್ರಿಕೆಗಳು (ಉತ್ತರ ಸಹಿತ)
- ಭಾರತ ಇತಿಹಾಸ, ಆರ್ಥಿಕತೆ, ಸಂವಿಧಾನ, ಸಾ.ಆಡಳಿತ ಹಾಗೂ ವಿಶೇಷ ಮಾಹಿತಿ ಲೇಖನಗಳ

150 ಪುಟಗಳ ವಿಶೇಷಾಂಕ

ಬೆಲೆ ರೂ 30/-

ಎಲ್ಲೆಡೆ ಲಭ್ಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate